ಸಂಪುಟ 24 ಸಂಚಿಕೆ 31-32
ಆಗಸ್ಟ್ 11, 2002 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

# ಐಕ್ಯರಂಗ

http:// www.geocities.com/aikyaranga




# ಎರಗುತಿದೆ ಭೀಕರ ಬರಗಾಲ





## ಕಾಶ್ಮೀರ :
## ಅಮೆರಿಕಾ ಮುಖವಾಡ ಬಯಲು

## ಹಿರಿಯೂರು ಗೋಲಿಬಾರ್

## ಕೃಷ್ಣ-ಕಂಪನಿ ಮಸಲತ್ತು ಅಮಾಯಕರ ಹೆಣ ಬಿತ್ತು








## ನೂರಾರು ಕೋಟಿ ನುಂಗಿದ ಭೂಪರು

ಕಾಂ.ಸೂರಿಯವರಿಗೆ ಶ್ರದ್ಧಾಂಜಲಿ ಸಭೆ:

# ಹೋರಾಟದ ಕಿಚ್ಚು - ಕೊಡುಗೆಗಳ ಉಳಿಸಲು ಪಣ

ಅಂದು ತಾರಿಖು 20-7-2002 ಶನಿವಾರ. ವೇಳೆ - ಸುಮಾರು 6 ಘಂಟೆ ಸಂಜೆ, ಸ್ಥಳ ಕುವೆಂಪು ಕಲಾಕ್ಷೇತ್ರದಲ್ಲಿ - ಸುಮಾರು 6 ದಶಕಗಳಿಗಿಂತಲೂ ಹೆಚ್ಚುಕಾಲ, ತಾವು ನಂಬಿದ್ದ ಮೌಲ್ಯಗಳಿಗಾಗಿ, ಬದ್ದರಾಗಿ ಶ್ರಮಿಸಿ, ಹೋರಾಡಿ, ಹೋರಾಟಗಳಲ್ಲಿ ಅಣಿನೆರೆಸಿ, ನಂಬಿದ್ದ ಮೌಲ್ಯಗಳಿಗೂ ಜೀವನದ ಐಶಾರಾಮತೆಗೂ ಸಮಜಾಯಿಶಿ ಮಾಡಿಕೊಳ್ಳದೆ 1-7-2002ರಂದು ನಿಧನರಾದ ಕಾಂ.ಎಸ್. ಸೂರ್ಯನಾರಾಯಣ ರಾವ್ ರವರಿಗೆ ಸಿಪಿಐ (ಎಂ) ರಾಜ್ಯ ಸಮಿತಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆ.

ಅಂದು ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ಪಕ್ಷದ ನೂತನ ಕಾರ್ಯದರ್ಶಿಯವರಾದ ಜಿ.ಎನ್.ನಾಗರಾಜ್ ವಹಿಸಿದ್ದರು. ಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೆಗೌಡರು, ಕರ್ನಾಟಕದ ರಾಜ್ಯ ಸರ್ಕಾರದ ಸಚಿವ ರಾಮಲಿಂಗಾರೆಡ್ಡಿ, ಮಾಜಿ ವಿಧಾನ ಸಭಾಧ್ಯಕ್ಷ ರಮೇಶ್‌ಕುಮಾರ್, ಕಾರ್ಮಿಕ ನಾಯಕ ಮೈಕೆಲ್ ಫರ್ನಾಂಡೀಸ್, ಸಿಪಿಐನ ರಾಜ್ಯ ಕಾರ್ಯದರ್ಶಿ ಸಿದ್ದನಗೌಡ ಪಾಟೀಲ, ಸಮುದಾಯದ ಪ್ರಸನ್ನ, ಡಾ.ಮರುಳ ಸಿದ್ದಪ್ಪ ಹಾಜರಿದ್ದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಸೂರಿಯವರ 65 ವರ್ಷಗಳ ಹೋರಾಟದ ಜೀವನದ ಬಗ್ಗೆ, ಕಾರ್ಮಿಕ ನಾಯಕನಾಗಿ, ಹಲವಾರು ಹೋರಾಟಗಳನ್ನು ನಡೆಸಿ ಜಯಿಸಿ ಹಲವಾರು ಸಹಸ್ರ ಕಾರ್ಮಿಕ ಜೀವನವನ್ನು ಹಸನಾಗಿಸಿದ ಈ ಪ್ರಕ್ರಿಯೆಯಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ವಿರುದ್ಧ, ಮ್ಯಾನೇಜ್‌ಮೆಂಟ್ ಗೂಂಡಾಗಳ ವಿರುದ್ಧ, ರೌಡಿಗಳ ವಿರುದ್ಧ ಸೆಣೆಸಿದ ದಿಟ್ಟ ಧೀರ ಧೀಮಂತ ವ್ಯಕ್ತಿತ್ವವನ್ನು ಪರಿಚಯಿಸುತ್ತಾ, ಆಗಸ್ಟ್ 24, ಸೂರಿಯವರ ಜನ್ಮದಿನ ಅಂದು, ಅವರ ನೆನಪಿನಲ್ಲಿ ಒಂದು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸ ಬೇಕೆಂಬ




ಅಭಿಲಾಷೆ. ಅದೇ ರೀತಿ ಇಂದು ಕಾರ್ಮಿಕರು ಸಭೆ ಸೇರಲು, ಬೆಂಗಳೂರಿನಲ್ಲಿ ಸರಿಯಾದ ಸ್ಥಳವಿಲ್ಲದ ಪರಿಸ್ಥಿತಿಯಲ್ಲಿ ಕಾರ್ಮಿಕರಿಗೆ ಮುಡುಪಾಗಿ 'ಸೂರಿ ಭವನ' ನಿರ್ಮಿಸುವ ಬಗ್ಗೆ ಆಸೆ ನಿರ್ಧಾರಗಳನ್ನು ವ್ಯಕ್ತಪಡಿಸಿದರು.

ದೇವೆಗೌಡರು ಮಾತನಾಡಿ, ಕಾರ್ಮಿಕ ವರ್ಗದ ಹಿತಕ್ಕಾಗಿ ಸದಾ ಹೋರಾಡುತ್ತಿದ್ದ ಸೂರಿಯವರದ್ದು ಧೀಮಂತ ವ್ಯಕ್ತಿತ್ವ, ಅವರೊಬ್ಬ ಚೈತನ್ಯ ಪುರುಷರು ಎಂದು ತಿಳಿಸಿದರು. ಅವರ ನೆನಪಿನಲ್ಲಿ ಮಾಡುವ ಯಾವುದೇ ಕಾರ್ಯಕ್ರಮದಲ್ಲಿ ಕೈಜೋಡಿಸುವುದಾಗಿ ತಿಳಿಸಿದರು. ಮಾಜಿ ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ಸೂರಿಯವರ ಪ್ರಾಮಾಣಿಕತೆ, ಸ್ಪಷ್ಟತೆ, ಬದ್ಧತೆ ಬಗ್ಗೆ ಮಾತನಾಡಿ ತಮ್ಮ ಕುಟುಂಬದ ಹಿತಾಸಕ್ತಿಯನ್ನು ಬದಿಗೊತ್ತಿ ಶ್ರಮಿಸಿದ ಸೂರಿಯವರನ್ನು ನಾಯಕರೆಂದು ಸಂಭೋಧಿ ಸುವುದಿಲ್ಲ. ಆದರೆ, ಹೋರಾಟವನ್ನೇ ಮಾಡದ, ಮಗನಿಗಾಗಿ, ಮಗಳಿಗಾಗಿ ಅಳಿಯನಿಗಾಗಿ 'ಆಸ್ತಿ' ಕೊಡಿಡುವ ಅನೇಕರನ್ನು ನಾಯಕರೆಂದು ಗುರುತಿಸುತ್ತೇವೆ ಇದು ಜೀವನದ ವಿಪರ್ಯಾಸವೆಂದು ತಿಳಿಸಿದರು.

ಸಚಿವ ರಾಮಲಿಂಗಾರೆಡ್ಡಿಯವರು, ಸೂರಿಯವರ ವ್ಯಕ್ತಿತ್ವದ ಬಗ್ಗೆ ಮಾತನಾಡಿ, ಜಯನಗರದ ಅವರ ಮನೆ ಬಳಿ ಇರುವ East End ರಸ್ತೆಯನ್ನು 'ಸೂರ್ಯನಾರಾಯಣ ರಾವ್ ರಸ್ತೆ' ಎಂದು ನಾಮಕರಣ ಮಾಡುವುದಾಗಿ ತಿಳಿಸಿದರು. ಮುಖ್ಯವಾಗಿ ಪ್ರಸ್ತಾಪಿತ 'ಸೂರಿ ಭವನ'ಕ್ಕೆ ನಿವೇಶನವನ್ನು ಸರ್ಕಾರದಿಂದ ಒದಗಿಸುವುದಾಗಿ ಭಾರೀ ಕರತಾಡನಗಳ ಮಧ್ಯೆ ಪ್ರಕಟಿಸಿದರು. ಸಿದ್ಧನಗೌಡ ಪಾಟೀಲರು ಮಾತನಾಡಿ 15 ದಿನದ ಹಿಂದೆ, ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಬೆಂಗಳೂರಿಗೆ ಬರುವಾಗ ಅವರ ಸ್ವಾಗತದ ಬಗ್ಗೆ ಚರ್ಚಿಸಲು ಬಂದ ಎಸ್.ಸೂರ್ಯನಾರಾಯಣರಾವ್ ಜೊತೆ ಕೈಹಿಡಿದು ಸ್ವಲ್ಪದೂರ ನಡೆದಿದ್ದೆ. ಸಿಪಿಐ ಮತ್ತು ಸಿಪಿಐ(ಎಂ) ಕೈಹಿಡಿದು ಜೊತೆ ಜೊತೆಯಾಗಿ ನಡೆಯುವುದು ಸಾಂಕೇತಿಕವಾಗಬಾರದು ಎಂದು ತಿಳಿಸಿದರು.

ಮೈಕೆಲ್, JAF ನಲ್ಲಿ ಸೂರಿಯವರೊಡನೆ ಮತ್ತು ಕಾರ್ಮಿಕ ಕ್ಷೇತ್ರದಲ್ಲಿ ಒಡನಾಟ, ಅವರೊಡನೆ ಕೆಲಸ ಮಾಡಿದ್ದನ್ನು ಸ್ಮರಿಸಿ, ಕಂಡದ್ದನ್ನು ಕಂಡಂತೆ ಹೇಳುವ ಅವರ ಕೆಚ್ಚೆದೆಯ ಮನೋಭಾವ, ಕೋಮುವಾದಿಗಳ ಬಗ್ಗೆ ಅವರಿಗಿದ್ದ ತಿರಸ್ಕಾರದ ಬಗ್ಗೆ ತಿಳಿಸಿದರು.


ಅಗಲಿದ ನಾಯಕರಿಗೆ 'ಕೆಂಪುವಂದನೆ' ಗೀತೆಯಿಂದ ಪ್ರಾರಂಭವಾದ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣವನ್ನು ಬಯ್ಯಾರೆಡ್ಡಿ ಮಾಡಿದರೆ, ನಿರೂಪಣೆಯನ್ನು ಕಾಂ.ಪ್ರಕಾಶ್ ನಡೆಸಿಕೊಟ್ಟರು. ಮೀನಾಕ್ಷಿ ಸುಂದರಂ ವಂದಿಸಿದರು.

## ಸೂರಿ

ಒಡಲೋಳಗೆ ಸದಾ ಗುಡುಗುಡುಗುವ
ಅಗ್ನಿಪರ್ವತ ಭೋರ್ಗರೆದು ಅಪ್ಪಳಿಸುವ
ತೋಯ್ದು ತೊನೆಯುವ ಕಡಲು ಅಲೆಗಳ
ಮಧ್ಯೆ ಎದೆಯೆತ್ತಿ ನಿಂತು
ಕತ್ತಲಲ್ಲೂ ಬೆಳಕು ಚಿಮ್ಮುವ ದೀಪಸ್ತಂಭ
ಯಾವತ್ತೂ ಘೋಷಣೆ ಮೆರವಣಿಗೆ
ಭಾಷಣಗಳು ನಿರತ
ಆದರೂ ಕೇರಿಗಳ ಕಾಲೋನಿಗಳ
ಹಸಿದ ಮನಸುಗಳ ಗದ್ಗದಿತ ಸ್ವಾಗತ
ಮರ್ಮರಗಳ ಕಿವಿಯಾನಿಸಿ ಆಲಿಸಿದ
ಪ್ರಿಯ ಸಂಗಾತಿ ಈತ.

ಯುದ್ಧಕ್ಕೆ ಸದಾ ಸನ್ನದ್ಧ ನಿವೃತ್ತಿಯೇ
ಗೊತ್ತಿಲ್ಲದ ಯೋಧ ಕಳಚಲಿಲ್ಲ ಸಮವಸ್ತ್ರ
ಕೊನೆಯತನಕ.
ನಡೆಯುತ್ತಲೇ ಹೋದ
ಕೆಂಬಾವುಟ ಮೇಲೆತ್ತಿ ಹಿಡಿದು
ಅಪಾರ ಜನಸ್ತೋಮದ ತುಕಡಿಯನ್ನು
ಮುನ್ನಡೆಸುತ್ತ ಮುಂಚೂಣಿಯಲ್ಲಿದ್ದ
ಈ ದಂಡನಾಯಕನ ಜೀವನವೇ
ಒಂದು ಬೃಹತ್ ಜಾಥಾ.

- ಐ.ಆರ್. ಪ್ರಮೋದ್.
ವಕೀಲರು, ವಿರಾಜಪೇಟೆ



## ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 5

1990 ರ ಐಕ್ಯರಂಗದಲ್ಲಿ ಪ್ರಕಟವಾದ ಲೇಖನವನ್ನು ಮತ್ತೆ ಪ್ರಕಟಿಸಲಾಗಿದೆ

ನಾನು ಕಾಲೇಜಿಗೆ ಸೇರಿದಂದಿನಿಂದಲೂ ರೈತರು ಮತ್ತು ಕಾರ್ಮಿಕರ ದುಡಿಮೆಯಿಂದ ಎಲ್ಲರಿಗೂ ಊಟ, ಬಟ್ಟೆ ಸಿಕ್ಕುತ್ತದೆಂದೂ, ಆದರೆ ಅವರ ದುಡಿಮೆಗೆ ತಕ್ಕ ಪ್ರತಿಫಲ ಸಿಕ್ಕುತ್ತಿಲ್ಲವೆಂದೂ, ಅವರು ನ್ಯಾಯವಾದ ಪ್ರತಿಫಲಕ್ಕಾಗಿ ಒಗ್ಗಟ್ಟಾಗಿ ಹೋರಾಡಬೇಕೆಂದೂ ಹೇಳುತ್ತಿದ್ದೆ. ಇದನ್ನು ಯಾರೂ ವಿರೋಧಿಸುತ್ತಿರಲಿಲ್ಲ. ಆದರೆ ಕಾರ್ಲ್‌ಮಾರ್ಕ್ಸ್ ಹೀಗೆ ಹೇಳಿದ್ದಾರೆ ಎಂದು ಹೇಳಲು ಹೋದರೆ ಕೆಲವರು ವಿರೋಧಿಸುತ್ತಿದ್ದರು. ಅದು ಪರದೇಶದವರ ವಿಚಾರ ಎಂದು ಬಿಟ್ಟುಬಿಡುತ್ತಿದ್ದರು.

1960ರ ವೇಳೆಗೆ ಕಾಂಗ್ರೆಸ್ ಪಕ್ಷವು ಬಂಡವಾಳಗಾರರ, ಗ್ರಾಮೀಣ ಶ್ರೀಮಂತರ ಪಕ್ಷವೆಂದೂ ಆ ಪಕ್ಷವನ್ನು ಕಿತ್ತು ಹಾಕದೇ ದೇಶದ ಏಳಿಗೆ ಸಾಧ್ಯವಿಲ್ಲವೆಂಬ ತಿಳುವಳಿಕೆ ನನಗೆ ಬಂದಿದ್ದಿತು. ಆದರೆ ಕಮ್ಯುನಿಸ್ಟ್ ಪಕ್ಷವು ಕಾಂಗ್ರೆಸ್ಸನ್ನು ದೃಢವಾಗಿ ವಿರೋಧಿಸುತ್ತಿಲ್ಲ ಎಂಬ ಅನುಮಾನ ಬರಲು ಆರಂಭವಾಯಿತು.

ಆದ್ದರಿಂದ ನಗರಸಭೆಯಲ್ಲಿನ ಕೆಲಸ ಮುಗಿದ ಕೂಡಲೇ ಕಮ್ಯುನಿಸ್ಟ್ ಪಕ್ಷವನ್ನು ಸಂಪರ್ಕಿಸಲು ಹೋಗಲಿಲ್ಲ. ಅಲ್ಲದೇ 1960 ಮತ್ತು ಅದರ ನಂತರದ ವರ್ಷ ನನ್ನ ನಿರ್ಧಾರಕ್ಕೆ ಅನುಗುಣವಾಗಿ ನಡೆಯಲು ವಿವಿಧ ದಿಕ್ಕುಗಳಿಂದ ಪ್ರಬಲವಾದ ವಿರೋಧ ವ್ಯಕ್ತವಾಗತೊಡಗಿದವು.

1960ರ ಡಿಸೆಂಬರ್ ಕೊನೆಯಲ್ಲಿ ನನಗೆ ರಾಜ್ಯ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬೀದರ್ ಪಾಲಿಟೆಕ್ನಿಕ್‌ನಲ್ಲಿ ಒಂದು ಕೆಲಸ ಸಿಕ್ಕಿತು. 1961ರ ಜನವರಿಯಲ್ಲಿ ಬೀದರಿನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಆಗ ಪಾಲಿಟೆಕ್ನಿಕ್‌ನಲ್ಲಿದ್ದ ಸಿಬ್ಬಂದಿಯಲ್ಲಿ ಹೆಚ್ಚಿನವರು ಬೆಂಗಳೂರು-ಮೈಸೂರು ಕಡೆಯುವರಾಗಿದ್ದು ಅವರೆಲ್ಲಾ ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ವಾಸವಿದ್ದರು. ನಾನು ಅವರೊಂದಿಗೆ ಸೇರಿಕೊಂಡೆ. ವಿವಿಧ ಇಲಾಖೆಗಳಲ್ಲಿ, ಬ್ಯಾಂಕುಗಳಲ್ಲಿ ಕೆಲಸ ಮಾಡುತ್ತಿದ್ದ ಬೆಂಗಳೂರು-ಮೈಸೂರಿನವರ ಪರಿಚಯವಾಯಿತು. ಅವರು ನಾವಿದ್ದ ಮನೆಗೆ ಆಗಾಗ್ಗೆ ಬರುತ್ತಿದ್ದರು. ಒಂದು ರಜಾ ದಿವಸ. ನನ್ನ ಜತೆಯಲ್ಲಿದ್ದವರೆಲ್ಲಾ ಎಲ್ಲೆಲ್ಲಿಗೋ ಹೋಗಿದ್ದರು. ನಾನು ಲೆನಿನ್ನರ 'ಕರ್ತವ್ಯವೇನು?' ಪುಸ್ತಕವನ್ನು ಓದುತ್ತಿದ್ದೆ. ನನ್ನ ಬದಿಯಲ್ಲಿ ಹತ್ತಿಪ್ಪತ್ತು ಪುಸ್ತಕಗಳಿದ್ದವು. ಅವುಗಳಲ್ಲಿ ಕಾರ್ಲ್‌ಮಾರ್ಕ್ಸ್‌ನ 'ಕ್ಯಾಪಿಟಲ್' ಎದ್ದು ಕಾಣುತ್ತಿತ್ತು. ನಾನು ಓದುತ್ತಿರುವಾಗ ಆಗ ಬೀದರ್‌ನಲ್ಲಿ ಪೋಲೀಸು ಇಲಾಖೆಯ ವೈರ್‌ಲೆಸ್ ಆಪರೇಟರ್‌ರೊಬ್ಬರು (ಅವರು ಬೆಂಗಳೂರಿನವರು) ಬಂದರು. ಬಂದು ಅಲ್ಲಿದ್ದ ಪುಸ್ತಕಗಳನ್ನು ಒಂದೊಂದಾಗಿ ತೆಗೆದುಕೊಂಡು ನೋಡಿದರು. ಅವುಗಳಲ್ಲಿ ಹೆಚ್ಚಿನವು ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾಗಿದ್ದ ಪುಸ್ತಕಗಳು. ಅನಂತರ ಅವರು ನನ್ನ ಕೈಯಲ್ಲಿದ್ದ ಪುಸ್ತಕವನ್ನು ತೆಗೆದುಕೊಂಡು ನೋಡಿದರು. ಅವರು ಒಂದು ಗಂಟೆಯ ಕಾಲ ಉಪದೇಶ ಮಾಡಿದರು. 'ಕಮ್ಯುನಿಸಂ', 'ಸೋವಿಯತ್ ರಷ್ಯ' ಎಷ್ಟು ಅಪಾಯಕಾರಿಯೆಂಬುದನ್ನು ಹೇಳಿ, ನನ್ನ ಭವಿಷ್ಯದ ದೃಷ್ಟಿಯಿಂದ ಆ ಪುಸ್ತಕಗಳನ್ನು ಓದುವುದನ್ನು ಬಿಡಬೇಕೆಂದು ಹೇಳಿದರು. ನಾನು ಅವರಿಗೆ ಏನೇ ಹೇಳಿದರೂ, ಎಷ್ಟೇ ಹೇಳಿದರೂ ಅವರು ಕೇಳಲಿಲ್ಲ, ಅವರು ಕಮ್ಯುನಿಸಂ ಮತ್ತು ಕಮ್ಯುನಿಸ್ಟ್ ಪಕ್ಷದ ವಿರುದ್ಧವಾಗಿ ಪೂರ್ವಕಲ್ಪಿತ ವಿರೋಧವನ್ನು ಬೆಳೆಸಿಕೊಂಡು ಬಂದಿದ್ದರು.

ಬಹುಶಃ ಅಂದಿನಿಂದ ನನಗೆ ಪೋಲೀಸುಕಾಟ ಪ್ರಾರಂಭವಾಗಿರಬಹುದೆಂದು ಕಾಣುತ್ತದೆ.

ಬೀದರ್‌ನಲ್ಲಿದ್ದಾಗ ನಾನು ಒಮ್ಮೆ ಬೆಂಗಳೂರಿಗೆ ಬಂದಾಗ ಕಮ್ಯುನಿಸ್ಟ್ ಪಕ್ಷಗಳ ಜಾಗತಿಕ ಸಮ್ಮೇಳನಗಳ (1957-60) ಘೋಷಣೆ ಮತ್ತು ಹೇಳಿಕೆಗಳ ಕನ್ನಡ ಪುಸ್ತಕವು ಸಿಕ್ಕಿತು. ಅದನ್ನು ಓದಿ ನನಗೆ ಸ್ಫೂರ್ತಿ ಬಂದಿತು.

ನಾನು ಬೀದರಿನಲ್ಲಿರುವಾಗ ಭಾರತ ಸರ್ಕಾರದ ದೂರ ಸಂಪರ್ಕ ಇಲಾಖೆಯಲ್ಲಿ ನನಗೆ ಒಂದು ಕೆಲಸ ಸಿಕ್ಕಿ 1961ರ ಜೂನ್ ತಿಂಗಳಲ್ಲಿ ಹುಬ್ಬಳ್ಳಿಗೆ ಹೋದೆ. ಹುಬ್ಬಳ್ಳಿಯಲ್ಲಿ ಕೆಲಸಕ್ಕೆ ಸೇರುವುದರ ಜೊತೆಗೇನೇ ಜೆ.ಜಿ.ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಎಂ.ಕಾಂ.ತರಗತಿಗೆ ಸೇರಿದೆ.

(ಮುಂದುವರಿಯುವುದು)

## ಕಾಮ್ರೇಡ್ ಸೂರಿಯವರ ಕುರಿತು ವಿಶೇಷ ಸಂಚಿಕೆ

ದುಡಿವ ವರ್ಗದ ಧೀಮಂತ ನಾಯಕ, ಹಿರಿಯ ಸಂಗಾತಿ ಕಾಮ್ರೇಡ್ 'ಸೂರಿ'ಯವರ ಬದುಕು-ಹೋರಾಟಗಳ ಕುರಿತಂತೆ ವಿಶಿಷ್ಟ ಫೋಟೋ, ಲೇಖನಗಳನ್ನೊಳಗೊಂಡ ವಿಶೇಷ ಸಂಚಿಕೆಯನ್ನು ಹೊರತರಲು ದುಡಿವ ಜನರ ಪ್ರಾಣ ಮಿತ್ರ 'ಐಕ್ಯರಂಗ' ನಿರ್ಧರಿಸಿದೆ. ಈ ಸಂಚಿಕೆ ಬಹುವರ್ಣದಲ್ಲಿ ಮುದ್ರಿತವಾಗುವ ಕಾಯ್ದಿರಿಸಿಕೊಳ್ಳಬೇಕಾದ ಸಂಚಿಕೆ. ಈ ಸಂಚಿಕೆಗಾಗಿ ಅವರೊಂದಿಗೆ ಒಡನಾಡಿದ ಅನೇಕರ ನೆನಪುಗಳ ಸಂಗ್ರಹ, ಹೋರಾಟಗಳ ಕುರಿತ ಲೇಖನ, ಫೋಟೋ ಸಂಗ್ರಹಿಸಲು ಈಗಾಗಲೇ ಐಕ್ಯರಂಗದ ತಂಡ ಕಾರ್ಯೋನ್ಮುಖವಾಗಿದೆ. ಈ ಸಂಚಿಕೆಗೆ ಅವರೊಂದಿಗಿನ ನೆನಪುಗಳು, ಜೀವನದ ವಿವರಗಳು, ಭಾವಚಿತ್ರಗಳು ನಿಮ್ಮಲ್ಲಿದ್ದರೆ ದಯವಿಟ್ಟು ಕಳಿಸಿಕೊಡಿ ಅಥವಾ ಸಂಗ್ರಹಿಸಿ ನೀಡಿ.

ಆಗಸ್ಟ್ 24 ರಂದು ಕಾಂ. ಸೂರಿಯವರ ಜನ್ಮದಿನದಂದು ವಿಶೇಷ ಕಾರ್ಯಕ್ರಮದಲ್ಲಿ ಈ ಸಂಚಿಕೆ ಬಿಡುಗಡೆಯಾಗಲಿದೆ.

ಆದ್ದರಿಂದ ಅವೆಲ್ಲಾ ಬರಹ, ಫೋಟೋ, ದಾಖಲೆಗಳು ಆಗಸ್ಟ್ 10 ರೊಳಗೆ ತಲುಪಬೇಕು. ಇಂತಹ ಅವಿಸ್ಮರಣೀಯ ದಾಖಲೆಯ ಸಂಚಿಕೆಗೆ ಎಲ್ಲಾ ನೆರವು-ಸಹಕಾರ ನೀಡಿ ಹಾಗೆಯೇ ಜಾಹೀರಾತುಗಳನ್ನು ಕೂಡ.

- ಸಂ.

## ಈವಾರ ಕರ್ನಾಟಕ ಒಂದು ನೋಟ



ಎಸ್.ವೈ.ಗುರುಶಾಂತ್


# ಕರ್ನಾಟಕಕ್ಕೆ ರವಾನೆಯಗಾಲಿದ್ದಾರೆ ಹೊಸ ರಾಜ್ಯಪಾಲರು

ಕರ್ನಾಟಕಕ್ಕೀಗ ಹೊಸ ರಾಜ್ಯಪಾಲರು ಬಂದಿಳಿಯಲಿದ್ದಾರೆ. ಇನ್ನೇನು ರಾಜ್ಯಪಾಲರಾಗಿರುವ ಶ್ರೀಮತಿ ರಮಾದೇವಿಯವರ ಅವಧಿ ಮುಗಿದು ಮನೆಗೆ ಮರಳಲಿದ್ದಾರೆ.

ಶ್ರೀ ಟಿ.ಎನ್.ಚತುರ್ವೇಧಿ ಈ ಹೊಸ ರಾಜ್ಯಪಾಲರು, ಹಿಂದೆ ಭಾರತದ ಮಹಾಲೆಕ್ಕಪರಿಶೋಧಕರಾಗಿದ್ದವರು.

ಅಧಿಕಾರಿಯಾಗಿದ್ದಾಗ ಒಳ್ಳೇ ಹೆಸರು ಪಡೆದರು. ಅವರೀಗ ಬಿಜೆಪಿಯ ಸಕ್ರೀಯ ರಾಜಕಾರಣಿ, ಸಂಸತ್ ಸದಸ್ಯರು.


ರಾಜ್ಯಪಾಲರ ಹುದ್ದೆಗೆ ಸಕ್ರೀಯ ರಾಜಕಾರಣಿಗಳನ್ನು, ನೇಮಿಸುತ್ತಾ ಬಂದಿದ್ದು ಕಾಂಗ್ರೆಸ್‌ನ ಪರಿಪಾಠ. ಈಗ ಬಿಜೆಪಿಯೂ ಸಹ ಕಾಂಗ್ರೆಸ್‌ನ ಜಾಡನ್ನೇ ತುಳಿದಿದೆ. ಬಿ.ಜೆ.ಪಿ ನೇತೃತ್ವದ ಕೇಂದ್ರಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯಪಾಲರ ಹಲವು ನೇಮಕಗಳಂತೂ ಆಯಾ ರಾಜ್ಯ ಸರ್ಕಾರಗಳ ಮೇಲೆ ಸೇಡು ತೀರಿಸಿಕೊಳ್ಳುವ, ಕೇಂದ್ರದ ಪರವಾಗಿಯೇ ಕೆಲಸ ಮಾಡುವ ಸಂಚಿನ ಭಾಗವಾಗಿರುವುದು ಕಂಡುಬಂದಿದೆ. ಸಂವಿಧಾನದ ರೂಢಿಗತ ಮೌಲ್ಯಗಳನ್ನು ಉಲ್ಲಂಘಿಸಲು ಸತತವಾಗಿ ಪ್ರೇರೇಪಿಸಲಾಗಿದೆ. ಸರ್ಕಾರ ವಜಾಗೊಳಿಸಲು ನಾಚಿಕೆಯಿಲ್ಲದೇ ಯತ್ನಿಸಲಾಗಿದೆ. ಬಿಹಾರ, ತಮಿಳುನಾಡು, ಪಶ್ಚಿಮ ಬಂಗಾಳದಂತಹ ಸರ್ಕಾರಗಳ ಮೇಲೆ ಹರಿಹಾಯ್ದು ನಗೆಪಾಟಲಿಗೀಡಾದದ್ದು ಇದೆ. ಮುಖಭಂಗ ಅನುಭವಿಸಿದೆ.



ಕೇಂದ್ರ ಸರ್ಕಾರದ ಏಜೆಂಟರಾಗಿ ರಾಜ್ಯ ಸರ್ಕಾರಗಳ ಮೇಲೆ ಸದಾ ಕತ್ತಿ ತೂಗು ಹಾಕುವ ಈ ರಾಜ್ಯಪಾಲರ ಹುದ್ದೆಯೇ ಅನಗತ್ಯ. ಪ್ರಸ್ತುತ ಜನರಿಂದ ಚುನಾಯಿತವಾದ ಸರ್ಕಾರವೊಂದು ಹೇಗೆ ಕೆಲಸ ಮಾಡಬೇಕೆಂಬ ಬಗ್ಗೆ ಸಂವಿಧಾನಿತ - ನೀತಿನಿಯಮಗಳು ಚೌಕಟ್ಟು, ಹೊಣೆಗಾರಿಕೆ ಇರುವಾಗ-, ಒಕ್ಕೂಟ ಸ್ವರೂಪದ ಸಂಬಂಧದಲ್ಲಿ ಕೇಂದ್ರದೊಂದಿಗೆ ವ್ಯವಹರಿಸುವ ಹಾದಿಯಿರುವಾಗ ಸಂವಿಧಾನಾತ್ಮಕ ಮುಖ್ಯಸ್ಥ' ನೆಂಬ ಪಟ್ಟ ನೀಡಿ ಈ 'ಬಿಳಿಯಾನೆಯನ್ನು' ಚುನಾಯಿತ ಸರ್ಕಾರದ ತಲೆ ಮೇಲೆ ಕೂಡಿಸುವುದು ಸರಿಯಲ್ಲ, ರಾಜ್ಯಪಾಲರ ಹುದ್ದೆಯನ್ನೇ ರದ್ದುಪಡಿಸುವುದು ಒಳ್ಳೆಯದು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವೇನೋ ಇದೆ. ಆದರೆ ಬಹುತೇಕವಾಗಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಎತ್ತಿಹಿಡಿಯಲು, ನದಿ ನೀರಿನ ಹಂಚಿಕೆ ವಿವಾದದಲ್ಲಿ, ಹಣಕಾಸು ನೆರವಿನ ವಿಷಯದಲ್ಲಿ ಧಾಳಿ ನಡೆಯುುವಾಗಲೂ, ನ್ಯಾಯ ಸಮ್ಮತ ಕೇಳಿಕೆಗಾಗಿ ಹೋರಾಡುವ, ಮುಖಾಮುಖಿಯಾಗುವ ಸಂದರ್ಭಗಳನ್ನೇ ಕೃಷ್ಣರ ಸರ್ಕಾರ ಕೈಬಿಟ್ಟಿದೆ. ರಾಜಕೀಯವಾಗಿ, ಆರ್ಥಿಕವಾಗಿ ಧ್ವನಿಯೆತ್ತಿ ಹೋರಾಡುವಲ್ಲಿ ಉದಾರೀಕರಣದ ದೋಣಿಯಲ್ಲೇ ಪಯಣಿಸುವ 'ಈ ಜಾಣರು' ಹೊಂದಾಣಿಕೆ ಮಾಡಿಕೊಂಡು ಹೊರಟಿರುವುದು ತಿಳಿಯದ ಸಂಗತಿಯಲ್ಲ.

ಗಂಭೀರವಾಗಿ ಯೋಚಿಸಬೇಕಾದ್ದು: ಕರ್ನಾಟದಲ್ಲಿ ಸತತವಾಗಿ ಜನರಿಂದ ತಿರಸ್ಕೃತವಾಗುತ್ತ, ಬಿಜೆಪಿಯು ರಾಜಕೀಯ ನೆಲೆ ಕಳೆದುಕೊಳ್ಳುತ್ತಿರುವ ಆರ್.ಎಸ್.ಎಸ್, ಬಜರಂಗದಳದಂತಹ ಶಕ್ತಿಗಳು ಕೋಮುಗಲಭೆ ಹಬ್ಬಿಸಿ ಎಲ್ಲೆಲ್ಲಿ ಆಮೂಲಕ ನೆಲೆ ಕಂಡುಕೊಳ್ಳಲು ಎಡಬಿಡದೆ ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿಯ ರಾಜ್ಯಪಾಲರು ಹೇಗೆ ವರ್ತಿಸುವರು ಎಂಬ ಪ್ರಶ್ನೆಯಿದೆ. ಮೇಲಾಗಿ ಕಾಂಗ್ರೆಸ್‌ನಲ್ಲಿ ಆಂತರಿಕ ಕಿತ್ತಾಟದ ರಿಹರ್ಸಲ್ ಆರಂಭಗೊಂಡಿರುವಾಗ ರಾಜ್ಯಪಾಲರ ನೇಮಕ ಹೆಚ್ಚು ಸೂಕ್ಷ್ಮತೆ ಪಡೆದುಕೊಳ್ಳುತ್ತದೆ.



## ಪಂಪಾಪತಿ ನಿಧನಕ್ಕೆ ಸಿಪಿಐ(ಎಂ) ಶ್ರದ್ಧಾಂಜಲಿ

ಕಾರ್ಮಿಕ ನಾಯಕ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ)ದ ಮುಂದಾಳು, ವಿಧಾನಸಭೆಯಲ್ಲಿ 3 ಅವಧಿಗೆ ಶಾಸಕರಾಗಿದ್ದ ಪಂಪಾಪತಿ ಅವರು ಆಗಸ್ಟ್ 1 ರಂದು ನಿಧನರಾಗಿದ್ದಾರೆ.

ಅವರು ಸಾಧಾರಣ 8 ವರ್ಷಗಳ ಕಾಲ ದಾವಣಗೆರೆ ನಗರಸಭಾ ಅಧ್ಯಕ್ಷರಾಗಿದ್ದರು. ಸ್ವತಃ ಹತ್ತಿಗಿರಣಿಯಲ್ಲಿ ಕಾರ್ಮಿಕನಾಗಿ ದುಡಿದು ನಂತರ ಕಾರ್ಮಿಕ ಸಂಘಟನೆ, ಕಮ್ಯುನಿಸ್ಟ್ ಚಳವಳಿಯಲ್ಲಿ ಮುಖಂಡತ್ವ ನೀಡಿದ ಪಂಪಾಪತಿಯವರ ನಿಧನದಿಂದ ಹಿರಿಯ ನಾಯಕನೊಬ್ಬನನ್ನು ಕಳಕೊಂಡಂತಾಗಿದೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದೆ.

ಪಂಪಾಪತಿಯವರ ಪತ್ನಿ ಹಾಗೂ ಕುಟುಂಬದವರಿಗೆ ಆಗಿರುವ ದುಃಖದಲ್ಲಿ ಸಿಪಿಐ(ಎಂ) ರಾಜ್ಯಸಮಿತಿ ಸಂಪೂರ್ಣ ಭಾಗಿಯಾಗಿದೆ.

ದಾವಣಗೆರೆಯಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ.ನಾಯರ್ ಭಾಗವಹಿಸಿದ್ದು, ರಾಜ್ಯ ಸಮಿತಿಯ ಪರವಾಗಿ ಸಂತಾಪ ಸೂಚಿಸಿದರು.

### ಹಿರಿಯೂರು ಗೋಲಿಬಾರ್

# ಕೃಷ್ಣ-ಕಂಪನಿಯ ಮಸಲತ್ತು ಅಮಾಯಕರ ಹೆಣ ಬಿತ್ತು

ಹಿರಿಯೂರಿನ ಬಬ್ಬೂರು ಗ್ರಾಮದ ಬಳಿ ಕೆಲಸ ಆರಂಭಗೊಂಡ ಬಯೋಮಾಸ್ ವಿದ್ಯುತ್ ಘಟಕವನ್ನು ವಿರೋಧೀ ನಡೆದ ಸಾವಿರಾರು ಪ್ರತಿಭಟನಾಕಾರರ ಮೇಲೆ ಪೋಲೀಸರ ದರ್ಪ, ಲಾಠಿ ಏಟು, ಅಶ್ರುವಾಯು, ಕೊನೆಗೆ ಗುಂಡುಹಾರಿಸಿ ಕೊಲೆ.

ಈ 'ಬಯೋಮಾಸ್ ವಿದ್ಯುತ್ ಘಟಕ' ತಮ್ಮ ಪ್ರದೇಶದಲ್ಲಿ ಸ್ಥಾಪನೆಯಾಗುತ್ತಿರುವುದರಿಂದ ಏನೇನೋ ಅನಾಹುತಗಳು ಆಗಬಹುದೆಂಬ ಜನರ ಸಹಜ ಆತಂಕಗಳಿಗೆ ಕಿಂಚಿತ್ತೂ ಉತ್ತರಿಸದೇ, ಬೇಜವಾಬ್ದಾರಿ ಸರ್ಕಾರ, ಇವರ ಕುಮ್ಮಕ್ಕಿನಿಂದ ಕೊಬ್ಬಿದ ತಮಿಳುನಾಡು ನೆಲೆಯ ಆರ್.ಕೆ ಪವರ್ ಜೆನ್ ಕಂಪನಿ' ನಿಜವಾದ ಕೊಲೆಗಾರರು. ರೈತರ ನೈಜ ಪ್ರಶ್ನೆಗಳನ್ನು ಬಗೆಹರಿಸದೇ ಗೋಲೀಬಾರ್ ನಡೆಸಿದೆ. ಶಿರಾದಲ್ಲಿ ಶೇಂಗಾ ಬೆಳೆಗಾರರ ಮೇಲಿನ ಗೋಲೀಬಾರ್‌ನ ನೆತ್ತರನ್ನು ತೋರಿಸಿ ಅಧಿಕಾರಕ್ಕೇರಿದ ಕಾಂಗ್ರೆಸ್ ಸರ್ಕಾರ ಕೊಲೆಪಾತಕ ಹಾದಿಯನ್ನೇ ತುಳಿಯುತ್ತಿದೆ. ವಿಠೇಲನಹಳ್ಳಿಯಲ್ಲಿ ನೀರಾ ಚಳುವಳಿಗಾರರ ಮೇಲೆ ಗುಂಡು ಹಾರಿಸಿ ರಕ್ತದೋಕುಳಿಯಾಡಿದ್ದು ಇನ್ನೂ ಕಣ್ಣೆದುರಿರುವಾಗಲೇ ಕೃಷ್ಣ ಸರ್ಕಾರ ಈ ಜನವಿರೋಧಿ ಕೃತ್ಯಕ್ಕೆ ಮತ್ತೆ ಹೆಜ್ಜೆ ಇರಿಸಿದೆ. ಕೋಟು ಸೂಟುಬೂಟಿನ, ಠಾಕುಠೀಕಿನ ಅಮೇರಿಕಾ 'ಅಂಕಲ್ ಶ್ಯಾಮ್'ರ ಮೆಚ್ಚುಗೆ ಪಡೆವ ಹೈಟೆಕ್ ಮುಖ್ಯಮಂತ್ರಿಗಳು, ಇನ್ನೂ ಜನವಿರೋಧಿ ನೀತಿಗಳನ್ನು ಬಣ್ಣದ ಮಾತುಗಳಿಂದ ಮುಚ್ಚಿಕೊಳ್ಳುವುದು ಕಷ್ಟ ಎನ್ನಿಸುತ್ತಿರುವಂತೆ ಹೆಚ್ಚು ಹೆಚ್ಚು ವ್ಯಾಗ್ರವಾಗುತ್ತಿದ್ದಾರೆ. ಸನ್ನಿವೇಶ ಸಂದರ್ಭ-ಸಾಗಿದ ಹಾದಿಯಿಂದ ಪಾಠ ಕಲಿಯದೇ ಕಂಪನಿಗಳ ನಿಷ್ಠ ಸೇವಕರೆಂಬುದನ್ನು ಸಾಬೀತುಪಡಿಸುತ್ತಿದ್ದಾರೆ.

ಬಬ್ಬೂರು ಗ್ರಾಮಸ್ಥರದು ಸಹಜ ಪ್ರಶ್ನೆಗಳು. ಆ ಪ್ರದೇಶದಲ್ಲಿ ಆರ್.ಕೆ ಪವರ್' ಕಂಪನಿ 80 ಎಕರೆ ಜಮೀನು ಖರೀಧಿಸಿದಾಗಿನಿಂದ, ಹಲವಾರು ಅನುಮಾನಗಳು ಆರಂಭಗೊಂಡವು. ಬಬ್ಬೂರು ಗ್ರಾಮಪಂಚಾಯತ್ ಕಂಪನಿಗೆ ಪರವಾನಿಗೆಯನ್ನು ನೀಡಲು ನಿರಾಕರಿಸಿತು. ಆಗ ಕಂಪನಿಯು ವಿವರಣೆ ನೀಡಿ ಆತಂಕ ನಿವಾರಿಸಲಿಲ್ಲ. ಬದಲು ತಾಲೂಕು ಪಂಚಾಯತಿವರೆಗೂ, ನಂತರ ಕೋರ್ಟ್ ಕಟ್ಟೆ ಹತ್ತಿತು. ಕೊನೆಗೆ ಗೋಲ್‌ಮಾಲ್ ಮಾಡಿ ತಾಲೂಕು ಪಂಚಾಯ್ತಿ ನಿರಾಕರಿಸಿದ್ದರೂ ಕಾರ್ಯದರ್ಶಿಯಿಂದ ಆದೇಶಪತ್ರ ಪಡೆಯುವ ಹಂತಕ್ಕೆ ಹೋದದ್ದು, ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಕೃತ್ಯವಾಗಿದೆ. ಆ ಎಲ್ಲಾ ಹಂತಗಳಲ್ಲಿಯೂ ಪರವಾನಿಗೆ ನೀಡದಿದ್ದಾಗ, ಸರ್ಕಾರ(ಪರಿಸರ ಇಲಾಖೆ) ಒಂದೇ ದಿನದಲ್ಲೇ ಏಕಾಏಕಿ ಆದೇಶ ನೀಡಿದ್ದು ಕಂಪನಿ ಮತ್ತು ಸರ್ಕಾರ, - ಆಳುವ ರಾಜಕಾರಣಿಗಳು, ಮಂತ್ರಿಗಳ ನಡುವಿನ ಬಲವಾದ ಜಾಲವನ್ನು,ಭ್ರಷ್ಟತೆಯ ಕರಾಳ ರೂಪವನ್ನು ಎತ್ತಿತೋರಿಸುತ್ತಿದೆ.

ಹೀಗೆ ಸರ್ಕಾರದಿಂದ ತಮ್ಮ ಬಲ ಬಳಸಿ ಆಜ್ಞೆ ತಂದು ಪೋಲೀಸರ ಸರ್ಪಗಾವಲಿನಲ್ಲಿ ಕಾಮಗಾರಿ ಆರಂಭಿಸುವುದನ್ನು ಸುಮಾರು 6000 ಜನ ಪ್ರತಿಭಟಿಸಿದ್ದಾರೆ. ಪ್ರತಿಭಟನೆಗೆ ಹೊರಟಿದ್ದಾರೆ. ಇದನ್ನು ಪೋಲೀಸರು ತಡೆಯಲು ಹೋಗಿ ಜನರ ಮೇಲೆಯೇ ದೌರ್ಜನ್ಯ ನಡೆಸಿದ್ದಾರೆ.

## ಪೋಲೀಸರ ಗೋಲೀಬಾರ್‌ಗೆ ಇಬ್ಬರು ಅಮಾಯಕರ ಬಲಿ

ಹಿರಿಯ ಸಚಿವರು, 'ಸಜ್ಜನ'ರೆಂದು ಕರೆಸಿಕೊಳ್ಳುವ ಕೆ.ಹೆಚ್.ರಂಗನಾಥರ ಕ್ಷೇತ್ರವಿದು. ಅವರು ಜನರ ಪ್ರತಿಭಟನೆಯಲ್ಲಿ ತಮ್ಮ ರಾಜಕೀಯ ವೈರಿ'ಗಳ ಕೈಕಾಣತೊಡಗಿದ್ದಾರೆ. ತಕ್ಕ ಶಾಸ್ತಿ ಆಗಿದೆ ಬಿಡಿ ಎನ್ನುತ್ತಿದ್ದಾರಂತೆ. ಜನತಾದಳದ ಹಿರಿಯ ನಾಯಕ ಡಿ.ಮಂಜುನಾಥರ ಬಂಧನವೂ ಆಗಿದೆ ಜನತೆಯ ಪ್ರಶ್ನೆಗಳನ್ನು ಬಗೆಹರಿಸುವ, ಪ್ರಜಾಸತ್ತಾತ್ಮಕ ಇರಾದೆ, ರಾಜಕೀಯವಾಗಿ ಎದುರಿಸುವ ಆತ್ಮ ಸ್ಥೈರ್ಯ - ಇಲ್ಲದ ಸರ್ವಾಧಿಕಾರಿ ನಿಲುವುಗಳು, ಇಂತಹ ಹತ್ಯೆಗಳ ಉತ್ತರಗಳಲ್ಲಿ 'ಉತ್ತರ ಪೌರುಷ'ದ ಸಮಾಧಾನ ಕಂಡುಕೊಳ್ಳುತ್ತವೆ. ಬಂಡವಾಳಗಾರರ ಉದ್ದಾರಕ್ಕೆ ಟೊಂಕ ಕಟ್ಟಿ ನಿಂತು, ತನ್ನ ಜನರನ್ನೇ ಕೊಲ್ಲಲು ಹೇಸದ ಇವರು ತಕ್ಕ ಶಿಕ್ಷೆ ಅನುಭವಿಸಲೇಬೇಕಾಗುತ್ತದೆ ಎಂಬುದನ್ನು ಕೃಷ್ಣರವರು ನೆನಪಿಟ್ಟುಕೊಳ್ಳಬೇಕು.


ಈ ಕೃತ್ಯಗಳು ಖಂಡನೀಯ. ಈಗಲಾದರೂ ಸರ್ಕಾರ ಜನರಿಗೆ ಸೂಕ್ತವಾಗಿಉತ್ತರಿಸಬೇಕು. ಆರಂಭಗೊಂಡಿರುವ ಕಾಮಗಾರಿ ಕೂಡಲೇ ನಿಲ್ಲಿಸಬೇಕು ಪೋಲೀಸ್ ವೈಫಲ್ಯ, ಗೋಲಿಬಾರ್ ಕುರಿತು ಇಡೀ ಪ್ರಕರಣದ ಸಮಗ್ರ ತನಿಖೆಯಾಗಿ ನಿಷ್ಠುರ ಕ್ರಮ ಜರುಗಿಸಬೇಕು. ಸೂಕ್ತ ಪರಿಹಾರ ನೀಡಬೇಕು.

ಈ ಕನಿಷ್ಟ ಕ್ರಮಗಳು ಒಂದು ನಾಗರೀಕ ಸರ್ಕಾರದಿಂದ ತಕ್ಷಣ ಜನ ನಿರೀಕ್ಷಿಸುತ್ತಾರೆ.



# ನೂರಾರು ಕೋಟಿ ರೂಪಾಯಿ ನುಂಗಿದ ಭೂಪರು ಕರ್ನಾಟಕ ಸರ್ಕಾರದ ಗ್ರಾಮೀಣ 'ಅಭಿವೃದ್ಧಿ' ಸಚಿವರು!?

**ಸಂಕಷ್ಟಕ್ಕೀಡಾಗಿರುವ ರೈತರ ಸಹಾಯಕ್ಕೆ ಬಾರದ ಕೃಷ್ಣರ ಸರಕಾರ ತಮ್ಮ ಕ್ಯಾಬಿನೆಟ್ ಸಚಿವರಿಗೆ ಸೇರಿದ ಕಂಪನಿಯ ಕೋಟಿಗಟ್ಟಲೆ ರೂಪಾಯಿ ಬಾಕಿಯನ್ನು ಮನ್ನಾ ಮಾಡಿದೆ! ಈ ಮನ್ನಾ ಮಾಡಿಸಿಕೊಂಡವರು ಸಂಡೂರಿನ ಮಹಾರಾಜ ಎಂ.ವೈ.ಘೋರ್ಪಡೆ. ಈ ರಾಜ ಪರಿವಾರ ವಿವಿಧ ಬ್ಯಾಂಕುಗಳಿಗೂ ಪಂಗನಾಮ ಹಾಕಿದ ವಿವರಗಳು ಪ್ರಕಟವಾಗಿದೆ. ಅವಾವುವು? ಏನಿದೆ ರಾಜ ಚರಿತೆ...?**



ಶ್ರೀ ಮಾರುತಿರಾವ್ ವೈ.ಘೋರ್ಪಡೆ ಎಂದರೆ ಕರ್ನಾಟಕದ ಕಾಂಗ್ರೆಸ್ ವಲಯದಲ್ಲಿ ಪ್ರತಿಷ್ಠಿತ ಹೆಸರು. ಈಗಿನ ಸರಕಾರದಲ್ಲಿ ಕ್ಯಾಬಿನೆಟ್ ದರ್ಜೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು. ಅವರು ಸಂಡೂರು ರಾಜ ಮನೆತನಕ್ಕೆ ಸೇರಿದವರು. ವಿ.ವೈ. ಘೋರ್ಪಡೆ, ಮತ್ತು ಎಸ್.ವೈ.ಘೋರ್ಪಡೆ ಅವರ ಸಹೋದರರು ಅವರು ಕೂಡಾ ರಾಜ ಮನೆತನಕ್ಕೆ ಸೇರಿದವರೆಂದು ಬೇರೆ ಹೇಳಬೇಕಾಗಿಲ್ಲ.

ಈ ಘೋರ್ಪಡೆ ಮನೆತನದವರು ಪಾಲುದಾರರಾಗಿರುವ ವಿವಿಧ ಕಂಪನಿಗಳು ವಿವಿಧ ಬ್ಯಾಂಕುಗಳಿಗೆ ನೀಡಬೇಕಾದ ಸಾಲದ ಮೊತ್ತ ಎಷ್ಟು ಗೊತ್ತೇ? 108.97 ಕೋಟಿ ರೂಪಾಯಿಗಳು. ಇದು ಮಾರ್ಚ್ 31, 2001ರಂದು ರಿಜರ್ವ್ ಬ್ಯಾಂಕ್ ಒದಗಿಸಿದ ಅಂಕಿ ಅಂಶ ಪ್ರಕಾರ. ಬಡ್ಡಿ ಸೇರಿದರೆ ಈ ಮೊತ್ತ ಇನ್ನೂ ಹೆಚ್ಚಾಗುತ್ತದೆ. ಇಷ್ಟೊಂದು ದೊಡ್ಡ ಮೊತ್ತದ ಸಾಲ ಬಾಕಿ ಇಟ್ಟುಕೊಂಡಿರುವವರು ರಾಜ್ಯದ ಮಂತ್ರಿಮಂಡಲದ ಸಚಿವರಾಗಲು ಅರ್ಹರೆ? ಇವರಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಯನ್ನು ನಿರೀಕ್ಷಿಸುವುದಾದರೂ ಹೇಗೆ?

ಬಹುಶಃ ಇವರು ಮಂತ್ರಿಗಳಾಗುವುದು ಗ್ರಾಮೀಣ ಪ್ರದೇಶದ ಅಭಿವೃದ್ಧಿಗಲ್ಲ, ತಮ್ಮ ಹಾಗೂ ತಮ್ಮವರ ಬೇಳೆ ಬೇಯಿಸಿಕೊಳ್ಳಲು.

ಇತ್ತೀಚೆಗೆ ಕರ್ನಾಟಕ ರಾಜ್ಯದ 'ಘನ' ಕಾಂಗ್ರೆಸ್ ಸರಕಾರ ಒಂದು ಮಹತ್ವದ ನಿರ್ಧಾರ ಕೈಗೊಂಡಿತ್ತು. ಎಂ.ವೈ.ಘೋರ್ಪಡೆಯವರು ಅಧ್ಯಕ್ಷರಾಗಿರುವ 'ಸ್ಮಯಾರ್' ಕಂಪನಿಯು ಕೆ.ಪಿ.ಟಿ.ಸಿ. ಎಲ್‌ಗೆ ತೆರಬೇಕಾಗಿದ್ದ 46.39 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಲಾಯ್ತು! ಒಂದೆಡೆ ಸಂಕಷ್ಟಕ್ಕೀಡಾಗಿರುವ ಲಕ್ಷಾಂತರ ರೈತರ ಸಹಾಯಕ್ಕೆ ಬಾರದ ಸರಕಾರ, ಕ್ಯಾಬಿನೆಟ್ ದರ್ಜೆಯ ಸಚಿವರಿಗೆ ಸೇರಿದ ಕಂಪನಿಯ ಕೋಟಿಗಟ್ಟಲೆ ರೂಪಾಯಿ ಬಾಕಿಯನ್ನು ಮನ್ನಾ ಮಾಡಿದೆ.

'ಬೆಳೆ ಹಾಳಾಗಿದೆ', ಸಾಲ ತೀರಿಸಲಾಗಿಲ್ಲ', 'ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ' ಎಂದು ದುಂಬಾಲು ಬಿದ್ದರೂ ರೈತರ ವಿದ್ಯುತ್ ಬಾಕಿಯನ್ನು ಮನ್ನಾ ಮಾಡದ ಸರಕಾರ ಸಚಿವರ ವಿದ್ಯುತ್ ಬಾಕಿ ಮನ್ನಾ ಮಾಡಲು ಯಾವುದೇ ಹಿಂಜರಿಕೆ ಇಲ್ಲ!

ಶ್ರೀ ಎಂ.ವೈ.ಘೋರ್ಪಡೆಯವರಿಗೆ ಸೇರಿದ ವಿವಿಧ ಕಂಪನಿಗಳಿಂದ ವಿವಿಧ ಬ್ಯಾಂಕುಗಳಿಗೆ ನೀಡಬೇಕಾದ ಸಾಲದ ಮೊತ್ತದ ವಿವರಗಳು ಕೋಷ್ಟಕದಲ್ಲಿದೆ.

ಈ ಮಾಹಿತಿಗಳನ್ನು ಬ್ಯಾಂಕ್ ನೌಕರರ ಸಂಘಟನೆಯು ಪತ್ರಿಕೆಗಳಿಗೆ ಬಿಡುಗಡೆಗೊಳಿಸಿದ ಪುಸ್ತಕದಿಂದ ಪಡೆಯಲಾಗಿದೆ. ಬ್ಯಾಂಕ್ ಉದ್ದಿಮೆಯ ಪ್ರಮುಖ ನೌಕರ ಸಂಘಟನೆ ಏಐಬಿಇಎ ಮತ್ತು ಅದರ ಕರ್ನಾಟಕ ಘಟಕ ಕೆಪಿಬಿಇಎಫ್ ಸಾಲ ಬಾಕಿದಾರರ ಪಟ್ಟಿಯನ್ನು ಸಾರ್ವಜನಿಕರಿಗೆ ಬಿಡುಗಡೆಗೊಳಿಸಿ ಉತ್ತಮ ಕೆಲಸವನ್ನೇ ಮಾಡಿದೆ. ಅದನ್ನು ಎಲ್ಲರೂ ಸ್ವಾಗತಿಸಬೇಕು. ಆದರೆ ಇಲ್ಲಿಗೆ ಅದು ನಿಲ್ಲಕೂಡದು. ಹೆಸರನ್ನು ಬಹಿರಂಗಗೊಳಿಸಿದಾಕ್ಷಣ, ಹಣ ವಾಪಸು ಬರುವುದಿಲ್ಲ. ಹಣ ವಸೂಲಿ ಮಾಡಲು, ಸಂಭಂದಪಟ್ಟ ಬ್ಯಾಂಕು ಮತ್ತು ಸರಕಾರಗಳ ಮೇಲೆ ಒತ್ತಾಯ ಹೇರಬೇಕು.

ಈಗಾಗಲೇ ಕೆಲಸದ ಒತ್ತಡದಿಂದ ಹೆಚ್ಚು ಶ್ರಮವಹಿಸಿ ದುಡಿಯುತ್ತಿರುವ ನೌಕರರಿಗೆ ವೇತನ ಹೆಚ್ಚಿಸಿರೆಂದು ಒತ್ತಾಯ ಮಾಡಿದರೆ, 'ಬ್ಯಾಂಕುಗಳು ನಷ್ಟದಲ್ಲಿವೆ' ಎಂದು ಉತ್ತರಕೊಡುವ ಆಡಳಿತವರ್ಗ ಮತ್ತು ಸರಕಾರಗಳಿಗೆ, 'ಶ್ರೀಮಂತರಿಗೆ ನೀಡಿದ ಸಾಲಗಳನ್ನು ವಸೂಲಿ ಮಾಡಿ, ಇಲ್ಲವೇ ಅವರ ಆಸ್ತಿಯನ್ನು ಜಪ್ತಿ ಮಾಡಿ' ಎಂಬ ಒತ್ತಾಯವನ್ನು ಬ್ಯಾಂಕ್ ನೌಕರರು ತರಬೇಕಾಗಿದೆ. ಆಗ ಮಾತ್ರವೇ ಭಾರತದ ಆರ್ಥಿಕ ಸ್ವಾವಲಂಬನೆಯ ಕಾಮಧೇನು ಸರಕಾರಿ ಬ್ಯಾಂಕುಗಳನ್ನು ಉಳಿಸಿಕೊಳ್ಳುವುದು ಸಾಧ್ಯ. ಆ ಮೂಲಕ ಬ್ಯಾಂಕು ನೌಕರರ ಹೋರಾಟಕ್ಕೆ ನಾಗರಿಕರ ಬೆಂಬಲಗಳಿಸುವುದೂ ಸಾಧ್ಯ. ಅಂತೆಯೇ ಬ್ಯಾಂಕುಗಳನ್ನು ನುಂಗುವ ಭೂಪರನ್ನು ಬಹಿರಂಗಗೊಳಿಸುವುದೂ ಸಾಧ್ಯ.

ಆ ದೇಶಪ್ರೇಮಿ ಕರ್ತವ್ಯದಲ್ಲಿ ನಾವೇಕೆ ಹಿಂಜರಿಯಬೇಕು?

- ಬಾಲಕೃಷ್ಣ ಶೆಟ್ಟಿ

**ಶ್ರೀ ಎಂ.ವೈ.ಘೋರ್ಪಡೆಯವರಿಗೆ ಸೇರಿದ ವಿವಿಧ ಕಂಪನಿಗಳಿಂದ ವಿವಿಧ ಬ್ಯಾಂಕುಗಳಿಗೆ ನೀಡಬೇಕಾದ ಸಾಲದ ಮೊತ್ತದ ವಿವರಗಳು**

| ಕಂಪನಿ ಹೆಸರು ಮತ್ತು ವಿಳಾಸ | ಸಾಲದ ಪತ್ರಕ್ಕೆ ಸಹಿ ಹಾಕಿದ ಪಾಲುದಾರರು | ಬ್ಯಾಂಕು/ ಹಣಕಾಸುಸಂಸ್ಥೆ | ಸಾಲದ ಮೊತ್ತ |
|---|---|---|---|
| 1) ಸಂಡೂರು ಲ್ಯಾಮಿನೇಟ್ಸ್ ಲಿ. ಲಕ್ಷ್ಮೀಪುರ ಸಂಡೂರು ಬಳ್ಳಾರಿ ಜಿಲ್ಲೆ | ವಿ.ವೈ.ಘೋರ್ಪಡೆ ಇ.ಬಿ.ದೇಸಾಯಿ, ಎಸ್.ಪ್ರಭಾಲ ಪ್ರಥ್ವಿರಾಜ್ ಚವಾಣ್, ಸಿ.ಕೆ.ಲಕ್ಷ್ಮಿನಾರಾಯಣನ್ ಚಾರ್ಲ್ ವಿ.ಕಿಶ್, ಎಸ್.ಎಂ.ಆರ್. ರಾವ್ ಟಿ.ಆರ್. ಸತೀಶ್ ಚಂದ್ರನ್ ಜೇಮ್ಸ್ ಸವೇಜ್ | ಐಎಫ್‌ಸಿಐ ಲಿ. | 49-51 ಕೋಟಿ ರೂ. (ಮಾರ್ಚ್ 1999 ರಲ್ಲಿ) |
| 2) ಸಂಡೂರು ಲ್ಯಾಮಿನೇಟ್ಸ್ 56, ಪ್ಯಾಲೇಸ್ ರಸ್ತೆ ಬೆಂಗಳೂರು | ಎಂ.ವೈ.ಘೋರ್ಪಡೆ ವೆಂಕಟರಾವ್ ವೈ.ಘೋರ್ಪಡೆ | ಸ್ಟೇಟ್ ಬ್ಯಾಂಕ್‌ಆಫ್ ಇಂಡಿಯಾ | 11-84 ಕೋಟಿ ರೂ (ಮಾರ್ಚ್ 1996ರಲ್ಲಿ) |
| 3) ಸಂಡೂರು ಮ್ಯಾಂಗನೀಸ್ ಮತ್ತು ಆಯರ್ನ್ ಓರ್ ಲಿ. ಲಕ್ಷ್ಮೀಪುರ, ಸಂಡೂರು ಬಳ್ಳಾರಿ ಜಿಲ್ಲೆ | ಎಂ.ವೈ.ಘೋರ್ಪಡೆ ಎಂ.ಎಲ್.ಅಪ್ಪೆ ಸುಶೀಲಾ ದೇವಿ ಘೋರ್ಪಡೆ ಪಿ.ಎಂ.ಮಲ್ಲಿಕ್, ಸಿ.ಎಸ್.ವೆಂಕಿಟಾಚಾರ್ ಎಸ್.ವೈ.ಘೋರ್ಪಡೆ, ರೇಮಂಡ್ ಬೆಲ್‌ಫೇರ್ ಎಸ್.ಎಂ.ರಾಮಕೃಷ್ಣರಾವ್, ಇ.ಬಿ.ದೇಸಾಯಿ ಎನ್.ಬಾಲಕೃಷ್ಣನ್ | ಕೆನರಾ ಬ್ಯಾಂಕ್ | 17.81 ಕೋಟಿ ರೂ. (ಮಾರ್ಚ್ 1998 ರಲ್ಲಿ) |
| 4) ಸಂಡೂರು ಮ್ಯಾಂಗನೀಸ್ ಲಕ್ಷ್ಮೀಪುರ ಸಂಡೂರು, ಬಳ್ಳಾರಿ ಜಿಲ್ಲೆ | ಎಸ್.ವೈ.ಘೋರ್ಪಡೆ ನಜಿಂ ಶೇಖ್, ಎಸ್.ಹೆಚ್.ಮೋಹನ್ ಪಿ.ಕೆ.ದೇವನಾಥನ್, ವಿ.ಕೆ. ಕಲಿಯಾ | ಐಸಿಐಸಿಐ ಲಿ. | 2-48 ಕೋಟಿ ರೂ (ಮಾರ್ಚ್ 2000ರಲ್ಲಿ) |
| 5) ಸಂಡೂರು ಮ್ಯಾಂಗನೀಸ್ ಮತ್ತು ಆಯರ್ನ್ ಓರ್‌ಲಿ. ಸಂಡೂರ್ ಹೌಸ್, ನಂ.56, ಪ್ಯಾಲೇಸ್ ರಸ್ತೆ ಬೆಂಗಳೂರು | ಎಂ.ವೈ.ಘೋರ್ಪಡೆ ಎಂ.ಎಲ್.ಅಪ್ಪೆ ಎನ್.ಬಾಲಕೃಷ್ಣನ್ ರೇಮಂಡ್ ಬೆಲ್‌ಪೇರ್ ಎಂ.ಎಸ್.ವೆಂಕಟಾಚಾರ್, ಇ.ಬಿ.ದೇಸಾಯಿ ಪಿ.ಎಂ.ಎಸ್.ಮಲ್ಲಿಕ್, ಪಿ.ಎಲ್.ಸಂಜೀವರೆಡ್ಡಿ ಎಸ್.ಎಂ. ರಾಮಕೃಷ್ಣರಾವ್ ಸುಶೀಲಾದೇವಿ ಘೋರ್ಪಡೆ, ಎಸ್.ವೈ.ಘೋರ್ಪಡೆ ಟಿ.ಆರ್.ಸತೀಶ್‌ಚಂದ್ರ | ಸಿಂಡಿಕೇಟ್ ಬ್ಯಾಂಕ್ | 5-19 ಕೋಟಿ ರೂ. (ಮಾರ್ಚ್ 1999ರಲ್ಲಿ) |
| 6) -do- | ಟಿ.ಆರ್.ಸತೀಶ್ ಚಂದ್ರ ಇ.ಬಿ.ದೇಸಾಯಿ, ಶ್ರೀಧರ್ ಸುಬ್ರಮಣಿಯನ್, ಎಸ್.ವೈ.ಘೋರ್ಪಡೆ ಸುಶೀಲಾದೇವಿ ಘೋರ್ಪಡೆ, ಎಂ.ಎಲ್.ಅಪ್ಪೆ ರೇಮಂಡ್ ಬೆಲ್‌ಪೇರ್ | ಲಕ್ಷ್ಮೀವಿಲಾಸ ಬ್ಯಾಂಕ್ ಲಿ. | 4-80 ಕೋಟಿ ರೂ. (ಅಕ್ಟೋಬರ್ 1997ರಲ್ಲಿ) |
| 7) ಸಂಡೂರ್ ಮ್ಯಾಂಗನೀಸ್ ಮತ್ತು ಆಯರ್ನ್ ಓರ್‌ಲಿ ಲಕ್ಷ್ಮೀಪುರ, ಸಂಡೂರು ಬಳ್ಳಾರಿ ಜಿಲ್ಲೆ | ಎಂ.ವೈ.ಘೋರ್ಪಡೆ ಎಸ್.ವೈ.ಘೋರ್ಪಡೆ | ಬ್ಯಾಂಕ್ ಆಫ್ ಇಂಡಿಯಾ | 9.16 ಕೋಟಿ ರೂ. (ಮಾರ್ಚ್ 1998 ರಲ್ಲಿ) |
| 8) ಸ್ಮಯಾರ್ ಯಶವಂತನಗರ ಸಂಡೂರು | ಎಂ.ವೈ.ಘೋರ್ಪಡೆ ಇ.ಬಿ.ದೇಸಾಯಿ ಬಾಲಕೃಷ್ಣ ಎನ್, ಸಂಜೀವರೆಡ್ಡಿ ಪಿ.ಎಲ್ ವೆಂಕಟಾಚಾರ್ ಸಿ.ಎಸ್, ಸುಶೀಲಾದೇವಿ ಘೋರ್ಪಡೆ ಮಲ್ಲಿಕ್ ಪಿ.ಎಂ.ಎಸ್, ಅಪ್ಪೆ ಎಂ.ಎಲ್, ರೇಮಂಡ್ ಬೆಲ್‌ಪರ್, ಸತೀಶ್ ಚಂದ್ರ ಟಿ. ಆರ್ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 8.18 ಕೋಟಿ ರೂ (ಮಾರ್ಚ್ 1996ರಲ್ಲಿ) |

**ಮೇಲಿನವುಗಳಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳು:**

1. ಒಂದೇ ಮನೆತನಕ್ಕೆ ಸೇರಿದವರು ವಿವಿಧ ಕಂಪನಿಗಳ ಹೆಸರಿನಲ್ಲಿ ವಿವಿಧ ಬ್ಯಾಂಕುಗಳಲ್ಲಿ ಸಾಲ ಪಡೆದಿರುವುದು ಯಾವುದೇ ಬ್ಯಾಂಕು ಸಾಲ ನೀಡುವಾಗ ಆ ಕಂಪನಿಗೆ ಇನ್ನಾವುದೇ ಬ್ಯಾಂಕುಗಳು ಸಾಲ ನೀಡಿದೆಯೇ ಎಂದು ಪರಿಶೀಲಿಸಬೇಕು. ಆದರೆ ಈ ಸಂದರ್ಭದಲ್ಲಿ ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ.
2. ಟಿ.ಆರ್. ಸತೀಶ್ಚಂದ್ರ ಎಂಬವರು ಕರ್ನಾಟಕ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದವರು. ಉನ್ನತ ಅಧಿಕಾರಿಗಳು, ರಾಜಕಾರಣಿಗಳು ಹಾಗೂ ದೊಡ್ಡ ಉದ್ದಿಮೆದಾರರು ಹಣ ಲೂಟಿ ಹೊಡೆಯಲು ಹೇಗೆ ಒಂದಾಗುತ್ತಾರೆ ಎಂಬುದಕ್ಕೆ ಇದು ಉದಾಹರಣೆ.

**ಇತ್ತೀಚಿನ ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಮಾಧ್ಯಮದ ಕೆಲವು ವಿಭಾಗಗಳು ಸುಪ್ರೀಂಕೋರ್ಟ್ ಮತ್ತು ಚುನಾವಣಾ ಆಯೋಗ ಚುನಾವಣೆಗಳನ್ನು ಮತ್ತಷ್ಟು ಪಾರದರ್ಶಕಗೊಳಿಸಲು ಹಾಗೂ ಅಪರಾಧೀಕರಣವನ್ನು ಹಿಮ್ಮೆಟ್ಟಿಸಲು ಪ್ರಯತ್ನ ಪಟ್ಟವು ಎಂದು ಬಿಂಬಿಸಿವೆ. ಆದರೆ ಎಡ ಪಕ್ಷಗಳನ್ನು ಒಳಗೊಂಡಂತೆ ಎಲ್ಲಾ ರಾಜಕೀಯ ಪಕ್ಷಗಳು ಈ ಸಲಹೆಗಳನ್ನು ತಿರಸ್ಕರಿಸಿವೆ.**

# ಸುಪ್ರಿಂಕೋರ್ಟ್ ತೀರ್ಪು ಮತ್ತು ಚುನಾವಣಾ ಸುಧಾರಣೆ

'ಪ್ರಜಾಸತ್ತಾತ್ಮಕ ಸುಧಾರಣೆಗಳ ಸಂಘಟನೆ' ಎಂಬ ಸಂಘಟನೆ ಇತ್ತೀಚಿಗೆ ಕಾನೂನು ಮಂಡಳಿಯ 170ನೇ ವರದಿಯ ಶಿಫಾರಸುಗಳನ್ನು ಜಾರಿಗೊಳಿಸಲು ನಿರ್ದೇಶನ ನೀಡಬೇಕೆಂದು ದೆಹಲಿ ಹೈಕೋರ್ಟ್ ಮುಂದೆ ಒಂದು ಮನವಿ ಸಲ್ಲಿಸಿತ್ತು. ಇದರ ಆಧಾರದಲ್ಲಿ ನ್ಯಾಯಾಲಯವು ಮತದಾರರಿಗೆ ಪ್ರತಿಯೊಬ್ಬ ಅಭ್ಯರ್ಥಿಯ ಬಗ್ಗೆ ಕೆಳಕಂಡ ವಿಷಯಗಳನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡಬೇಕೆಂದು ತೀರ್ಪಿತ್ತಿತು.

1. ಅಭ್ಯರ್ಥಿಯು ಯಾವುದಾದರೂ ಶಿಕ್ಷೆಗೊಳಗಾದ ಮೊಕದ್ದಮೆಯಲ್ಲಿ ಸಿಲುಕಿದ್ದಾನೆಯೇ? ಹಾಗಿದ್ದಲ್ಲಿ ವಿವರಗಳು.
2. ಅಭ್ಯರ್ಥಿಯ ಮತ್ತು ಅವರ ಸಂಬಂಧಿಕರು ಹೊಂದಿರುವ ಸಂಪತ್ತುಗಳ ವಿವರ
3. ಅವರ ಶಿಕ್ಷಣವನ್ನು ಒಳಗೊಂಡಂತೆ ಅಭ್ಯರ್ಥಿಯು ಸಂಸದೀಯ ಶಾಸಕನಾಗಲು ಬೇಕಾದ ಸ್ಥಿರತೆ ಮತ್ತು ಅರ್ಹತೆಗಳನ್ನು ಹೊಂದಿದ್ದಾನೆಯೇ?
4. ಚುನಾವಣಾ ಆಯೋಗಕ್ಕೆ ಅಗತ್ಯಬಿದ್ದಲ್ಲಿ ಮೇಲಿನ ಮಾಹಿತಿಗಳನ್ನು ಚುನಾವಣಾ ಆಯೋಗಕ್ಕೆ ಒದಗಿಸಿಕೊಡಬೇಕು.

ಈ ಆದೇಶದ ವಿರುದ್ಧ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್ ಮುಂದೆ ಅರ್ಜಿ ಸಲ್ಲಿಸಿತು. ಇದರಲ್ಲಿ ಕೆಲವು ರಾಜಕೀಯ ಪಕ್ಷಗಳೂ ಸೇರಿಕೊಂಡವು. ಪಿಯುಸಿಎಲ್ ಎಂಬ ಮತ್ತೊಂದು ಸಂಘಟನೆ ಕಾನೂನು ಆಯೋಗದ 170ನೇ ವರದಿಯ ಶಿಫಾರಸುಗಳಲ್ಲಿ ಕೆಲವನ್ನಾದರೂ ಜಾರಿಗೊಳಿಸಲು ಆದೇಶ ನೀಡಬೇಕೆಂದು ಸುಪ್ರೀಂಕೋರ್ಟ್‌ನ ಮುಂದೆ ತಾನೊಂದು ಅರ್ಜಿ ಸಲ್ಲಿಸಿತು.

**ಸುಪ್ರೀಂಕೋರ್ಟ್‌ನ ನಿರ್ದೇಶನಗಳು**

ಮೇ 2ನೇ ತಾರೀಖು ತೀರ್ಪೊಂದನ್ನು ಹೊರಡಿಸಿ ಸುಪ್ರೀಂಕೋರ್ಟು ಚುನಾವಣಾ ಆಯೋಗಕ್ಕೆ ಕೆಳಗಿನ ನಿರ್ದೇಶನಗಳನ್ನು ನೀಡಿತು.

"ಚುನಾವಣಾ ಆಯೋಗವು ಸಂವಿಧಾನದ 324ನೇ ವಿಧಿಯ ಪ್ರಕಾರ ತನ್ನ ಅಧಿಕಾರವನ್ನು ಚಲಾಯಿಸಲು ನ್ಯಾಯಾಲಯವು ನಿರ್ದೇಶನ ನೀಡುತ್ತದೆ ಮತ್ತು ಕೆಳಕಂಡ ಮಾಹಿತಿಗಳನ್ನು ಪಡೆದುಕೊಳ್ಳುವುದನ್ನು ಪ್ರತಿಯೊಬ್ಬ ಸಂಸತ್ತು ಮತ್ತು ಶಾಸನ ಸಭೆಗಳ ಅಭ್ಯರ್ಥಿಗಳ ಅಭ್ಯರ್ಥಿಯಾಗುವುದರ ಭಾಗವನ್ನಾಗಿ ಮಾಡಲು ತಿಳಿಸುತ್ತದೆ.

1. ಅಭ್ಯರ್ಥಿಯು ಈ ಹಿಂದೆ ಯಾವುದಾದರೂ ಕ್ರಿಮಿನಲ್ ಆಪಾದನೆಯಲ್ಲಿ ಸಿಕ್ಕಿದ್ದಾನೆಯೇ/ ಶಿಕ್ಷೆಗೊಳಗಾಗಿದ್ದಾನೆಯೇ, ಯಾವುದಾದರೂ ಇದರಲ್ಲಿ ಅವರಿಗೆ ಶಿಕ್ಷೆ ಅಥವಾ ದಂಡ ವಿಧಿಸಲಾಗಿದೆಯೇ?
2. ನಾಮಪತ್ರ ಸಲ್ಲಿಸುವ 6 ತಿಂಗಳ ಮುನ್ನ, ಅಭ್ಯರ್ಥಿಗಳು ಯಾವುದಾದರೂ ಇತ್ಯರ್ಥವಾಗದ ಮೊಕದ್ದಮೆಯಲ್ಲಿ ಆಪಾದಿತನೇ? ಅಥವಾ ಯಾವುದಾದರೂ ಶಿಕ್ಷೆಗೊಳಪಡುವ ಮೊಕದ್ದಮೆಯಲ್ಲಿ ಅವರು ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಗೆ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿದ್ದಾನೆಯೇ? ಹಾಗಿದ್ದಲ್ಲಿ ವಿವರಗಳನ್ನು ಲಗತ್ತಿಸಬೇಕು.
3. ಅಭ್ಯರ್ಥಿಯದು, ಅವರ ಸಂಬಂಧಿಕರದ್ದು ಸ್ಥಿರ ಮತ್ತು ಚರ ಆಸ್ತಿಗಳ ವಿವರ
4. ಸುಸ್ತಿದಾರರೆ, ಅದರಲ್ಲೂ ಯಾವುದಾದರೂ [illegible] ಸಂಸ್ಥೆಯಿಂದ, ಸರ್ಕಾರದಿಂದ ಸುಸ್ತಿದಾರರಾಗಿದ್ದಾರಾ?
5. ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಗಳು

**ಚುನಾವಣಾ ಆಯೋಗದ ಆದೇಶ**

ಸುಪ್ರೀಂಕೋರ್ಟ್‌ನ ತೀರ್ಪಿನ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಜೂನ್ 28 ರಂದು ಒಂದು ಆದೇಶ ಹೊರಡಿಸಿತು. ಮೇಲ್ಕಂಡ ಮಾಹಿತಿಗಳನ್ನು ಅಭ್ಯರ್ಥಿಯು ಲಗತ್ತಿಸುವುದರ ಜೊತೆಗೆ ನಾಮಪತ್ರಗಳನ್ನು ಕೆಳಕಂಡ ಅಂಶಗಳ ಆಧಾರದಲ್ಲಿ ತಿರಸ್ಕರಿಸಲು ಚುನಾವಣಾ ಅಧಿಕಾರಿಗಳಿಗೆ ಅಧಿಕಾರ ನೀಡಿತು.

ಮೇಲಿನ ಅಂಶಗಳಿಗೆ ಸಂಬಂಧಿಸಿದ ಮಾಹಿತಿಗಳಲ್ಲಿ ಯಾವುದಾದರೂ ತಪ್ಪು ಮಾಹಿತಿಗಳನ್ನು ನೀಡಿದ್ದಲ್ಲಿ, ಯಾವುದಾದರೂ ಮಾಹಿತಿಯನ್ನು ಮುಚ್ಚಿಡಲು ಯತ್ನಿಸಿದಲ್ಲಿ ಚುನಾವಣಾ ಅಧಿಕಾರಿಯು ಅವರ ನಾಮಪತ್ರವನ್ನು ತಿರಸ್ಕರಿಸುವ ಜೊತೆಗೆ ಸಾರ್ವಜನಿಕ ಸೇವಕನಿಗೆ ತಪ್ಪು ಮಾಹಿತಿ ನೀಡಿದ್ದಕ್ಕೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಶಿಕ್ಷೆ ನೀಡುವ ಶಿಫಾರಸು ಮಾಡಬಹುದು"

**ಸಿಪಿಐ(ಎಂ)ನ ಆಕ್ಷೇಪಗಳು**

ಕೆಳಗಿನ ಅಂಶಗಳಿಗೆ ಸಂಬಂಧಿಸಿ ಅಂದರೆ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದ ಕೇಸಿನ ಸಂಖ್ಯೆ, ಸೆಕ್ಷನ್, ಆಕ್ಟ್, ಶಿಕ್ಷೆಯ ವಿಧಾನ, ದಿನಾಂಕ, ಶಿಕ್ಷೆಯ ಪ್ರಮಾಣ, ಎಲ್ಲಾ ಮಾಹಿತಿಗಳನ್ನು ಕೊಡಬೇಕು. ಮೊಕದ್ದಮೆಗೆ ಸಂಬಂಧಿಸಿದ ಪ್ರತಿಯೊಂದು ವಿವರಗಳು ಹಾಗೂ ಇನ್ನೂ ಅನೇಕ ಮಾಹಿತಿಗಳು....

ಒಬ್ಬ ರಾಜಕೀಯ ಕಾರ್ಯಕರ್ತನಾಗಿ ಬಹಳಷ್ಟು ಅಭ್ಯರ್ಥಿಗಳು ಆದೇಶಗಳನ್ನು ಮುರಿದಿದ್ದಕ್ಕಾಗಿ, ಪ್ರತಿಭಟನೆ ನಡೆಸಿದ್ದಕ್ಕಾಗಿ, ರ್‍ಯಾಲಿಗಳು, ಪಿಕೆಟಿಂಗ್ ನಡೆಸಿದ್ದಕ್ಕಾಗಿ ಆತನು ಮೊಕದ್ದಮೆಗಳಲ್ಲಿ ಸಿಲುಕಿರುತ್ತಾನೆ. ಕೆಲವೊಮ್ಮೆ ಆಡಳಿತ ಪಕ್ಷಗಳು ಸುಳ್ಳು ಮೊಕದ್ದಮೆಗಳನ್ನು ಹಾಕಿಸುವುದೂ ಉಂಟು. ರಾಜಕೀಯ ಅಪರಾಧ ಮತ್ತು ಕ್ರಿಮಿನಲ್ ಅಪರಾಧದ ನಡುವೆ ಯಾವ ಭಿನ್ನತೆಯನ್ನೂ ತೋರಿಸಲಾಗಿಲ್ಲ. ಈ ಅಂಶಗಳನ್ನು ಪರಿಗಣಿಸಿಲ್ಲ. 1951 ರ ಕಾನೂನಿನಲ್ಲೇ ಗಂಭೀರ ಅಪರಾಧಿಗಳನ್ನು ತಡೆಯಲು ಸಾಕಷ್ಟು ಅವಕಾಶಗಳಿವೆ. 1951 ರ ಕಾನೂನಿನಲ್ಲೇ ಅನರ್ಹಗೊಳಿಸುವ ಅವಕಾಶವಿರುವಾಗ ಸಣ್ಣ, ಸಣ್ಣ ಪ್ರತಿಯೊಂದೂ ಮಾಹಿತಿಯನ್ನು ಒದಗಿಸಬೇಕಾದ ಅಗತ್ಯವಿಲ್ಲ, ಇದರಿಂದ ಯಾವ ಅರ್ಥಪೂರ್ಣ ಸಾಧನೆಯೂ ಆಗುವುದಿಲ್ಲ. ಅನೇಕ ಅಭ್ಯರ್ಥಿಗಳು ಈ ರೀತಿಯ ಎಲ್ಲಾ ಮಾಹಿತಿಗಳನ್ನು ಒದಗಿಸಿಕೊಡಲು ಸಾಧ್ಯವಿಲ್ಲ. ಇಂತಹ ದಾಖಲೆಗಳನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆರು ತಿಂಗಳ ಮೊದಲು ಎರಡು ವರ್ಷಗಳಿಗೆ ಮೀರಿದ ಶಿಕ್ಷೆಗೆ ಕೋರ್ಟ್‌ಗಳು ಗುರಿಪಡಿಸಿರುವುದರ ಬಗ್ಗೆ ಮಾಹಿತಿ ಒದಗಿಸಬೇಕೆಂಬುದಕ್ಕೆ ನಮ್ಮ ಆಕ್ಷೇಪಣೆಯಿಲ್ಲ.

ಆದರೆ ಶೈಕ್ಷಣಿಕ ಅರ್ಹತೆ, ಸಂಪತ್ತಿನ ಒಡೆತನಗಳಿಗೆ ಸಂಬಂಧಿಸಿ, ಸಂವಿಧಾನ ರಚನೆಯ ಸಂದರ್ಭದಲ್ಲೇ ಚರ್ಚಿಸಿ ಅದನ್ನು ಕಡೆಗಣಿಸಲಾಗಿದೆ. ಶಿಕ್ಷಣ ಮತ್ತು ಸಂಪತ್ತು ಚುನಾವಣೆಯಲ್ಲಿ ಮತದಾನ ಮಾಡಲಾಗಲೀ, ಸ್ಪರ್ಧಿಸಲಾಗಲೀ, ಯಾವ ಪರ್ಯಾಯವನ್ನು ಮಾಡುವುದಿಲ್ಲ. ನೀತಿಗಳು, ಸಿದ್ಧಾಂತಗಳು, ಪ್ರಾಮಾಣಿಕತೆಗಳಷ್ಟೇ ಮತದಾರನಿಗೆ ಮುಖ್ಯವಾಗುತ್ತದೆ.

ಶಾಸಕರು, ಸಂಸದರು, ಜನಪ್ರತಿನಿಧಿಗಳಾದವರು ತಮ್ಮ ಸಂಪತ್ತಿನ ಬಗ್ಗೆ ಸಾರ್ವಜನಿಕವಾಗಿ ತಿಳಿಸಬೇಕು ಎಂದು ಸರಿ, ಇದರಿಂದ ಭ್ರಷ್ಟಾಚಾರವನ್ನು ತಡೆಯಬಹುದು. ಇದಕ್ಕೆಲ್ಲಾ 1957 ರ ಕಾನೂನಿನಲ್ಲಿ ಸಾಕಷ್ಟು ಅವಕಾಶಗಳಿವೆ. ಆದರೆ ಈಗಿನ ತೀರ್ಪು ಕೆಲವು ಚುನಾವಣಾ ಅಧಿಕಾರಿಗಳು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಲು ಅವಕಾಶ ನೀಡುತ್ತದೆ. ಆದ್ದರಿಂದ ಈ ತೀರ್ಪು ಸರಿಯಾದುದಲ್ಲ ಎಂಬುದು ನಮ್ಮ ನಿಲುವು.

ಈ ವಿಷಯದಲ್ಲಿ ಸಂಸತ್ತು ಯಾವುದೇ ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರಬೇಕು.

**- ಎಸ್.ರಾಮಚಂದ್ರಪಿಳ್ಳೆ**

# ಪ್ರತ್ಯೇಕತಾವಾದಿ ಚಳುವಳಿಗೆ ಕುಮ್ಮಕ್ಕು ಜನರನ್ನು ಬೇರೆಡೆಗೆ ಸೆಳೆಯುವ ಕುತಂತ್ರ

ಎಲ್ಲಾ ರಂಗಗಳಲ್ಲಿನ ವಿಫಲತೆಯಿಂದಾಗಿ ಜನರಿಂದ ದೂರ ಸರಿಯಲ್ಪಟ್ಟ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರ, ಒಂದು ರಾಜ್ಯದ ಜನರ ವಿರುದ್ಧ ಇನ್ನೊಂದು ರಾಜ್ಯದ ಜನರನ್ನು ಎತ್ತಿ ಕಟ್ಟುವ ಕೆಟ್ಟ ಕೆಲಸದಲ್ಲಿ ತೊಡಗಿದೆ. ಆ ಮೂಲಕ ಚುನಾವಣೆಯಲ್ಲಿ ಗೆಲ್ಲಬಹುದೆಂಬ ದುರಾಸೆ.

ಗುಜರಾತಿನಲ್ಲಿ ಶವಗಳ ರಾಶಿಯ ಮೇಲೆ, ಅಲ್ಪಸಂಖ್ಯಾತರನ್ನು ನಿರಾಶ್ರಿತರ ಶಿಬಿರಕ್ಕೆ ನೂಕಿ, ಚುನಾವಣೆ ನಡೆಸಬೇಕೆನ್ನುವ ಬಿಜೆಪಿ, ಜಾರ್ಖಂಡ್‌ನಲ್ಲಿ ಸ್ಥಳೀಯರಿಗೆ ಉದ್ಯೋಗದ ಹೆಸರಿನಲ್ಲಿ ಬಿಹಾರದ ಜನರ ವಿರುದ್ಧ ಎತ್ತಿಕಟ್ಟುತ್ತಿದೆ. ಈಗಾಗಲೇ ಒಂದು ವಾರದಲ್ಲಿ 4 ದಿನಗಳ ಕಾಲ ಬಂದ್ ನಡೆದು 10ಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ಈ ಸಮಸ್ಯೆಯನ್ನು ಬೆಳಕಿಗೆ ತರಲಾಗಿದೆ.

## ರೈಲ್ವೆ ವಲಯ ವಿಭಜನೆ

**ರೈಲ್ವೆ ವಲಯ ವಿಭಜನೆ:** ರೈಲ್ವೆವಲಯವನ್ನು ವಿಭಜಿಸುವ, ಸ್ಥಳಾಂತರಿಸುವ ಹೆಸರಿನಲ್ಲಿ ಇನ್ನೊಂದು ಸಮಸ್ಯೆಯನ್ನು ಹುಟ್ಟುಹಾಕಿದೆ. ಧನಬಾದ್ ರೈಲ್ವೆ ವಿಭಾಗವು ಹಿಂದೆ ಕಲ್ಕತ್ತದಲ್ಲಿರುವ ಪೂರ್ವವಲಯ ರೈಲ್ವೆಗೆ ಹೊಂದಿಕೊಂಡವು. ಇದೀಗ ಧನಬಾದ್ ವಿಭಾಗವನ್ನು ಹೊಸದಾಗಿ ಆರಂಭಿಸಲಾದ ಹಾಜಿಪೂರ್ ವಲಯಕ್ಕೆ ಸೇರಿಸಲಾಗಿದೆ. ಧನಬಾದ್ ವಿಭಾಗವು ಅತ್ಯಂತ ಲಾಭದಾಯಕವಾದ ವಿಭಾಗವಾಗಿದ್ದು, ಹಾಗೆಯೇ ಕರ್ನಾಟಕದಲ್ಲಿ ನೈರುತ್ಯ ವಲಯವನ್ನು ಹುಬ್ಬಳ್ಳಿಗೆ ವರ್ಗಾಯಿಸುವಾಗ ಬೆಂಗಳೂರಿಗೆ ಇನ್ನೊಂದು ವಲಯವನ್ನು ಕೊಡಬೇಕೆಂದು ತೀವ್ರ ಒತ್ತಾಯ ಮಾಡಲಾಗಿತ್ತು. ಬೇರೆ ರಾಜ್ಯಗಳಿಗೆ ಒಂದಕ್ಕಿಂತ ಹೆಚ್ಚು ರೈಲ್ವೆ ವಲಯಗಳನ್ನು ನೀಡಿದ ಬಿಜೆಪಿ ನೇತೃತ್ವದ ಕೇಂದ್ರಸರ್ಕಾರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸಿತ್ತು. ಇದೀಗ ಹುಬ್ಬಳ್ಳಿ ವಲಯಕ್ಕೆ ಸೇರಬೇಕಾಗಿದ್ದ ಗುಂಟಕಲ್ ವಿಭಾಗವನ್ನು ವರ್ಗಾಯಿಸುತ್ತಿದೆ.

ಹೀಗೆ ಅನವಶ್ಯಕವಾದ ಸಮಸ್ಯೆಗಳನ್ನು ಹುಟ್ಟು ಹಾಕಿ ಜನರನ್ನು ನೈಜ ಸಮಸ್ಯೆಗಳಿಂದ ದೂರ ಸರಿಸುವ ಕುತಂತ್ರ ಇದಾಗಿದೆ.

1996ರಲ್ಲೇ ಹೊಸ ವಲಯಗಳನ್ನು ಸ್ಥಾಪಿಸುವ ಪ್ರಸ್ತಾಪ ಬಂದಾಗ ಎಡಪಕ್ಷಗಳು ಅದರಲ್ಲೂ ಸಿಪಿಐ(ಎಂ) ಅದನ್ನು ವಿರೋಧಿಸಿತ್ತು. ಇದೀಗ ಪುನಃ ಹೊಸ ವಲಯಗಳನ್ನು ಸೃಷ್ಟಿಸುವ ಮೂಲಕ ರಾಜ್ಯ-ರಾಜ್ಯಗಳೊಳಗೆ ಮತ್ತು ಅಲ್ಲಿನ ಜನರ ನಡುವೆ ಅನೈಕ್ಯತೆ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ.

ವಿಪರ್ಯಾಸದ ಸಂಗತಿ ಎಂದರೆ ಎನ್.ಡಿ.ಎ ಸರಕಾರಕ್ಕೆ ಬೆಂಬಲ ನೀಡುತ್ತಿರುವ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್, ತಾನೇ ಪಶ್ಚಿಮ ಬಂಗಾಳ ಜನತೆಯ ವಾರಸುದಾರರೆಂಬಂತೆ ಕೇಂದ್ರಸರಕಾರದ ವಿರುದ್ಧ ಕಿಡಿಕಾಡುತ್ತಿರುವುದು. ಪಶ್ಚಿಮಬಂಗಾಳದ ಎಡರಂಗ ಸರಕಾರವು ಹೊಸ ವಲಯಗಳನ್ನು ಸ್ಥಾಪಿಸುವ ವಿಚಾರವನ್ನು ತಜ್ಞರ ಸಮಿತಿಗೆ ಒಪ್ಪಿಸಬೇಕೆಂದು ಸಲಹೆ ಮಾಡಿತ್ತು. ಸಂಕುಚಿತ ದೃಷ್ಟಿಕೋನ ಹೊಂದಿರುವ ವಾಜಪೇಯಿ ಸರಕಾರಕ್ಕೆ ಇದ್ಯಾವುದೂ ಬೇಕಿಲ್ಲ.

ನಿಜಾಂಶವೇನೆಂದರೆ, ಇಂದಿನ ರೈಲ್ವೆ ಮಂತ್ರಿ ನಿತೀಶ್‌ಕುಮಾರ್ ಅವರೇ ನೇಮಿಸಿದ ರಾಕೇಶ್ ಮೋಹನ್ ಸಮಿತಿಯು ಹೊಸ ರೈಲ್ವೆ ವಲಯಗಳನ್ನು ರಚಿಸಬಾರದೆಂದು ಶಿಫಾರಸ್ಸು ಮಾಡಿತ್ತು. ಅದೇ ಸಮಿತಿಯು ಶಿಫಾರಸ್ಸು ಮಾಡಿದ್ದ, ಕೆಲವೊಂದು ರೈಲ್ವೆ ವಿಭಾಗಗಳನ್ನು ಖಾಸಗೀಕರಣ ಮಾಡುವ ಶಿಫಾರಸ್ಸನ್ನು ಅಂಗೀಕರಿಸಿದ ಎನ್.ಡಿ.ಎ ಸರಕಾರ, ಹೊಸ ರೈಲ್ವೆ ವಲಯಗಳನ್ನು ರಚಿಸಬಾರದೆಂಬ ಶಿಫಾರಸ್ಸಿಗೆ ವಿರುದ್ಧವಾಗಿ ನಡೆದುಕೊಂಡಿದೆ.

ದೇಶದಾದ್ಯಂತ ಅಗಾಧವಾಗಿ ಹಬ್ಬಿ ಕೊಂಡಿರುವ ರೈಲ್ವೆಯು ದೇಶದ ಐಕ್ಯತೆಯನ್ನು ಸಾರುವ ಮತ್ತು ವಿವಿಧ ಸಂಸ್ಕೃತಿಗಳನ್ನು ಒಂದುಗೂಡಿಸುವ ಕಾರ್ಯಕ್ಷೇತ್ರವಾಗಿದೆ. ಯಾವುದೇ ರೈಲ್ವೆ ವೈಜ್ಞಾನಿಕ ಕಾರಣಗಳಿಲ್ಲದ ರೈಲ್ವೆ ವಲಯಗಳನ್ನು ವಿಭಜಿಸುವ ಕುತಂತ್ರವು ಜನತೆಯನ್ನು ಪ್ರತ್ಯೇಕತಾವಾದದೆಡೆಗೆ ಎಳೆಯುವ ದುಷ್ಟ ಮನಸ್ಸಿನಿಂದ ಕೂಡಿದೆ. ದೇಶದ ಐಕ್ಯತೆ ಉಳಿಯಬೇಕಾದಲ್ಲಿ ಆದಷ್ಟು ಶೀಘ್ರವಾಗಿ ಬಿಜೆಪಿ ಸರಕಾರವನ್ನು ಒದ್ದೋಡಿಸಬೇಕಾಗಿದೆ.



# ಎರಗುತ್ತಿದೆ ಭೀ

**ಬರವೀಗ ಬೆನ್ನ ಹತ್ತಿದೆ. ದೇಶದ ತುಂಬಾ ಕೆನ್ನಾಲಿಗೆ ಚಾಚುತ್ತಿದೆ. ಕಳೆ ... ಚೇತರಿಸಿಕೊಳ್ಳದ ರಾಜ್ಯದ ರೈತಾಪಿ-ಕೂಲಿಕಾರರು ಬೀಜ ಬಿತ್ತದೆ, ಬಿತ್ತಿದ ಬಿ... ಕಂಗಾಲಾಗಿದ್ದಾರೆ. ಅಂಗೈಯಲ್ಲಿ ಜೀವ ಹಿಡಿದು, ದರಕರುಗಳ ಪಾಡು ... ಚಿಂತಿತರಾಗಿದ್ದಾರೆ. ಕೇಂದ್ರ-ರಾಜ್ಯ ಸರ್ಕಾರಗಳು ಮಾತಿನ ಮಂಟಪ ಕಟ್ಟು... ಪರಿಣಾಮಗಳ ಗಮನ ಸೆಳೆವ ಲೇಖನ...**

ಕರ್ನಾಟಕ ರಾಜ್ಯದ ಇಡೀ ಗ್ರಾಮೀಣ ಜನ ವಿಭಾಗದ ಗಮನವೀಗ ಜಾತಕ ಪಕ್ಷಿಯಂತೆ ಮುಗಿಲಿನೆಡೆಗೆ ನೆಟ್ಟುನಿಂತಿದೆ! ಅಲ್ಲೇನಿದೆ? ಬರೀ ಒಣ ಮೋಡಗಳು! ನೀರು ತುಂಬಿದ ಮೋಡಗಳಿಲ್ಲ ಅನ್ನದಾತನ ತಲೆಯ ಮೇಲೆ ಬದುಕಿನ ಚಿಂತೆಯ ಭಾರ ಕವುಚಿ ಬಿದ್ದಿದೆ! ಸತತ 2ನೇ ಬಾರಿ ಮುಂಗಾರು ಸುರಿಯಲಿಲ್ಲ. ಈ ಬಾರಿ ಮುಂಗಾರಿನ ಆರಂಭದಲ್ಲಿ ಒಂದೆರೆಡು ಮೋಡಗಳು ಅಲ್ಲಲ್ಲಿ ಸುರಿದಿದ್ದರಿಂದ ಬಿತ್ತಿದ ಸುಮಾರು 50 ಲಕ್ಷಕ್ಕೂ ಅಧಿಕ ಎಕರೆ ಪ್ರದೇಶದ ಬೆಳೆಯು ನೀರಿಲ್ಲದೇ ಒಣಗುತ್ತಿದೆ. ತಲಾ ಎಕರೆಗೆ 2 ಸಾವಿರದಿಂದ 5 ಸಾವಿರದವರೆಗೆ ಬಿತ್ತನೆಯ ನಷ್ಟವನ್ನು ರೈತನ ತಲೆ ಮೇಲಿರಿಸಿದೆ. 1.5 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಕೂಲಿಕಾರರ, ಬಡರೈತನ ಕುಟುಂಬಗಳು ಹೊಟ್ಟೆಪಾಡಿಗೆ ಮಾಡುವುದೇನೆಂದು ಕಂಗಾಲಾಗಿವೆ.


**ದುಗುಡಗಳ ಗೂಡು**

ಇದೀಗ ಮಳೆ ತಾರದ ವರುಣ ದೇವರ ವಿರುದ್ಧ ಹಳ್ಳಿ-ಹಳ್ಳಿಗಳಲ್ಲಿ ಕಪ್ಪೆ ಮದುವೆ, ಕತ್ತೆಗಳ ಮೆರವಣಿಗೆ, ಸಪ್ತ ಭಜನೆಗಳು; ಊರಮ್ಮನನ್ನು ಕಳುಹಿಸುವುದು-ಕೋಣ, ಕುರಿ,ಕೋಳಿ ಬಲಿ ನೀಡುವುದು ಮುಂತಾದ ಕೆಲಸದಲ್ಲಿ ರೈತ-ಕೂಲಿಕಾರ ನಿರತನಾಗಿದ್ದಾನೆ! ಆದಾಗಲೂ ಮೋಡಗಳೇ ಕಾಣುತ್ತಿಲ್ಲ! ಮುಂದೇನು !? ಗುಳೇ ಅಥವಾ ವಲಸೆ ಹೋಗುವುದೇ...? ಎಲ್ಲಿಗೇ? ನೀರಾವರಿ ಪ್ರದೇಶಕ್ಕೆ? ಅಲ್ಲಿ ಕೆಲಸವಿದೆಯೇ?.. ಮತ್ತೆಲ್ಲಿಗೆ? ಬೆಂಗಳೂರು-ಮುಂಬೈ, ಚೆನ್ನೈ ನಗರಗಳು ಕೈಬೀಸಿ ಕರೆಯುತ್ತಿವೆ. ಅಲ್ಲಿ ಕೆಲಸ ಸಿಕ್ಕೀತೆ? ನನ್ನಂತಹವರು ಅಲ್ಲಿಗೆ ಸೇರುವ ಸಂಖ್ಯೆ ಎಷ್ಟು? ಮುಂದೆ ಸುರಿಯಬಹುದಾದ ಮಳೆ ದಿನಗಳವರೆಗೆ ಬದುಕು ಕಳೆಯುವುದು ಹೇಗೆ? ಮಕ್ಕಳು - ಮುದುಕರು-ರೋಗಿಗಳ ಗತಿ ಏನು? ಮುಂಬರುವ ಮಳೆಯ ದಿನಗಳವರೆಗೆ ನಮ್ಮ ಕುಟುಂಬದ ಸದಸ್ಯರ ಸಂಖ್ಯೆ ಹೀಗೆಯೇ ಉಳಿದೀತೆ? ಹೊರಟರೆ ಸುರಕ್ಷಿತವಾಗಿ ಮರಳಿ ಸೇರಬಲ್ಲವೇ? ಅಕ್ಕರೆಯಿಂದ ಸಾಕಿ ಸಲುಹಿದ ದನಗಳ ಗತಿ ಏನು?

ಹೀಗೆ ಹಲವು ಹತ್ತು ಆತಂಕಗಳ, ದುಗುಡದ ಗೂಡಾಗಿದೆ ಗ್ರಾಮೀಣ ಪ್ರದೇಶ! ಈ ದುಗುಡಗಳ ದಾವಾಗ್ನಿಯಲ್ಲಿ ಬಡವರೆಲ್ಲಾ ಸುಟ್ಟು ಹೋಗುತ್ತಿರುವಾಗ ಚಳಿ ಕಾಯಿಸಿಕೊಳ್ಳುವ ಖದೀಮರೂ, ಅವರ ಕಾರುಬಾರು ಇಲ್ಲದಿಲ್ಲ! ಅದು ನಡೆದೇ ಇದೆ.

**ಇದ್ದಬದ್ದದ್ದು ಮಾರಿ...**

ತಾಳಿ, ಸಣ್ಣಪುಟ್ಟ ಬಂಗಾರದೊಡವೆಗಳು, ಚಿಕ್ಕ ಚಿಕ್ಕ ಆಸ್ತಿಗಳು ಬದುಕಿಗಾಗಿ ಅಗ್ಗ ದರಕ್ಕೆ ಕೈ ಬದಲಾಯಿಸುತ್ತಿವೆ. ಬಡವರ ಬವಣೆಯು ಬರಗಾಲ ಕಾಳಸಂತೆಕೋರರ ಸುಗ್ಗಿಯಾಗಿ ಮಾರ್ಪಟ್ಟಿದೆ! ಗಿರಿವಿಗಿಟ್ಟ ವಸ್ತು ಒಡವೆಗಳಿಂದ ಕೆಲ ಕೂಲಿಕಾರರ - ಬಡರೈತರ ಮುಂಚೂಣಿ ಕಾಲುಗಳು ನಗರಗಳಿಗೆ, ಬೇರೆ ಬೇರೆ ಕೆಲಸಕ್ಕಾಗಿ ದೌಡಾಯಿಸಿವೆ!



**ಈ ಬರಗಾಲ ಭೀಕರ**

ಕೇರಳವನ್ನೂ ಒಳಗೊಂಡು ಇಡೀ ದಕ್ಷಿಣ ಭಾರತವೇ ಬರದ ಸಿಡಿಲಿಗೆ ತುತ್ತಾಗಿದೆ. ಇಡೀ ದೇಶದ ಶೇ 50 ರಷ್ಟು ಭಾಗದ ಪ್ರದೇಶ ಇದರಿಂದ ತತ್ತರಿಸುತ್ತಿದೆ. 12 ಕ್ಕೂ ಹೆಚ್ಚಿನ ರಾಜ್ಯಗಳು ಬರದಿಂದ ಬಳಲುತ್ತಿವೆ.

ಕರ್ನಾಟಕ ರಾಜ್ಯದಲ್ಲಿ ಸತತ 2ನೇ ಬಾರಿಗೆ ಮುಂಗಾರು ವಿಫಲವಾಗಿದೆ. ಈ ಬಾರಿ ಸರಾಸರಿ ಸಾಮಾನ್ಯ ಮಳೆಗಿಂತ ಶೇ 30 ರಿಂದ 40 ರಷ್ಟು ಕಡಿಮೆ ಮಳೆಯಾದುದೇ ಇದಕ್ಕೆ ಕಾರಣವಾಗಿದೆ! 23 ಕ್ಕೂ ಹೆಚ್ಚಿನ ಜಿಲ್ಲೆಗಳ 170 ಕ್ಕೂ ಅಧಿಕ ತಾಲೂಕುಗಳು ಈ ಬರದ ದವಡೆಗೆ ಸಿಲುಕಿವೆ.

ರಾಜ್ಯ ಸರ್ಕಾರದ ಉತ್ಪಾದನೆಯ ಅಂದಾಜು ತಲೆಕೆಳಗಾಗಿವೆ. ಕೋಟ್ಯಾಂತರ ಎಕರೆ ಪ್ರದೇಶವು ಬೆಳೆ ಇಲ್ಲದೇ ಬಿಕೋ ಎನ್ನುತ್ತಿದೆ. ಆಹಾರ ಧಾನ್ಯಗಳ ಕೊರತೆ ಕಾಣಿಸಿಕೊಳ್ಳಲಿದೆ. ಎಣ್ಣೆಕಾಳುಗಳ ಬೆಳೆ ಕೊರತೆಯಿಂದ ಮಲೇಶಿಯಾದ ತಾಳೆ ಎಣ್ಣೆ ವ್ಯಾಪಾರಿಗಳಿಗೆ ಮತ್ತೊಂದು ಸುಗ್ಗಿಯಾಗಲಿದೆ. ರಾಜ್ಯದ ಪ್ರಮುಖ ಜಲಾಶಯಗಳು ಇನ್ನೂ ಕೂಡಾ ಭರ್ತಿಗೊಂಡಿಲ್ಲ. ನಗರದ ಜನತೆಗೆ ಕುಡಿಯುವ ನೀರಿನ ತೊಂದರೆ ಉದ್ಭವಿಸಿದೆ. ನಗರಸಭೆಗಳು ಪರದಾಡುತ್ತಿವೆ. 3 ದಿನಗಳಿಗೊಮ್ಮೆ ನೀರು ಸಿಕ್ಕರೆ ಜನತೆಗದೇ ಭಾಗ್ಯವಾಗಿದೆ.

**ಬಿತ್ತುವುದಾ ಬಿಡುವುದಾ**

ಬಹುಶಃ ಮತ್ತೊಮ್ಮೆ ಕಾವೇರಿ ನೆರೆರಾಜ್ಯದೊಂದಿಗೆ ತಗಾದೆ ತಂದಾಳು! ನಮ್ಮಲ್ಲಿ ಮಳೆ ಬಾರದಿದ್ದರೇನು ಇದ್ದಾಳಲ್ಲ ಕಾವೇರಿ, ತುಂಗೆ... ಎಂದು ಬೀಗುತ್ತಿದ್ದ ನೀರಾವರಿ ಪ್ರದೇಶದ ಜನರು ಜಲಾಶಯ ಭರ್ತಿಗೊಳ್ಳದ್ದರಿಂದ ಚಿಂತಿತರಾಗಿದ್ದಾರೆ. ಬಿತ್ತುವುದಾ, ಬಿಡುವುದಾ ಎಂಬಂತಾಗಿದೆ. 2ನೇ ಬಾರಿ ಮಳೆ ಸುರಿಯದ್ದರಿಂದ ಬೋರ್‌ವೆಲ್‌ಗಳು ತಳಕಂಡು ಬತ್ತಿ ಹೋಗುತ್ತಿವೆ. ಅಥವಾ ಹೊರ ಬರುವ ನೀರಿನ ಪ್ರಮಾಣ ಕ್ಷೀಣಿಸುತ್ತಿದೆ. ಪ್ರತಿ ಎಕರೆಗೆ ಹತ್ತಾರು ಸಾವಿರ ಹೂಡಿರುವ ನೀರಾವರಿ ಬೆಳೆಗಾರರು ತಲೆಯ ಮೇಲೆ ಕೈಯನ್ನಿಟ್ಟು ಕೊಂಡಿದ್ದಾರೆ. ಕೋಟ್ಯಾಂತರ ಬಡರೈತ-ಕೂಲಿಕಾರರು ಬೀದಿಪಾಲಾಗಿದ್ದಾರೆ. ಗ್ರಾಮೀಣ ಪ್ರದೇಶದ ಹಲವು ನೂರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿದೆ! ದನಗಳು ಕಸಾಯಿಖಾನೆಯೆಡೆಗೆ ಮೆಲ್ಲಮೆಲ್ಲನೆ ಸಾಗುತ್ತಿವೆ. ಮಳೆಯ ಕೊರತೆಯಿಂದ ಜಲವಿದ್ಯುತ್ ಕ್ಷಾಮ ಬೆಲೆಏರಿಕೆಗೆ ತನ್ನದೇ ಕಾಣಿಕೆ ನೀಡಲಿದೆ.

**ರೈತನಿಗೆ ಮತ್ತೊಂದು ಅಂತಿಮ ಪ್ರಹಾರ!**

**ಕೂಲಿಕಾರನ ಬದುಕು-ಅಲ್ಲೋಲ ಕಲ್ಲೋಲ!**

ಕಳೆದ ಫೆಬ್ರವರಿ- ಮಾರ್ಚ್‌ಗಳಿಂದ ಗ್ರಾಮಗಳಲ್ಲಿ ಬಡ್ಡಿ ವ್ಯಾಪಾರಿಗಳ, ಭೂಮಾಲಿಕರ ಆರ್ಭಟವೇ ಆರ್ಭಟ, ವಿಶ್ವಬ್ಯಾಂಕ್ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಶರತ್ತುಗಳು ಹಾಗೂ ವಿಶ್ವವಾಣಿಜ್ಯ ಸಂಘಟನೆಯ ಒಪ್ಪಂದಗಳು ಗ್ರಾಮಗಳ ರೈತರನ್ನು ತೀವ್ರತರ ಹಾನಿಗೊಳ ಪಡಿಸಿವೆ. ಪ್ರತಿ ಎಕರೆಗೆ ಉತ್ಪಾದನಾ ವೆಚ್ಚ ಕಳೆದ ಹತ್ತು ವರ್ಷಗಳಲ್ಲಿ 2-3ಪಟ್ಟು ಬೆಳೆದಿದೆ! ರೈತರು ಖರೀದಿಸುವ ವ್ಯವಸಾಯ ಹಾಗೂ ಇತರೆ ದಾಸ್ತಾನಿನ ವ್ಯಾಪಕ ಬೆಲೆ ಏರಿಕೆಯು ತೀವ್ರ ಭಾದಿಸಿದೆ! ಸತತ ಬೆಳೆಗಳ ಬೆಲೆ ಕುಸಿತವು ಅವರನ್ನು ಸಾಲಗಾರರನ್ನಾಗಿಸಿ ಗ್ರಾಮಗಳ ಬಡ್ಡಿ ವ್ಯಾಪಾರಿಗಳನ್ನು ಗುಲಾಮಗಿರಿಗೆ ತಳ್ಳಿದೆ.

ಪ್ರತಿಯೊಬ್ಬ ರೈತನು ಲಕ್ಷಾಂತರ ರೂಪಾಯಿಗಳ ಸಾಲಗಾರನಾಗಿದ್ದಾನೆ. ಅವುಗಳನ್ನು ತೀರಿಸಲಾಗದೇ ಬದುಕಿನ ಬಂಡಿ ಮುಂದೆ ಸಾಗಿಸಲು ಸಾಧ್ಯವಾಗದೇ ವಿಷ ಕುಡಿಯುವುದು- ತಲೆಮರೆಸಿಕೊಳ್ಳುವುದು ಈಗ ಸಾಮಾನ್ಯ ಸಂಗತಿಯಾಗಿದೆ. ಅದೇ ರೀತಿ ಈ ಕಡೆ ಸರ್ಕಾರದ ದಿವ್ಯ ನಿರ್ಲಕ್ಷ್ಯ ಮುಂದುವರೆದಿರುವಾಗ ಭೂಮಾಲಿಕರು, ಬಡ್ಡಿವ್ಯಾಪಾರಿಗಳು -ಗೊಬ್ಬರ-ಬೀಜ ಔಷದಿ ನೀಡಿದ ಧಣಿಗಳು ರೈತರ ಮೇಲೆ ಒತ್ತಡ ಹೇರಿ ದುಬಾರಿ ಬಡ್ಡಿಯ ಸಾಲ ವಸೂಲಿ ಮಾಡುವ ದೌರ್ಜನ್ಯ - ರುದ್ರನರ್ತನ ಸಾಮಾನ್ಯವಾಗಿದೆ! ಪ್ರತಿದಿನ ಬೆಳಗಾದರೆ ಧಣಿಗಳೆಲ್ಲಾ ಒಂದೆಡೆ ಸೇರುವುದು - ಮಂದಿ ಮಾಗದರನ್ನು ಜೊತೆ ಸೇರಿಸು ವುದು ಪಂಚಾಯ್ತಿ ತೀರ್ಪುನೀಡಿ ಆಸ್ತಿಗಳನ್ನು ಅಗ್ಗದರಕ್ಕೆ ಲಪಟಾಯಿಸುವುದು ನಡೆದೇ ಇದೆ. ಬೀದಿಯ ಮೇಲಿನ ಅವಮಾನ ಸಹಿಸಲಾಗದ ಅನೇಕ ಕುಟುಂಬಗಳು ಅಗ್ಗದರಕ್ಕೆ ಭೂಮಿಯನ್ನು ಮನೆಯನ್ನು ಮಾರಿ ಕೈತೊಳೆದುಕೊಳ್ಳುತ್ತಿವೆ. ಅದೇ ರೀತಿ ಕೈಬೀಸಿ ಕರೆಯುವ ಬೀದಿಯೆಡೆಗೆ ಸಾಗಿವೆ! ಸಾಗುತ್ತಿವೆ!

ರೈತರ ಭವಣೆಯ ಇಂತಹ ಅತಂತ್ರ ಬದುಕಿಗೆ ಕಳೆದೆರಡು ವರ್ಷಗಳ ಪ್ರಕೃತಿಯ ಮುನಿಸು ಮತ್ತೊಂದು ಅಂತಿಮ ಗದಾಪ್ರಹಾರವಾಗಿ ಪರಿಣಮಿಸಿದೆ!

**ಹಸಿಬರ ತೆರಳುವುದೆಲ್ಲಿಗೆ?**

ಈಗೆಲ್ಲಿಗೆ ಕೂಲಿಕಾರರು ಬಡ ರೈತರು ಹೊಟ್ಟೆಗಾಗಿ ತೆರಳುವುದು ಕಳೆದ ಬರಗಾಲದಲ್ಲಿಯೇ ನೀರಾವರಿ ಪ್ರದೇಶಕ್ಕೆ ತೆರಳಿ ವಾಪಸು ಬಂದಾಗಿದೆ!

ಕಳೆದ 7-8 ವರ್ಷಗಳಲ್ಲಿ ಬಹಳಷ್ಟು ಹೊಸ ಸನ್ನಿವೇಶ ಗ್ರಾಮಗಳಲ್ಲಿ ನಿರ್ಮಾಣವಾಗಿದೆ. ಮುಖ್ಯವಾಗಿ ನೀರಾವರಿ ಪ್ರದೇಶವು ಈ ಹಿಂದೆ ಬರಪೀಡಿತ ಪ್ರದೇಶದ ಜನತೆಗೆ ಆಶ್ರಯ ತಾಣವಾಗಿತ್ತು. ಇವರು ಬರುವುದರಿಂದ ಸ್ಥಳೀಯ ಕೂಲಿಕಾರರಿಗೆ ಸ್ಪರ್ಧೆ ಬಂದು ಕೆಲಮಟ್ಟಿಗೆ ಕೂಲಿ ಬೆಲೆ ಏರುವುದನ್ನು ತಡೆಯುತ್ತಿತ್ತಾದರೂ ಎಲ್ಲರಿಗೂ ಹೊಟ್ಟೆಗೆ ಹಿಡಿ ಕೂಲಿಗೆ ವಂಚನೆಯಿರಲಿಲ್ಲ! ಈಗ ಪರಿಸ್ಥಿತಿ ಹಾಗುಳಿದಿಲ್ಲ! ಎತ್ತುಗಳನ್ನಿಟ್ಟು ಉಳುಮೆ ಮಾಡುವುದೇ ಅರ್ಧದಷ್ಟು ಕಡಿಮೆಯಾಗಿದೆ. ಹಲವಾರು ಹೊಸ ಯಂತ್ರಗಳು ಕೂಲಿಯ ಕೆಲಸವನ್ನು ಕಬಳಿಸಿವೆ. ಕೊಯ್ಲುಯಂತ್ರಗಳು -ಕಣಮಾಡುವ ಯಂತ್ರಗಳು ಸುಗ್ಗಿಯ ಕನಿಷ್ಠ 3 ತಿಂಗಳ ಕೆಲಸವನ್ನು ಪ್ರತಿ ಸೀಜನ್‌ಗೆ ಕಸಿದುಕೊಂಡಿವೆ! ಕೇವಲ ನಾಟಿ ಮಾಡುವ ಸೀಜನ್ ಉಳಿದಿತ್ತು. ಪರಿಣಾಮವಾಗಿ ನೀರಾವರಿ ಪ್ರದೇಶದ ಕೂಲಿಕಾರರೇ ಕೆಲಸವಿಲ್ಲದೆ ವಲಸೆ ಹೋಗುವಂತಾಗಿದೆ.

ತುಂಗಭದ್ರಾ ನದಿಯ ಇಕ್ಕೆಲಗಳ ಲಕ್ಷಾಂತರ ಎಕರೆ ಪ್ರದೇಶದ ಭತ್ತದ ಬೆಳೆಯಲ್ಲಿ ಇದೀಗ ನಾಟಿ ಮಾಡುವ ಯಂತ್ರ ಈ ವರ್ಷ ಕಾಣಿಸಿಕೊಂಡು ಈ ಪ್ರದೇಶದ ಸುಮಾರು 30 ಸಾವಿರ ಕೂಲಿಕಾರರಿಗೆ ಇಡೀ ವರ್ಷದಲ್ಲಿ ಕೃಷಿಯೊಳಗೆ ಒಂದೇ ಒಂದು ದಿನ ಕೂಲಿ ಕೆಲಸ ಇಲ್ಲದಂತೆ ಬೆದರಿಕೆ ಒಡ್ಡಿದೆ ಮತ್ತು ಬತ್ತದ ಕೃಷಿಯಿಂದಾಚೆ ಎತ್ತಿ ಬಿಸಾಡಿದ ಕೊನೆಯ ಯಂತ್ರವಾಗಿದೆ.

## ಪ್ರಕೃತಿ ವಿಕೋಪವೋ.... ಮಾನವ ನಿರ್ಮಿತವೋ!

ಹೌದು! ಪ್ರಕೃತಿ ವಿಕೋಪ ಸರ್ಕಾರ ಹೇಗೆ ಹೊಣೆಗಾರನಾದೀತು!?

ಪ್ರತಿಬಾರಿ ಬರಗಾಲ ಅತಿವೃಷ್ಟಿಯಾದಾಗಲು ಸರ್ಕಾರ ನಡೆಸುವ ಆಳುವ ಧಣಿಗಳು, ಹಾಗೂ ಸರ್ಕಾರ ಅವರ ಏಜೆಂಟರ ಮಾತುಗಳು! ಆದ್ದರಿಂದಲೇ ಎಸ್.ಎಮ್.ಕೃಷ್ಣರ ಕರ್ನಾಟಕ ರಾಜ್ಯ ಸರ್ಕಾರ ಕೆಳಗಿನ ವಾಸ್ತವಕ್ಕೆ ತೀಕ್ಷ್ಣವಾಗಿ- ತೀವ್ರವಾಗಿ ಸ್ಪಂದಿಸಿ ಕಾರ್ಯನಿರತನಾಗದೇ ಪತ್ರಿಕೆಗಳಲ್ಲಿ ಬರ ಓಡಿಸುವ ಮಾತನಾಡುತ್ತದೆ: ಪತ್ರಿಕಾ ಪ್ರಚಾರ ಪಡೆಯುತ್ತಿದೆ. ವಾಜಪೇಯಿ ನಾಯಕತ್ವದ ಎನ್.ಡಿ.ಎ ಕೇಂದ್ರ ಸರ್ಕಾರವೂ ಇದಕ್ಕಿಂತ ಭಿನ್ನವಾಗಿಯೇನು ನಡೆದುಕೊಳ್ಳುತ್ತಿಲ್ಲ! ಸಾವಿರಾರು ಕೋಟಿಗಳದ್ದೇ ಮಾತು. ಆದರೆ ಕಾರ್ಯಗತ ಎಲ್ಲಿ?

ಮಂತ್ರಿಗಳು ಜಿಲ್ಲೆಗಳಲ್ಲಿ ಸದಾ ಬಡಬಡಿಸುತ್ತಿದ್ದಾರೆ! ಸರ್ಕಾರದ ಬೊಕ್ಕಸ ಗಟ್ಟಿಯಿದೆ! ಹಣದ ಕೊರತೆ ಇಲ್ಲ, ಬರ ಎದುರಿಸುತ್ತೇವೆ! ಎನ್ನುವುದು ಎಲ್ಲೆಡೆ ಕಂಡುಬರುತ್ತಿದೆ.

ದನಗಳು ಕಸಾಯಿಖಾನೆ ಕಂಡರೂ, ಜನತೆ ಹಸಿವಿನಿಂದ ಕಂಗಾಲಾಗಿ ಎಲ್ಲಿಗೆ ತೆರಳುವುದೆಂದು ಚಿಂತಿತರಾಗಿರುವಾಗ ಸಂತೈಸುವ ಕೆಲಸ ಜಿಲ್ಲಾ ಪಂಚಾಯತ್ ಆಗಲಿ, ತಾಲೂಕಾ ಪಂಚಾಯತ್ ಆಗಲೀ, ಶಾಸಕರಾಗಲೀ, ಮಂತ್ರಿಗಳಾಗಲೀ, ಪಾರ್ಲಿಮೆಂಟ್ ಸದಸ್ಯರಾಗಲೀ ಮಾಡುತ್ತಿಲ್ಲ! ಕೂಲಿ ಕೆಲಸ ನಡೆದಿಲ್ಲ, ಮತ್ತಿತರೆ ಕೆಲಸಗಳೂ ಗಂಭೀರವಾಗಿ ನಡೆದ ವರದಿಗಳಿಲ್ಲ! ಜಿಲ್ಲಾವಾರು ಸರಿಯಾದ ಮಾಹಿತಿಯೂ ಸರ್ಕಾರಕ್ಕಿಲ್ಲ! ಅಧಿಕಾರಿಗಳು ಭೀಕರ ಬರದ ಪರಿಸ್ಥಿತಿಯನ್ನು ಸರ್ಕಾರಕ್ಕೆ ಸರಿಯಾಗಿ ವಿವರಿಸಿಲ್ಲ.! ಮತ್ತೊಮ್ಮೆ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹಿಡಿತವಿಲ್ಲವೆಂದು ಸಾಬೀತಾಗುತ್ತಿದೆ ಕೆಲವೊಮ್ಮೆ ಹೇಳಿಕೆಗಳು ಹಾಸ್ಯಾಸ್ಪದವೆಂಬುದು ಕಂಡುಬರುತ್ತಿವೆ.

# ...ರ ಬರ

...ದ ಆಘಾತದಿಂದ ಇನ್ನೂ ...ಟ್ಟು ಹೋಗುತ್ತಿರುವುದನ್ನು ಕಂಡು ... ನಡೆಯುವುದೆಲ್ಲಿಗೆ ಎಂದು ...ರದ ಬವಣೆ-ಅದರ ಗಂಭೀರ

**ಯು.ಬಸವರಾಜು**

ಮಳೆಯಾಶ್ರಯದ ಬಡವನಿಗೆ ಮಳೆಬಾರದೇ ಬರವನ್ನು ಎದುರಿಸಿದರೆ ನೀರಾವರಿ ಪ್ರದೇಶದ ಕೂಲಿಕಾರನಿಗೆ ಮಳೆ ಬಂದರೂ- ಬೆಳೆ ಬಂಪರ್ ಬಂದರೂ ನದಿ ಹರಿದರೂ - ನದಿ ಬತ್ತಿದರೂ ಎರಡೂ ಒಂದೇ ಆಗಿದೆ!

**ಎಲ್ಲಿದೆ ಕೆಲಸ...?**

ಸರ್ಕಾರಿ ಕೆಲಸಗಳಲ್ಲಿ ಯಥೇಚ್ಛ ಯಂತ್ರಗಳ ಬಳಕೆಯಾಗುತ್ತದೆ! ರಸ್ತೆ ನಿರ್ಮಾಣ ಬಹಳಷ್ಟು ಕೂಲಿ ಕೆಲಸ ಒದಗಿಸುವ ಕಾಮಗಾರಿಯಾಗಿತ್ತು. ಅದರಲ್ಲೂ ನೆಲ ಅಗೆಯುವ ಸಮತಟ್ಟು ಮಾಡುವ, ಟಾರ್ ಕಲಸುವ, ಟಾರ್ ರಸ್ತೆ ನಿರ್ಮಿಸುವ ಶೇ99ರಷ್ಟು ಕೆಲಸ ಯಂತ್ರಗಳ ಪಾಲಾಗಿವೆ! ನಗರಗಳಲ್ಲೂ ಲಕ್ಷಾಂತರ ಸಣ್ಣ ಕೈಗಾರಿಕೆ ಮುಚ್ಚಿರುವುದು; ಹೊಸ ತಂತ್ರಜ್ಞಾನ ಅಲ್ಲಿಯೂ ಬಳಕೆಗೊಳ್ಳುತ್ತಿರುವುದು ಎಲ್ಲವೂ ಸೇರಿ ಕೇವಲ ಕಟ್ಟಡ ಕಾಮಗಾರಿ ಕೆಲಸ ಬಿಟ್ಟರೇ ಕೆಲಸವೇ ಇಲ್ಲದಂತಾಗಿದೆ.

ಪರಿಣಾಮವಾಗಿ ನೀರಾವರಿ ಪ್ರದೇಶದ ಕೆಲಸಗಾರನಿಗೂ ಮಳೆಯಾಧಾರಿತ ಪ್ರದೇಶದ ಕೆಲಸಗಾರನಿಗೂ ನಗರದಲ್ಲಿಯೂ ಕೆಲಸದ ಅಭಾವ ದಟ್ಟವಾಗಿ ಕಂಡುಬರುತ್ತವೆ. ನಗರಗಳಿಗೆ ವಲಸೆ ಹೋಗಿ ವಾಪಸು ಬಂದವರ ಸಂಖ್ಯೆಯೂ, ಕೆಟ್ಟ ಅನುಭವವೂ "ಕೆಟ್ಟು ಪಟ್ಟ ಸೇರು" ಎಂಬ ಗಾಥೆಯನ್ನು ಅರ್ಥಹೀನಗೊಳಿಸಿದೆ.

ಇನ್ನೂ ಸೇರಬೇಕಾದುದು ಕಟ್ಟಡ ಕಾಮಗಾರಿಗೆ ಎಂದಾದರೇ ಅದು ಯಥೇಚ್ಛವಾಗಿ ಸಿಗಬಹುದಾದ ದೊಡ್ಡನಗರಗಳಾದ ಮುಂಬೈ - ಬೆಂಗಳೂರು - ಚೆನ್ನೈ- ಹೈದರಾಬಾದ್‌ಗಳಿಗೆ! ದಕ್ಷಿಣ ಭಾರತವೇ ಬರಕ್ಕೀಡಾದಾಗ ಅಲ್ಲಿಗೆ ಸುಳಿದು ವಾಪಸು ಬರುವವರ ಸಂಖ್ಯೆ ಅಥವಾ ಸಾಮಾಜಿಕ ಸಂಕಟ ಉಂಟು ಮಾಡುವವರ ಸಂಖ್ಯೆ- ಹಸಿವಿನಿಂದಾದ ಸಾವುಗಳಿಗೆ ಲೆಕ್ಕ ಇಡಬಹುದೇ!

**ಇಂದಿನ ಇಂಡಿಯಾ ನಾಳೆಯ ಸೊಮಾಲಿಯಾ?!**

ಅಲ್ಲಿ ಯಥೇಚ್ಛ ಮಳೆ ಸುರಿಯುತ್ತಿತ್ತು! ಬಹಳಷ್ಟು ಉತ್ಪಾದನೆಯಾಗುತ್ತಿತ್ತು. ಗೋಡಾನುಗಳು- ಅಂಗಡಿಮಳಿಗೆಗಳು ಬಹಳಷ್ಟು ತುಂಬಿತುಳುಕುತ್ತಿತ್ತು. ಯಾವುದಕ್ಕೂ ಕೊರತೆಯಿರಲಿಲ್ಲ. ಆದಾಗ್ಯೂ ಅಲ್ಲಿಯ ಜನ ಹಸಿವಿನಿಂದ ಸತ್ತರು. ಅದು ಸೋಮಾಲಿಯಾ!? ಇದೀಗ ತುಂಗಭದ್ರಾ ನದಿಯ ಇಕ್ಕೆಲದ ಭಾಗ ಇದೇ ರೀತಿಯ ಇತರೇ ಪ್ರದೇಶ ಹೌದು. ಅಲ್ಲಿ ಯಥೇಚ್ಛ ನೀರು, ಸಮೃದ್ಧ ಬೆಳೆ. ಗುಡಿಸಲುಗಳಲ್ಲಿ ಹಸಿವಿನ ರೋಧನ. ಇದು ಭಾರತ ಮುಂದೆ ಸೋಮಾಲಿಯಾ ಹಿಂದೆ...!?

ಮಳೆಯಾಶ್ರಯದಲ್ಲಿ ಮಳೆ ಬಾರದಾಗ ಬರ - ಅಲ್ಲಿಂದೆಲ್ಲಿಗೆ ಮಳೆ ಬರುವವರೆಗೆ?

ನೀರಾವರಿ ಪ್ರದೇಶದಲ್ಲಿ ಕೆಲಸವಿಲ್ಲದ ಹಸಿ ಬರ... ಈಗ ತಾನೇ ಆರಂಭ, ನಡೆಯುವುದೆಲ್ಲಿಗೇ....!? ಎಲ್ಲಿಯವರೆಗೆ!?

**ಆದ್ದರಿಂದಲೇ ಇದು ಬೀಕರ ಬರಗಾಲ!**

**ಹೋರಾಡುವುದೊಂದೇ ದಾರಿ**

ಸರ್ಕಾರದ ಎಲ್ಲ ಕೆಲಸಗಳಲ್ಲಿ ಹಾಗೂ ಕೃಷಿ ಕೆಲಸಗಳಲ್ಲಿನ ಯಥೇಚ್ಛ ಯಂತ್ರ ಬಳಕೆಯನ್ನೂ ಈ ಕೂಡಲೇ ನಿಷೇಧಿಸಬೇಕು! ಕೂಲಿಗಾಗಿ - ಕಾಳು ಯೋಜನೆಯಡಿ ಪ್ರತಿಯೊಂದು ಗ್ರಾಮಗಳಲ್ಲಿ ಬರ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ನಡೆಸುವುದು! ಸಹಕಾರಿ ಮತ್ತಿತರೆ ಬ್ಯಾಂಕ್ ಸಾಲ ಮತ್ತು ಖಾಸಗೀ ದುಬಾರಿ ಬಡ್ಡಿ ಸಾಹುಕಾರರ ಬಲಾತ್ಕಾರದ ಸಾಲ ವಸೂಲಾತಿಯನ್ನು ತಡೆಯಬೇಕು. ಬಡರೈತರ ಸಾಲವೂ ಸೇರಿ ಇಲ್ಲಾ ರೈತರ ಎಲ್ಲಾ ವಿಧದ ಬಡ್ಡಿಯನ್ನು ಮನ್ನಾ ಮಾಡಬೇಕು! ಪ್ರತಿಯೊಂದು ಗ್ರಾಮ ಪಂಚಾಯ್ತಿಯಲ್ಲಿ ಮೇಲಿನ ಬ್ಯಾಂಕ್ ಹಾಗೂ ಗಂಜೀಕೇಂದ್ರಗಳನ್ನೂ ತೆರೆಯಬೇಕು! ಮುಂದಿನ ಸೀಜನ್‌ನಲ್ಲಿ ಬಿತ್ತನೆಗೆ ಉಚಿತ-ಬೀಜ-ಗೊಬ್ಬರ ನೀಡಲು ಸೂಕ್ತಕ್ರಮ ಕೈಗೊಳ್ಳಬೇಕು! ಬರದ ಶಾಶ್ವತ ನಿವಾರಣೆಗಾಗಿ


(1) ಸರ್ಕಾರದ ಕೆಲಸಗಳಲ್ಲಿ ಯಂತ್ರಗಳ ಬಳಕೆ ನಿಷೇಧಿಸಬೇಕು

(2) ಮಳೆಯಾಶ್ರಯದ, ಪ್ರದೇಶಕ್ಕೆ ನೀರು ಒದಗಿಸಲು ನೀರಾವರಿ ಕ್ರಮಗಳಿಗೆ ಮುಂದಾಗಬೇಕು.

(3)ರಾಜ್ಯದಾದ್ಯಂತ ಬೀಳುಬಿಟ್ಟಿರುವ ಬಂಜರು ಹಾಗೂ ಸಾಮಾಜಿಕ ಅರಣ್ಯದ ಮತ್ತು ಭೂಮಿತಿ ಕಾಯ್ದೆಯನ್ವಯ ಪಡೆಯಲಾದ ಭೂವಿತರಣೆ ಮಾಡಬೇಕು.

(4)ಕೂಲಿಕಾರರಿಗೆ ಸ್ವಉದ್ಯೋಗದಲ್ಲಿ ತೊಡಗಲು ವ್ಯಾಪಕ ತರಬೇತಿ ಹಾಗೂ ಬಡ್ಡಿಯಿಲ್ಲದ ಹಾಗೂ ಸಬ್ಸಿಡಿ ಸಾಲ ಒದಗಿಸಬೇಕು ಮುಂತಾದ ಕ್ರಮಗಳಿಗಾಗಿ ಸರ್ಕಾರಗಳು ಮುಂದೆಬರುವಂತೆ; ಕೇಂದ್ರ- ರಾಜ್ಯಸರ್ಕಾರಗಳು ಸಾಮಾಜಿಕ ಸಂಕ್ಷೇಮದ ಕರ್ತವ್ಯದ ಬರವನ್ನೂ ಹೊಂದಿದ್ದು ಇದನ್ನು ನಿವಾರಿಸುವಂತೆ ಮುಖ್ಯವಾಗಿ ಕೂಲಿಕಾರರು - ಬಡರೈತರು ಸಾಮಾಜಿಕ ಬದ್ಧತೆಯಿರುವ ಎಲ್ಲರೂ ಹೋರಾಡುವುದೊಂದೇ ಮಾರ್ಗವಾಗಿದೆ.

**ಸಾಕಿನ್ನು ಕತ್ತೆ- ಕಪ್ಪೆ- ಕುರಿ- ಕೋಳಿಯ**
**ಅಮ್ಮನ ಮೆರವಣಿಗೆ**
**ಬೇಕಿನ್ನು ಆರ್ಥಿಕ ಅಭಿವೃದ್ಧಿಗಾಗಿ**
**ಜನಪ್ರವಾಹದ ಉರುವಣಿಗೆ.**



ಯಾತಕ ಮಳೆ ಹೋದವೋ....
ಲೋಕ ತಲ್ಲಣಿಸುತಾವೋ

## ರಾಜ್ಯ ಮಾತ್ರವಲ್ಲ, ಬಹುತೇಕ ದೇಶವೆಲ್ಲಾ ಬರವೋ ಬರ...

ಕರ್ನಾಟಕ ಮಾತ್ರವಲ್ಲ, ಆಂಧ್ರಪ್ರದೇಶ, ಕೇರಳ, ತಮಿಳುನಾಡು, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಂಜಾಬ್, ರಾಜಸ್ಥಾನ, ಹರಿಯಾಣ, ಹಿಮಾಚಲ ಪ್ರದೇಶ ಹೀಗೆ ದೇಶದ ಬಹುತೇಕ ರಾಜ್ಯಗಳಲ್ಲಿ ಈ ವರ್ಷ 'ಬರ' ಆವರಿಸಿದೆ.

ಇದೇ ಸಂದರ್ಭದಲ್ಲಿ ಆಸ್ಸಾಂ ಮತ್ತು ಬಿಹಾರ್‌ಗಳಲ್ಲಿ ಪ್ರವಾಹವೆಂಬುದು ಒಂದು ವಿಚಿತ್ರವೆನಿಸಿದರೂ, ಪ್ರಕೃತಿಯ ವಿಕೋಪದ ಜೊತೆಗೆ ಆಳುವ ವರ್ಗದ ನೀತಿಗಳು ಸಹಕಾರವೆಂಬುದು ಅಷ್ಟೇ ಸತ್ಯ.

ಸರ್ಕಾರಗಳ ಆಕ್ರಮಣಗಳ ಜೊತೆಗೆ ಈ ಪ್ರಕೃತಿಯ ವಿಕೋಪಗಳು ಸೇರಿ, ರೈತ, ಕೂಲಿಕಾರರ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಒಂದೇ ಕಡೆ 'ಬರ' ಮತ್ತೊಂದು ಕಡೆ 'ಪ್ರವಾಹ'ಗಳಿಂದ ಕೊಂದವರು, ನೋವಿಗೆ ಗುರಿಯಾದವರು ರೈತ ಕೂಲಿಕಾರರು, ಮಾತ್ರವಲ್ಲ ಇವರ ಮಿತ್ರರಾದ ಪಶು, ಸಂಪತ್ತು ಸಹ. ಕೆಲಸವಿಲ್ಲವೆಂದು ವಲಸೆ ಹೋಗೋಣವೆಂದರೆ, ಬಹುತೇಕ ಕಡೆ 'ಬರ'ವೇ. ಇನ್ನೂ ಇದರ ಫಲವಾಗಿ 'ನಗರ' ಪ್ರದೇಶಗಳಲ್ಲಿಯು ಕೂಲಿಕಾರರ ವಲಸೆ ಅಧಿಕವಾಗಿ, ಅಲ್ಲಿಯು ಕೆಲಸಕ್ಕೆ 'ಬರ' ಬಂದಿದೆ. ಇರುವ ಆಸ್ತಿಗಳನ್ನು ಬಿಟ್ಟು ವಲಸೆ ಹೋಗುವುದು ಹೇಗೆ ಎನ್ನುವುದರ ಜೊತೆಗೆ ತನ್ನನ್ನು ನಂಬಿರುವ ಪಶುಗಳನ್ನು ಏನು ಮಾಡುವುದು ಎಂಬುದು ಮತ್ತಷ್ಟು ಗಂಭೀರ ಸ್ಥಿತಿ ರೈತನದ್ದು. ಇಂತಹ ಸ್ಥಿತಿಯಲ್ಲಿ ಕೆಲಸ ಇಲ್ಲ, ಊಟ ಇಲ್ಲ ಮತ್ತು ತನ್ನ ಎದುರಿಗೆ ಕುಡಿಯಲು ನೀರು, ಆಹಾರ ವಿಲ್ಲದೆ. ಪ್ರಾಣಿ, ಪಶುಗಳು ನರಳುತ್ತಿರುವ ಭಯಾನಕ ದೃಶ್ಯಗಳು.

ಇಷ್ಟೆಲ್ಲ ಗಂಭೀರ ಸ್ಥಿತಿ ಒಂದು ರಾಜ್ಯದಲ್ಲಿ ಮಾತ್ರವಲ್ಲ ಬಹುತೇಕ ಇಡೀ ದೇಶಗಳಲ್ಲಿ ಬಂದಿದ್ದರೂ, ಪರಿಸ್ಥಿತಿಯನ್ನು ಎದುರಿಸಲು ಸರ್ಕಾರಗಳು, ಮುಖ್ಯವಾಗಿ ಕೇಂದ್ರ ಸರ್ಕಾರ ಮುಂದಾಗುತ್ತಿಲ್ಲ. 66 ಮಿಲಿಯನ್‌ಟನ್‌ಗಳಷ್ಟು ಆಹಾರದ ದಾಸ್ತಾನು ಮೇಲೆ ಕುಳಿತಿರುವ ಬಿಜೆಪಿ ಕೇಂದ್ರ ಸರ್ಕಾರ, ಹಸಿವಿನಿಂದ ಕೂಲಿಕಾರರು ಸಾಯುವುದನ್ನು ನೋಡುತ್ತಾ ಕಾಲಹರಣ ಮಾಡುತ್ತಿದ್ದರೆ ಸಾಲ ವಸೂಲಿಯನ್ನು ತೀವ್ರಗೊಳಿಸಿ ರೈತರ ಮನೆಗಳ, ಆಸ್ತಿಗಳ ಜಪ್ತಿಯನ್ನು ಮುಂದುವರಿಸಲಾಗುತ್ತಿದೆ. ಪಶುಗಳಿಗೆ ಆಹಾರ, ನೀರು ರೈತ ಕೂಲಿಕಾರರ ಬೆಳೆ ನಷ್ಟ, ಕೆಲಸದ ನಷ್ಟಕ್ಕೆ ಪರಿಹಾರಗಳನ್ನು ನೀಡಲು ಮೀನಮೇಷ ಎಣಿಸಲಾಗುತ್ತಿದೆ

ಈ ಭಯಾನಕ ಸ್ಥಿತಿ ಕುರಿತು ಇತ್ತೀಚೆಗೆ ನವದೆಹಲಿ ಸಭೆ ಸೇರಿದ್ದ ಅಖಿಲಭಾರತ ಕಿಸಾನ್ ಸಭಾ (AIKS) ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (AIAWO) ಸಂಘಟನೆಗಳ ರಾಷ್ಟ್ರ ಮುಖಂಡರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳನ್ನು ಖಂಡಿಸಿ, ತಕ್ಷಣ, ಬರಕ್ಕೆ ಗುರಿಯಾಗಿರುವ ರಾಜ್ಯಗಳನ್ನು 'ಬರಪೀಡಿತ' ರಾಜ್ಯಗಳೆಂದು ಘೋಷಿಸಿ, ರೈತರಿಗೆ ಬೆಳೆ ನಷ್ಟ, ತೆರಿಗೆ ಮನ್ನ, ಸಾಲ ವಸೂಲಿ ಮುಂದೂಡಿಕೆ, ಬಡರೈತ, ಕೂಲಿಕಾರರಿಗೆ ಸಾಲಮನ್ನ, ಬೆಳೆನಷ್ಟ, ತೆರಿಗೆ ಮನ್ನ, ಕೂಲಿಯ ದಿನಗಳಿಗೆ ನಷ್ಟ ಪರಿಹಾರ, ಮುಖ್ಯವಾಗಿ ಕೆಲಸಕ್ಕಾಗಿ, ಕೂಲಿಗಾಗಿ ಕಾಳು" ಯೋಜನೆಯನ್ನು ಜಾರಿಗೆ ತರಬೇಕೆಂದು, ಮತ್ತು ಇದೇ ಸಮಯದಲ್ಲಿ ಪಶುಗಳಿಗೆ ಆಹಾರ, ಕುಡಿಯುವ ನೀರು ಒದಗಿಸಲು ಕ್ರಮಗಳನ್ನು ಕೈಗೊಳ್ಳಲು 'ಸಮಗ್ರ ಯೋಜನೆ' ಗಳನ್ನು ರೂಪಿಸಬೇಕೆಂದು ಆಗ್ರಹಿಸಿ, ರಸ್ತೆ ತಡೆ, ರೈಲುತಡೆ, ಬಂದ್, ಆಹಾರ ನಿಗಮಗಳ ದಾಸ್ತಾನು ಮಳಿಗೆಗಳ ಘೇರಾವ್ ಗಳನ್ನು ಆಗಸ್ಟ್ - 17ರಿಂದ ಸೆಪ್ಟೆಂಬರ್ 1.02 ರೊಳಗೆ ಸಂಘಟಿಸಬೇಕೆಂದು ಕರೆ ನೀಡಲಾಗಿದೆ.

### ಬರಪೀಡಿತವೆಂದು ಘೋಷಿಸಿ

ಸರ್ಕಾರಗಳು, ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡದಿದ್ದಲ್ಲಿ, ಹೋರಾಟವನ್ನು ಸೆಪ್ಟೆಂಬರ್ ನಂತರ ಮತ್ತಷ್ಟು ತೀವ್ರಗೊಳಿಸಲು ತನ್ನ ರಾಜ್ಯ ಘಟಕಗಳಿಗೆ ಕರೆ ನೀಡಿದೆ.

**ಜಿ.ಸಿ.ಬಯ್ಯಾರೆಡ್ಡಿ**

## ಇದು ಬರ ಎದುರಿಸುವ ರೀತಿಯೇ?

ಬಳ್ಳಾರಿ ಜಿಲ್ಲೆಯ ಮಳೆಯಾಶ್ರಯದ ಸಂಡೂರು-ಹೊಸಪೇಟೆ ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗಾ-ರಾಯಚೂರು ತಾಲೂಕುಗಳು ಬರದಿಂದ ಭಾಧಿತವಲ್ಲ ಎಂಬ ಕಂದಾಯ ಸಹಾಯಕ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪನವರ ಅಪ್ರಬುದ್ಧ ಹೇಳಿಕೆ ಇದಕ್ಕೊಂದು ಉದಾಹರಣೆ ಎನ್ನಬಹುದು! ಸರ್ಕಾರದ ಈ ರೀತಿಯ ಅಜ್ಞಾನದ ಬಗೆಗೆ ...ಎಂದು ಹೇಳುವುದು ಈ ಪ್ರದೇಶದ ತಾಲೂಕಿನ ಲಕ್ಷಾಂತರ ಎಕರೆ ಪ್ರದೇಶವು ತೊಂದರೆ ಗೀಡಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ! 'ಅಧಿಕಾರಿಗಳ ಮೇಲೆ ಹಿಡಿತ ಹೊಂದಿ ಸರಿಯಾದ ವರದಿ ತರಿಸಿಕೊಳ್ಳಿ' ಎಂದಷ್ಟೇ ಹೇಳಬೇಕಾಗುತ್ತದೆ! ಹೀಗೆ ಸರ್ಕಾರ ಸರಿಯಾದ ಮಾಹಿತಿ ಸಂಗ್ರಹಿಸಿಲ್ಲ ಸಮರೋಪಾದಿಯಲ್ಲಿ ಬರ ಎದುರಿಸುವ ಕಾರ್ಯ ಕಂಡು ಬರುತ್ತಿಲ್ಲ! ಬರ ಎದುರಿಸುವ ಸರ್ಕಾರದ ಕೆಲಸ ಪತ್ರಿಕೆಗಳಿಗೆ ಸೀಮಿತವಾಗಿದೆ! ಬಹಳವೆಂದರೆ ಪ್ರಕೃತಿವಿಕೋಪಕ್ಕೆ ನಾವೇನು ಮಾಡಲಾದೀತು ಎಂದರಾಯಿತಲ್ಲ!? ಕಳೆದ 55 ವರ್ಷಗಳ ಕಾಲ-ಕೇಂದ್ರ-ರಾಜ್ಯ ಸರ್ಕಾರಗಳು ರಾಜ್ಯಭಾರ ನಡೆಸಿ ಇನ್ನೂ ಪ್ರಕೃತಿ ವಿಕೋಪವೆಂದು ಪ್ರಕೃತಿಯ ಮೇಲೆ ಹಾಕುವುದು ಸಾಧುವೆ? ನೀರಾವರಿಯ ತ್ವರಿತ ಕ್ರಮ ಕೈಗೊಂಡಲ್ಲಿ ಮಳೆಯಾಶ್ರಯದ ಬರಗಾಲ ಮಾಯವಾಗುವುದಿಲ್ಲವೇ! ಯಾಕೆ ನೀರಾವರಿಯ ಕಡೆ ಸರ್ಕಾರ ವಿಶೇಷ ಗಮನ ಹರಿಸುವುದಿಲ್ಲ? ಈ ಬಗ್ಗೆ ಗಮನ ಹರಿಸಿ ಶ್ರಮವಹಿಸದಿರುವುದು ಪ್ರಕೃತಿಯ ತಪ್ಪೇ ಅಥವಾ ಸರ್ಕಾರದ್ದೇ? ಹೌದು ಇದೀಗ ಬರಗಾಲ ಪ್ರಕೃತಿ ವಿಕೋಪವಾಗುಳಿದಿಲ್ಲ. ಬರಗಾಲ ನಿವಾರಿಸುವ ಪರಿಹಾರಗಳು. ಕಾರ್ಯಕ್ರಮಗಳು ನಮ್ಮ ಮುಂದಿದ್ದರೂ ಅದನ್ನು ಬಳಸಿಕೊಳ್ಳದ ಮಾನವನ ದುರುದ್ದೇಶದ ನಿರ್ಮಾಣ ವಲ್ಲದೇ ಮತ್ತೇನಾದೀತು! ನೀರಾವರಿ ಪ್ರದೇಶದಲ್ಲಿ ನೀರಿದ್ದೂ ಉತ್ತಮ ಬೆಳೆಯಿದ್ದು ಅಲ್ಲಿನ ಕೂಲಿಕಾರ ಎದುರಿಸುವ ಬರ ನಿರ್ಮಿಸಿದ್ದು ಈ ಕೇಂದ್ರ - ರಾಜ್ಯ ಸರ್ಕಾರಗಳಲ್ಲವೆ?

# ಎಡರಂಗ ರೂಪುಗೊಂಡ ಇತಿಹಾಸ

**ಇಂದಿನ ದಿನಗಳಲ್ಲಿ ಮೈತ್ರಿಕೂಟವೆಂಬುದು ಯಾವುದೇ ತತ್ವ-ಸಿದ್ಧಾಂತಗಳಿಲ್ಲದ, ಜನತೆಗೆ ಬದ್ಧವಾಗಿರದ, ಹೇಗಾದರೂ ಅಧಿಕಾರದಲ್ಲಿರಬೇಕೆಂಬ ಸಂದರ್ಭಸಾಧಕ ನೀತಿಯೆಂಬುದನ್ನು ಭೂಮಾಲೀಕ-ಬಂಡವಾಳಗಾರ ಬಲಪಂಥೀಯ ಪಕ್ಷಗಳು ಅನುಸರಿತ್ತಾ ಬಂದಿವೆ. ಇಂದಿನ ಮಿತ್ರ ಮರುದಿನದಲ್ಲಿ ಶತ್ರು. ಆದರೆ ಇದಕ್ಕೆಲ್ಲಾ ತೀರಾ ಭಿನ್ನವಾಗಿರುವ ಎಡರಂಗವು ಹಲವಾರು ದಶಕಗಳ ಕಾಲ ಪರ್ಯಾಯ ರಾಜಕೀಯ ಶಕ್ತಿಯಾಗಿ, ಸದೃಢತೆಯಿಂದ ಅಸ್ತಿತ್ವದಲ್ಲಿರುವುದು ಒಂದು ಅದ್ಭುತ. ಇಂತಹ ಮೈತ್ರಿಕೂಟ ರೂಪುಗೊಂಡ ಇತಿಹಾಸ ಮತ್ತು ಕಾರಣಗಳನ್ನು ಇಲ್ಲಿತೆರೆದಿಟ್ಟಿದ್ದಾರೆ ಪ.ಬ. ಎಡರಂಗದ ಸಂಚಾಲಕರಾಗಿರುವ ಕಾಮ್ರೇಡ್ ಬಿಮನ್ ಬಸುರವರು**

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ನಿರಂತರ ಎಲ್ಲಾ ರಂಗಗಳಲ್ಲಿ ನಡೆದ ಹೋರಾಟಗಳಿಂದ ಉದಯಿಸಿದೆ. 1977ರ ಸಾರ್ವತ್ರಿಕ ಚುನಾವಣೆಗಳಲ್ಲಿ ಎಡರಂಗ ಅಧಿಕಾರಕ್ಕೆ ಬಂತು. ಅದಕ್ಕೆ ಹಿಂದಿನ ವರ್ಷಗಳಲ್ಲಿ ಎಮರ್ಜನ್ಸಿ ಕಾಲದಲ್ಲಿ ನಿಶ್ಚಯವಾದ ಅರೆಫ್ಯಾಸಿಸ್ಟ್ ಧಾಳಿಯನ್ನು ಕಂಡಿದ್ದೇವೆ. ಇಂತಹ ಧಾಳಿಯನ್ನು ಎದುರಿಸುವ ತುಡಿತವು ಎಡರಂಗ ರಚನೆಯ ತಕ್ಷಣದ ಕಾರಣವಾಗಿತ್ತು. ಆದರೆ ಐಕ್ಯ ಚಳುವಳಿಯ ಸಾರಾಂಶ ಮುಖ್ಯವಾಗಿ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲೇ ಇದೆ. ಬ್ರಿಟೀಷ್ ಸಾಮ್ರಾಜ್ಯಶಾಹಿಯನ್ನು ಹಿಮ್ಮೆಟ್ಟಿಸಲು 1936ರಲ್ಲೇ ಕಮ್ಯುನಿಸ್ಟ್ ಪಕ್ಷವು ಇತರ ರಾಜಕೀಯ ಪಕ್ಷಗಳನ್ನು ಹಾಗೂ ಸಾಮೂಹಿಕ ಸಂಘಟನೆಗಳನ್ನೂ ಒಂದುಗೂಡಿಸುವ ಮಾರ್ಗವನ್ನು ಅನುಸರಿಸಿತು. ಕಾಲಗತಿಯಲ್ಲಿಯೂ ಐಕ್ಯ ಹೋರಾಟ ಹಲವು ಹಂತದಲ್ಲಿ ಉನ್ನತ ಮಟ್ಟಕ್ಕೇರಿತು.

**ಕ್ರೋಢೀಕರಣ**

1967ರಲ್ಲಿ ರಚನೆಯಾದ ಸಂಯುಕ್ತರಂಗವು ಚುನಾವಣೆಯ ನಂತರದಲ್ಲಿ ರೂಪುಗೊಂಡಿತು. ಈ ರಂಗವು ಮುಖ್ಯವಾಗಿ ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಡುವ ಉದ್ದೇಶದಿಂದ ರಚನೆಯಾಗಿತ್ತು. ಆದರೆ



ಇದು ಎಡ ಹಾಗೂ ಬಲ ಪಂಥೀಯರು ಒಳಗೊಂಡ ರಂಗವಾಗಿತ್ತು. ಈ ರಂಗವು ಆರಂಭದಿಂದಲೇ ಭೂಸುಧಾರಣೆ ಮುಂತಾದ ವಿಚಾರಗಳಲ್ಲಿ ಒಡೆದ ಮನೆಯಾಗಿತ್ತು. ಅದರೊಟ್ಟಿಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಸರಕಾರವು ರಂಗವನ್ನು ವಿಭಜಿಸಲು ಎಲ್ಲ ಉತ್ತೇಜನ ನೀಡುವ ಆಟವಾಡುತ್ತಿದ್ದರು. ಆ ಕಾರಣದಿಂದ ಸರಕಾರ ಅಲ್ಪ ಆಯಸ್ಸಿನದಾಯಿತು. ನಂತರ ಮಧ್ಯಂತರ ಚುನಾವಣೆ ಬಂತು. ಸಂಯುಕ್ತರಂಗ ಎಲ್ಲಾ 286 ಸ್ಥಾನಗಳಲ್ಲಿ ಸ್ಪರ್ಧಿಸಿತು ಹಾಗೂ ಕಾಂಗ್ರೆಸ್‌ಗಿಂತ ಮೇಲುಗೈ ಪಡೆಯಿತು. ಈ ರಂಗಗಳ ಹೋರಾಟಗಳ ಮೂಲಕ ಎಡಶಕ್ತಿಗಳು ಕ್ರೋಢೀಕರಣವಾಗತೊಡಗಿದವು.

**ಗುಣಾತ್ಮಕ ವ್ಯತ್ಯಾಸ**

ಇಂದು ನಾವು ವಿವಿಧ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಮುತುವರ್ಜಿಯಿಂದ ಹಾಗೂ ಬಲಪಂಥೀಯ ಹಾಗೂ ಕೋಮುವಾದಿಗಳು ಸಂಯುಕ್ತ ರಂಗಗಳನ್ನು ಕಟ್ಟಲು ಪ್ರಯತ್ನಿಸುತ್ತಿರುವುದನ್ನು ನೋಡುತ್ತಿದ್ದೇವೆ. ಪಶ್ಚಿಮ ಬಂಗಾಳದಲ್ಲೂ ಚುನಾವಣೆ ಸಂದರ್ಭದಲ್ಲಿ ನಮ್ಮ ವಿರೋಧಿಗಳು ಅಂತಹ ರಂಗಗಳನ್ನು ಹುಟ್ಟು ಹಾಕಿದ್ದಾರೆ. ಎಡರಂಗಕ್ಕೂ ಮತ್ತು ಪ್ರತಿಗಾಮಿ ಶಕ್ತಿಗಳ ರಂಗಗಳಿಗೂ ಗುಣಾತ್ಮಕವಾದ ವ್ಯತ್ಯಾಸವಿದೆ. ಇದಕ್ಕೆ ಉತ್ತರ ಪಡೆಯಲು ಚಳುವಳಿಗಳ ಇತಿಹಾಸದಿಂದ ನಾವು ಕಲಿಯಬೇಕು. 30ರ ದಶಕದಲ್ಲಿ ಕಮ್ಯುನಿಸ್ಟ್‌ರ ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧ ಸಂಯುಕ್ತರಂಗವನ್ನು ಮುಂದು ಮಾಡಿದರು. ಇದು ಬಹಳ ವಿಶಾಲವಾಗಿದ್ದು, ಕಾರ್ಮಿಕ ವರ್ಗ, ರೈತಾಪಿಜನ, ವಿದ್ಯಾರ್ಥಿಗಳು ಮುಂತಾಗಿ ಒಳಗೊಂಡಿದ್ದೂ ಅನುಕ್ರಮವಾಗಿ ಕಾರ್ಯಾಚರಣೆಗಳನ್ನು ನಡೆಸಲಾಯಿತು. ಜನಪ್ರಿಯವಾದ ಪ್ರತಿರೋಧಗಳು ಬೆಳೆದುಬಂದವು. ಅಂಚೆ ನೌಕರರ ಮುಷ್ಕರ ವಿಶೇಷವಾಗಿ ಉಲ್ಲೇಖ ಮಾಡಬೇಕಾಗಿದೆ. ನೌಕಾಪಡೆ ದಂಗೆಗೆ ಬೆಂಬಲವಾಗಿ ನಡೆದ ಧೀರೋದಾತ್ತ ಹೋರಾಟಗಳನ್ನು ಯಾರು ಮರೆಯಲು ಸಾಧ್ಯ! 40ರ ದಶಕದಲ್ಲಿ ಗ್ರಾಮೀಣ ಬಂಗಾಳ ಹೊಸರೂಪದ ಹೋರಾಟಗಳನ್ನು ಕಂಡಿತು. ಕ್ರೂರ ಪಾಳೆಯಗಾರಿ ವ್ಯವಸ್ಥೆ ವಿರುದ್ಧ ರೈತರ ಹೋರಾಟ 'ತೇಭಾಗ ರೈತರ ಹೋರಾಟ' ಎಂದೇ ನಮ್ಮೆಲ್ಲರ ನೆನಪಿನಲ್ಲಿದೆ. ಜೀವನಾವಶ್ಯಕ ವೇತನಕ್ಕಾಗಿ ಹಾಗೂ ಕೆಲಸದ ಭದ್ರತೆಗಾಗಿ ಒತ್ತಾಯಿಸಿ 1954-56ರಲ್ಲಿ ಶಿಕ್ಷಕರು ರಾಜ್ಯದಾದ್ಯಂತ ಹೋರಾಟ ನಡೆಸಿದರು. ಇಲ್ಲಿ ಹೇಳಲೇಬೇಕಾಗುತ್ತದೆ ಆಗ ಶಿಕ್ಷಕರ ಸಂಬಳ ಕೆಲವು ಕಡೆ ತಿಂಗಳಿಗೆ ರೂ. 96 ಮತ್ತು ಇನ್ನು ಕೆಲವು ಕಡೆ ರೂ. 112 ಇತ್ತು. ಕಾಂಗ್ರೆಸ್ ಸರಕಾರ ಶಿಕ್ಷಕರ ಬೇಡಿಕೆಗಳನ್ನು ತಿರಸ್ಕರಿಸಿದ್ದಲ್ಲದೇ ಪೋಲೀಸರಿಂದ ಚಳುವಳಿ ನಿರತರಾದ ಶಿಕ್ಷಕರ ಮೇಲೆ ಹೀನಾಯವಾದ ರೀತಿ ಧಾಳಿ ನಡೆಸಿ ಇಡೀ ದೇಶವೇ ತಲೆ ತಗ್ಗಿಸುವಂತೆ ಮಾಡಿದರು.

ಕಾಂಗ್ರೆಸ್ ವಿರೋಧಿ ಪಕ್ಷಗಳು ಈ ಧಾಳಿಯನ್ನು ವಿರೋಧಿಸಿ ಸೌಹಾರ್ದವಾಗಿ ಪ್ರತಿಭಟನೆ ಸಂಘಟಿಸಿದರು. [illegible] ಶಿಕ್ಷಣದ [illegible]ಗಳನ್ನು ಮೊಟಕುಗೊಳಿಸುವ ಸಿಫಾರಸ್ಸನ್ನು 1957ರಲ್ಲಿ ಪಿಲಿಪ್ ಆಯೋಗ ಮಾಡಿದಾಗ ಅದನ್ನು ತೀವ್ರವಾಗಿ ವಿರೋಧಿಸಲಾಯಿತು.

ವಿದ್ಯಾರ್ಥಿ ಫೆಡರೇಷನ್ ನಾಯಕತ್ವದಲ್ಲಿ ವಿದ್ಯಾರ್ಥಿಗಳ ಚಳುವಳಿ 1958ರಲ್ಲಿ ನಡೆಯಿತು. ಈ ಕಾಲಾವಧಿಯಲ್ಲಿ ಮತ್ತೆ ಆಹಾರದ ಕೊರತೆ ಉಂಟಾಗಿತ್ತು. 1959ರ ಆಗಸ್ಟ್ 31 ರಂದು ಶಹೀದ್ ಮೈದಾನದಲ್ಲಿ ಕೇಂದ್ರೀಕೃತ ರ್ಯಾಲಿಯನ್ನು ನಡೆಸಲಾಯಿತು. ನಂತರ ಬೃಹತ್ ಮೆರವಣಿಗೆ ಕಾಂ। ಜ್ಯೋತಿಬಸು ಹಾಗೂ ಇತರ ಸಂಗಾತಿಗಳ ನಾಯಕತ್ವದಲ್ಲಿ ನಡೆಯಿತು. ಈ ಮೆರವಣಿಗೆ ಗ್ರೇಟ್ ಈಸ್ಟನ್ ಹೋಟಲ್‌ನ ದಕ್ಷಿಣ ಭಾಗ ತಲುಪುವಷ್ಟರಲ್ಲಿ ಪೊಲೀಸರು ಅಡ್ಡಗಟ್ಟಿದರು. ಮುಖಂಡರನ್ನೆಲ್ಲ ಬಂಧಿಸಲಾಯಿತು. ನಿರ್ದಯವಾಗಿ ಲಾಠಿಚಾರ್ಜ್ ಮಾಡಲಾಯಿತು. ಈ ಕ್ರೂರ ಧಾಳಿ ಒಂದು ಕಿಲೋಮೀಟರ್ ವ್ಯಾಪ್ತಿಯವರೆಗೆ ನಡೆಯಿತು. ಅತ್ಯಲ್ಪ ಕಾಲದ ಈ ಧಾಳಿಯಲ್ಲಿ 80 ಜನ ಪ್ರತಿಭಟನಾಕಾರರು ಕೊಲ್ಲಲ್ಪಟ್ಟರು.

ಇಂತಹ ಕ್ರೂರವಾದ 80 ಜನರನ್ನು ಅತ್ಯಲ್ಪಕಾಲದಲ್ಲಿ ಬಲಿತೆಗೆದುಕೊಂಡ ಧಾಳಿ ಅಪರೂಪವೇ ಆಗಿದೆ. ಇದರ ವಿರುದ್ಧ ಸೆಪ್ಟೆಂಬರ್ 1 ರಂದು ವಿದ್ಯಾರ್ಥಿಗಳು ಪ್ರತಿಭಟನೆಯನ್ನು ಮಾಡಿದರು. ಮತ್ತೆ ಪೊಲೀಸರು ವಿವೇಚನಾ ರಹಿತವಾಗಿ ಚಳುವಳಿನಿರತ ವಿದ್ಯಾರ್ಥಿಗಳ ಮೇಲೆ ಸುಭೋದ್ ಮಾಲಿಕ ಚೌಕದಲ್ಲಿ ಗೋಲೀಬಾರ್ ಮಾಡಿದರು. 102 ಜನ ಪೊಲೀಸ್ ಧಾಳಿಗೆ ತುತ್ತಾದರು. 1960-61ರ ಕಾಲಾವಧಿಯಲ್ಲಿ ಹಲವು ವಿಧವಾದ ಚಳುವಳಿಗಳನ್ನು ಸಂಘಟಿಸಲಾಯಿತು. ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳು ಮತ್ತೆ ಮತ್ತೆ ಚಳುವಳಿಗಳಲ್ಲಿ ಧುಮುಕಿದರು. 480ರ ಅಡಿಯಲ್ಲಿ ಆಹಾರದ ಆಮದನ್ನು ವಿರೋಧಿಸಿದರು. ಹಾಗೂ ಅಮೇರಿಕಾ-ಭಾರತ ಶಿಕ್ಷಣ ಫೌಂಡೇಷನ್ ಸ್ಥಾಪನೆಯನ್ನು ವಿರೋಧಿಸಿದರು. ಈ ಹಿನ್ನಲೆಯಲ್ಲಿ ಎಲ್ಲ ಕಾಂಗ್ರೆಸ್ ವಿರೋಧಿ ಪಕ್ಷಗಳು. 1962ರಲ್ಲಿ ಸಂಯುಕ್ತ ರಂಗವನ್ನು ರಚಿಸಿ ಚುನಾವಣೆ ಎದುರಿಸಲು ಮುಂದಾದವು.

ಅದೇ ವರ್ಷದ ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ಭಾರತ ಚೈನಾ ಗಡಿಯಲ್ಲಿ ಜಟಾಪಟಿ ನಡೆಯುತ್ತಿತ್ತು. ಎರಡು ದೇಶಗಳು ಸಂಧಾನದ ಮೂಲಕ ವಿವಾದವನ್ನೂ ಬಗೆಹರಿಸಿಕೊಳ್ಳಲು ಬೇಡಿಕೆ ಇಟ್ಟು ಒತ್ತಾಯಿಸಲಾಯಿತು. ಇದಕ್ಕಾಗಿ ಕಮ್ಯುನಿಸ್ಟ್ ಪಕ್ಷದ ಒಂದು ವಿಭಾಗವನ್ನು ಚೀನಾ ಏಜೆಂಟರೆಂಬ ಹಣೆಪಟ್ಟಿ ಕಟ್ಟಲಾಯಿತು. 1965ರಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧ ಆರಂಭವಾಯಿತು. ಆಗ ಮತ್ತೆ ನಾವು ದ್ವಿಪಕ್ಷೀಯ ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು, ಯುದ್ಧದಿಂದಲ್ಲ ಎಂದು ಹೇಳಿದ ಕಾರಣ ಪಾಕಿಸ್ತಾನದ ಏಜಂಟರೆಂದು ಬಣ್ಣಿಸಲಾಯಿತು. 1966ರಲ್ಲಿ ಸೀಮೆ ಎಣ್ಣೆ ಹಾಗೂ ಆಹಾರಕ್ಕಾಗಿ ಪ್ರಭಾವಶಾಲಿ ವಿದ್ಯಾರ್ಥಿ ಚಳುವಳಿ ನಡೆಯಿತು. ಈ ಚಳುವಳಿಯ ಸಂದರ್ಭದಲ್ಲಿ ನೂರುಲ್ ಇಸ್ಲಾಂ ಎಂಬ ವಿದ್ಯಾರ್ಥಿಯನ್ನು ಪೋಲಿಸರು ಬಲಿತೆಗೆದುಕೊಂಡರು. ತೀವ್ರ ಭಯಾನಕ ಧಾಳಿ ನಡೆಸಿದರು. ಕೂಡಲೇ ಇಡೀ ರಾಜ್ಯದಲ್ಲಿ ಜ್ವಾಲೆ ಹರಡಿತು. ಪೊಲೀಸ್ ಹಿಂಸಾಚಾರದ ವಿರುದ್ಧ ಒಂದು ದಿನದ ಬಂದ್‌ಗೆ ಕರೆ ನೀಡಲಾಯಿತು. ರಾಜ್ಯದ ಹಲವು ಭಾಗಗಳಲ್ಲಿ ಈ ಬಂದ್ 3 ದಿನಗಳಿಗೂ ವಿಸ್ತರಿಸಿತು. ಜನ ಅವರ ಆಕ್ರೋಶವನ್ನು ವ್ಯಕ್ತಪಡಿಸಿದರು.


ಈ ಹಿನ್ನೆಲೆಯಲ್ಲಿ 1967ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ವಿರೋಧಿ ರಂಗಗಳು ಸ್ಪರ್ಧೆಗಿಳಿದವು. ಆದರೂ ಕಾಂಗ್ರೆಸ್‌ಗೆ ಬಹುಮತ ದೊರೆಯಲಿಲ್ಲ. ಎರಡು ರಂಗಗಳು ನಂತರ ಒಂದುಗೂಡಿ ಸಂಯುಕ್ತ ರಂಗವನ್ನು ರಚಿಸಿಕೊಂಡು ಸರಕಾರ ರಚಿಸಲಾಯಿತು. 1967ರಲ್ಲಿ ಮೊದಲ ಕಾಂಗ್ರೆಸ್ಸೇತರ ಸರಕಾರ ರಚನೆಯಾಯಿತು, ಅದು 9 ತಿಂಗಳ ಕಾಲ ಅಧಿಕಾರದಲ್ಲಿತ್ತು. 1969ರಲ್ಲಿ ಮಧ್ಯಂತರ ಚುನಾವಣೆ ನಡೆದವು. ಸಂಯುಕ್ತರಂಗ ಪುನಃ ಅತ್ಯಂತ ದೊಡ್ಡ ಬಹುಮತದಿಂದ ಆರಿಸಿ ಬಂತು. ಈ ಸರಕಾರ 13 ತಿಂಗಳಕಾಲ ಅಧಿಕಾರದಲ್ಲಿತ್ತು. 1970ರಿಂದ ರಾಜ್ಯದಲ್ಲಿ ನಿಧಾನವಾಗಿ ಭಯಾನಕ ವಾತಾವರಣ ನಿರ್ಮಾಣವಾಗತೊಡಗಿತು. 1971ರಲ್ಲಿ ಮತ್ತೊಂದು ಮಧ್ಯಂತರ ಚುನಾವಣೆ ನಡೆಯಿತು. ಆ ಸಂದರ್ಭದಲ್ಲಿ ಸಿದ್ದಾರ್ಥ ಶಂಕರ್‌ರೇ ಕೇಂದ್ರ ಸರಕಾರದ ಶಿಕ್ಷಣ ಮಂತ್ರಿಯಾಗಿದ್ದರು. ಹಾಗೂ ಪಶ್ಚಿಮ ಬಂಗಾಳದ ಉಸ್ತುವಾರಿ ಸಚಿವರಾಗಿದ್ದರು. ಒಂದು ಯೋಜನಾ ಬದ್ದವಾಗಿ ಭಯಾನಕ ಪರಿಸ್ಥಿತಿಯನ್ನು ಸಂಘಟಿಸಲು ಆತ ಪ್ರಚೋದನೆ ನೀಡಿದನು.

**ಕಮ್ಯುನಿಸ್ಟರ ವಿರುದ್ಧ ಅಮೆರಿಕ ಹಣ**

ಅಮೆರಿಕಾದ ರಾಯಬಾರಿ ಆಗಿದ್ದ ಶ್ರೀ ಪಟ್ರಿಕಾ ಮೆನಿಹಾನ್ ಅವರು ಅವರ ಪುಸ್ತಕದಲ್ಲಿ ಅಮೆರಿಕಾವು ಭಾರತದಲ್ಲಿ ಕಮ್ಯುನಿಷ್ಟರು ಬೆಳೆಯುತ್ತಿರುವ ಪ್ರಭಾವವನ್ನು ಹತ್ತಿಕ್ಕಲು ಹಣಕಾಸು ಸಹಾಯ ಮಾಡಿರುವುದನ್ನು ಬಯಲುಗೊಳಿಸಿದ್ದಾರೆ. ಇದೇ ಪುಸ್ತಕದಲ್ಲಿ ಅಮೇರಿಕಾ ಎರಡು ಬಾರಿ ಭಾರತದ ರಾಜಕೀಯದಲ್ಲಿ ಪ್ರಭಾವ ಬೀರಲು ಹಣಕಾಸು ಒದಗಿಸಿದೆ ಎಂದು ತಿಳಿಸಿದ್ದಾರೆ. ಮೊದಲನೆಯದು 1957ರಲ್ಲಿ ಕೇರಳದ ನಂಬೂದ್ರಿ ಪಾದ್ ನೇತೃತ್ವದ ಸರಕಾರವನ್ನು ಕೆಳಗಿಳಿಸಲು, ಎರಡನೆಯದಾಗಿ ಪಶ್ಚಿಮ ಬಂಗಾಳಕ್ಕೆ 1971ರಲ್ಲಿ. ಎರಡು ಸಂದರ್ಭದಲ್ಲಿ ಅಮೆರಿಕಾ ಭಾರತದ ರಾಜಕೀಯಕ್ಕೆ ಹಣ ನೀಡುವ ಉದ್ದೇಶ ಕಮ್ಯುನಿಸ್ಟ್‌ರ ವಿರುದ್ಧ

ಪುಟ 10 ಕ್ಕೆ





**ದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ(ಜೆಎನ್‌ಯು) ಮಾರ್ಕ್ಸ್‌ವಾದಿ ಚಿಂತಕರನ್ನು ತರಬೇತಿಗೊಳಿಸುವ ಕೇಂದ್ರ ಎಂಬ ಅಭಿದಾನಕ್ಕೆ ಪಾತ್ರವಾಗಿದೆ. ಪ್ರತಿಭಾವಂತ ಯುವ ಮಾರ್ಕ್ಸ್‌ವಾದಿ ಮುಖಂಡ ಸೀತಾರಾಮ್ ಯೆಚುರಿ ಜೆಎನ್‌ಯು ಕೊಡುಗೆಯೇ. ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಅಧ್ಯಕ್ಷರಾಗಿ ಜೆಎನ್‌ಯು ಗರಡಿಯಲ್ಲಿ ಪಳಗಿದ ಯೆಚುರಿ ಹರೆಯದಲ್ಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅತ್ಯುನ್ನತ ನೀತಿ ನಿರೂಪಣೆ ಅಂಗವಾದ ಪಾಲಿಟ್‌ಬ್ಯೂರೋ ಸದಸ್ಯರಾದದ್ದು ಅವರ ಪ್ರಬುದ್ಧತೆಗೆ ಹಿಡಿದ ಕನ್ನಡಿ. 'ಪೀಪಲ್ಸ್ ಡೆಮಾಕ್ರಸಿ' ಸಾಪ್ತಾಹಿಕದ ಸಂಪಾದಕ. ಹಲವು ಪುಸ್ತಕಗಳ ಲೇಖಕ. ಚಿಂತನೆ ಸ್ಪಷ್ಟ. ಮಾತು ಸ್ಫುಟ. ವೀರ ತೆಲಂಗಾಣ ಸಮರದ ನಾಡಿನ ಬಳುವಳಿಯಾದ ಈ ಯುವ ನಾಯಕ ಈಚೆಗೆ ಬೆಂಗಳೂರಿಗೆ ಬಂದಿದ್ದಾಗ 'ಐಕ್ಯರಂಗ'ಕ್ಕಾಗಿ ನಡೆಸಿದ ಸಂದರ್ಶನದ ಆಯ್ದ ಭಾಗ.**

# ವಿಶ್ವಬ್ಯಾಂಕ್ ನೀತಿಗಳಿಗೆ ಪ್ರತಿರೋಧ ಅತ್ಯಗತ್ಯ

**ಸೀತಾರಾಮ ಯೆಚೂರಿ ಸಂದರ್ಶನ**

ವಿಶ್ವ ಕುಂದಾಪುರ

**ಜಾಗತೀಕರಣದ ಒಟ್ಟಾರೆ ಪರಿಣಾಮವೇನು?**

ಜಾಗತೀಕರಣ ಎನ್ನುವುದು ಶ್ರೀಮಂತ ರಾಷ್ಟ್ರಗಳು ಬಡದೇಶಗಳನ್ನು ಶೋಷಿಸುವ ಸಾಮ್ರಾಜ್ಯಶಾಹಿ ಸಾಧನ ಎನ್ನುವುದು ಜಾಗತಿಕವಾಗಿ ಕಂಡುಕೊಳ್ಳಲಾದ ಸತ್ಯ. ಇದರ ಪರಿಣಾಮವಾಗಿ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಅಭಿವೃದ್ಧಿಶೀಲ ದೇಶಗಳ ನಡುವಿನ ಅಂತರ ಹೆಚ್ಚಾಗುತ್ತಲೇ ಇದೆ. ಹಾಗೇ ನೋಡಿದರೆ, ಶ್ರೀಮಂತ ದೇಶಗಳಲ್ಲೇ ಆಂತರಿಕ ಅಸಮಾನತೆ ಹೆಚ್ಚಾಗುತ್ತಿದೆ. ಆರ್ಥಿಕ ಬಿಕ್ಕಟ್ಟು ಬಿಗಡಾಯಿಸುತ್ತಿದೆ. ಶ್ರೀಮಂತ ದೇಶಗಳು ತಮ್ಮ ಬಿಕ್ಕಟ್ಟನ್ನು ಹಿಂದುಳಿದ ದೇಶಗಳ ಮೇಲೆ ಹೇರಲು ಯತ್ನಿಸುತ್ತದೆ.

**ಅದಕ್ಕೊಂದು ಉದಾಹರಣೆ..........**

ಜಾಗತೀಕರಣದ 'ನೇತಾರ' ಅಮೇರಿಕವೇ ಇತ್ತೀಚಿನ ಅತ್ಯುತ್ತಮ ಉದಾಹರಣೆ. ಅಭಿವೃದ್ಧಿಶೀಲ ದೇಶಗಳು ನಾನಾ ವಲಯಗಳಿಗೆ, ವಿಶೇಷವಾಗಿ ಕೃಷಿ ಕ್ಷೇತ್ರಕ್ಕೆ ಸಬ್ಸಿಡಿ ನೀಡುವುದನ್ನು ಅಮೇರಿಕ ವಿರೋಧಿಸುತ್ತದೆ. ಆದರೆ ಈಗಷ್ಟೇ ಅಧ್ಯಕ್ಷ ಜಾರ್ಜ್ ಬುಷ್ ಅಮೇರಿಕ ರೈತರಿಗೆ 83 ಬಿಲಿಯ ಡಾಲರ್ ಸಬ್ಸಿಡಿ ಕೊಡಿಸಲು ಮುಂದಾಗಿದ್ದಾರೆ.

ಭಾರತದಲ್ಲಿ ಸಬ್ಸಿಡಿ ತೆಗೆದುಹಾಕಿಸಲು ಅವರು ತೀರಾ ಪ್ರಯತ್ನ ಮಾಡಿ ಗರಿಷ್ಠ ಯಶಸ್ಸನ್ನು ಗಳಿಸಿದ್ದಾರೆ. ತಮ್ಮ ದೇಶದ ಉತ್ಪನ್ನಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ದೊರಕಿಸಿಕೊಳ್ಳುವುದು ಶ್ರೀಮಂತ ದೇಶಗಳ ಪ್ರಮುಖ ಕಾರ್ಯತಂತ್ರ. ಬೇರೆ ದೇಶಗಳು, ಉದಾಹರಣೆಗೆ ಭಾರತ; ತಮ್ಮ ಮಾರುಕಟ್ಟೆಯನ್ನು ಮುಕ್ತವಾಗಿಡಬೇಕೆಂದು ಹೇಳುತ್ತವೆ. ಆದರೆ ಸ್ವತಃ ತಮ್ಮ ಮಾರುಕಟ್ಟೆಗಳನ್ನು ರಕ್ಷಣಾತ್ಮಕ ನೀತಿಯ ಹೆಸರಿನಲ್ಲಿ ಮುಚ್ಚಿಬಿಡುತ್ತಾರೆ. ಜಪಾನ್ ತಾನು ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಶೇಕಡ 200 ಸುಂಕ ಹೇರುತ್ತದೆ. ಯಾವ ದೇಶಕ್ಕೆ ತಾನೆ ಇದನ್ನು ತಾಳಿಕೊಳ್ಳುವ ಶಕ್ತಿ ಇರುತ್ತೆ? ಇದರಿಂದ ವಿದೇಶಗಳ ಮಾಲು ಭಾರತಕ್ಕೆ ವಿಫುಲವಾಗಿ ಬಂದುಬಿದ್ದು ಇಲ್ಲಿನ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲದಂತಾಗುತ್ತದೆ. ಮಲೇಷಿಯಾದ ತಾಳೆ ಎಣ್ಣೆಯಿಂದಾಗಿ ಭಾರತದ ತೆಂಗು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

**ಇಂಥ ನೀತಿಗಳನ್ನು ಭಾರತ ವಿರೋಧಿಸುವುದಿಲ್ಲವೇಕೆ?**

ಐಎಂಎಫ್, ವಿಶ್ವ ಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯುಟಿಒ) ನಂಥ ಶ್ರೀಮಂತ ರಾಷ್ಟ್ರಗಳ ಹಿಡಿತದಲ್ಲಿರುವ ಸಂಸ್ಥೆಗಳ ಒತ್ತಡಕ್ಕೆ ಬಲಿಬಿದ್ದ ಸರಕಾರ ಇನ್ನೇನು ತಾನೆ ಮಾಡೀತು?. ಭಾರತದಂಥ ಬೃಹತ್ ರಾಷ್ಟ್ರ ಇಂಥ ನೀತಿಗಳನ್ನು ವಿರೋಧಿಸಲೇಬೇಕು. ವಾಸ್ತವವಾಗಿ ಡಬ್ಲ್ಯುಟಿಒದ ಪಕ್ಷಪಾತಿ ನೀತಿಗಳ ವಿರುದ್ಧ ಹಾಗೂ ಒಟ್ಟಾರೆಯಾಗಿ ಸಾಮ್ರಾಜ್ಯಶಾಹಿ ಶಕ್ತಿಯ ವಿರುದ್ಧ ಸೆಟೆದು ನಿಲ್ಲಲು ಭಾರತ ನಾಯಕತ್ವ ವಹಿಸಬೇಕೆಂದು ಬ್ರೆಜಿಲ್, ಈಜಿಪ್ಟ್‌ನಂಥ ದೇಶಗಳೇ ನಿರೀಕ್ಷೆ ಮಾಡುತ್ತಿವೆ. ಅಮೇರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರೇ ನಾನಾ ದೇಶಗಳನ್ನು ಸುತ್ತಿ ಜಾಗತೀಕರಣದ ಅನಾಹುತದ ವಿರುದ್ಧ ಮಾತನಾಡುತ್ತಿರುವುದು, ತೃತೀಯ ದೇಶಗಳಿಗೆ ನೆರವಾಗಿ ಎಂದು ಶ್ರೀಮಂತ ದೇಶಗಳಿಗೆ ಮನವಿ ಮಾಡುತ್ತಿರುವುದು ಒಂದು ಮಹತ್ವದ ಬೆಳವಣಿಗೆ ಯಾಗಿದೆ.

ಜಾಗತೀಕರಣದ ಭ್ರಮೆ ಹುಟ್ಟಿಸಿದ ಗುಳ್ಳೆ ಒಡೆಯುತ್ತಿರುವ ಸೂಚನೆ ಇದಾಗಿದೆ.

**ಈಗ ಸಮಾಜವಾದಿ ಚೀನಾವೇ ಡಬ್ಲ್ಯುಟಿಓ ಪ್ರವೇಶಿಸಿದೆಯಲ್ಲ. ಇದರಿಂದೇನಾದರೂ ಮಹತ್ವದ ಪರಿಣಾಮ ಆಗಬಹುದೇ?**

ಸಿರಿವಂತ ದೇಶಗಳ ಪರವಾದ ನೀತಿಗಳ ವಿರುದ್ಧ ದನಿಯೆತ್ತಿದ ದೋಹಾ ಸಮ್ಮೇಳನದ ನಂತರ ಚೀನಾ ಡಬ್ಲ್ಯುಟಿಓ ಪ್ರವೇಶಿಸಿದೆ. ಅದರ ಪ್ರವೇಶ ಮೂರನೇ ಜಗತ್ತಿನ ಪರವಾದ ದನಿಗೆ ಬಲಕೊಡಬಹುದೆಂದು ನಿರೀಕ್ಷಿಸಲಾಗಿದೆ. ಹಾಗೇನಾದರೂ ಆದಲ್ಲಿ ಅದೊಂದು ಮಹತ್ತರ ಬೆಳವಣಿಗೆ ಆಗುವುದರಲ್ಲಿ ಸಂಶಯವಿಲ್ಲ. ಡಬ್ಲ್ಯುಟಿಓ ಮುಂದಿನ ಸಮ್ಮೇಳನ 2003ರಲ್ಲಿ ನಡೆಯಲಿದೆ. ಅಲ್ಲಿವರೆಗೆ ಕಾದು ನೋಡಬೇಕಾಗಿದೆ.

**ಜಾಗತೀಕರಣದ ಪ್ರಭಾವ ವಿದ್ಯುತ್ ಕ್ಷೇತ್ರಕ್ಕೂ ವಿಸ್ತರಣೆಯಾಗುತ್ತಿದ್ದು ಕರ್ನಾಟಕದಲ್ಲಿ ವಿದ್ಯುತ್ ರಂಗದ ಖಾಸಗೀಕರಣಕ್ಕೆ ಭರದ ಸಿದ್ಧತೆ ನಡೆದಿರುವ ಬಗ್ಗೆ ನಿಮ್ಮ ಅಭಿಪ್ರಾಯ?**

ವಿದ್ಯುತ್ ಕ್ಷೇತ್ರದ ಖಾಸಗೀಕರಣ ಅನಾಹುತಕ್ಕೆ ಆಹ್ವಾನ ಎಂದೇ ಹೇಳಬೇಕಾಗುತ್ತದೆ. ಇದಕ್ಕೆ ಕ್ಯಾಲಿಫೋರ್ನಿಯಾ ಅನುಭವವೇ ಅತ್ಯುತ್ತಮ ಉದಾಹರಣೆ. ವಿದ್ಯುತ್ ಕ್ಷೇತ್ರವನ್ನು ಅಲ್ಲಿ ಖಾಸಗಿಯವರಿಗೆ ವಹಿಸಿಕೊಡಲಾಗಿತ್ತು. ಒಂದು ದಿನ ಅವರು ಜೈ ಎಂದು ಕೈ ಎತ್ತಿದರು. ಇಡೀ ಕ್ಯಾಲಿಫೋರ್ನಿಯಾ ಕತ್ತಲಲ್ಲಿ ಮುಳುಗಿತು. ಆನಂತರ ಜನತೆಯ ಆಗ್ರಹದ ಮೇರೆಗೆ ವಿದ್ಯುತ್ ಕ್ಷೇತ್ರವನ್ನು ಸರಕಾರವೇ ವಶಕ್ಕೆ ತೆಗೆದುಕೊಂಡಿತು. ಇಂಥದ್ದೇ ಅನುಭವವನ್ನು ದಕ್ಷಿಣ ಕೊರಿಯಾದಲ್ಲಿಯೂ ಕಂಡಿದ್ದೇವೆ. ಒರಿಸ್ಸಾದಲ್ಲೂ ಅದರ ಬಿಸಿ ತಾಗುತ್ತಿದೆ. ಖಾಸಗಿ ಕ್ಷೇತ್ರದವರು ತಮ್ಮ ಲಾಭದ ಬಗ್ಗೆಯೇ ಗಮನ ಹರಿಸುತ್ತಾರೆಯೇ ಹೊರತು ಸೇವೆ ಅವರಿಗೆ ಅಮುಖ್ಯ ಎನ್ನುವುದು ಈ ಎಲ್ಲಾ ಪ್ರಕರಣಗಳ ಪ್ರಮುಖ ಪಾಠ. ಅದನ್ನು ಮರೆತರೆ ಜನತೆಗೆ ದ್ರೋಹ ಬಗೆದಂತೆಯೇ ಸರಿ. ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಮೇಲೆ ನಿಯಂತ್ರಣ ವಿಲ್ಲದ ಖಾಸಗೀಕರಣ ಖಂಡಿತಕ್ಕೂ ಜನತೆಯ ಎಗ್ಗಿಲ್ಲದ ಸುಲಿಗೆಗೆ ಲೈಸೆನ್ಸ್ ಕೊಟ್ಟಂತೆಯೇ.

**ನೀರು ಸರಬರಾಜು ಖಾಸಗೀಕರಣಕ್ಕೂ ಸರಕಾರಗಳು ಉತ್ಸಾಹ ತೋರುತ್ತಿವೆಯಲ್ಲ..**

ಇದು ಇನ್ನೊಂದು ಮಹಾ ಮೂರ್ಖ ಕ್ರಮ. ಬಿಸಿಲಿನ ಝಳಕ್ಕೆ ನೂರಾರು ಜನರು ಸಾಯುತ್ತಿರುವಾಗ ಗುಟುಕು ನೀರಿಗಾಗಿ ಖಾಸಗಿ ಸೇವೆಯನ್ನು ಅವಲಂಬಿಸುವಂತೆ ಮಾಡುವುದು ಕೂಡ ಅತ್ಯಂತ ಅವಿವೇಕವಾಗುತ್ತದೆ, ಅಮಾನವೀಯವಾಗುತ್ತದೆ. ಇಲ್ಲೂ ಖಾಸಗಿಯವರು ಲಾಭದ ಮೇಲೆ ಕಣ್ಣಿಟ್ಟಿರುತ್ತಾರೆಯೇ ಹೊರತು ಸೇವೆ ಮನೋಭಾವ ಇರುವುದಿಲ್ಲ. ಜಲ ಖಾಸಗೀಕರಣದ ವಿರುದ್ಧ ಲ್ಯಾಟಿನ್ ಅಮೇರಿಕಾದಲ್ಲಿ ನಡೆದ ಬೃಹತ್ ಜನಾಂದೋಲನಗಳಿಗೆ ನಾವು ಕುರುಡಾಗಬಾರದು.

**ಅಂದರೆ, ಖಾಸಗೀಕರಣವೆಂದರೆ ಲಾಭಬಡುಕತನವೇ ಎನ್ನುವಿರಾ?**

ಹಾಗಲ್ಲದೇ ಮತ್ತಿನ್ನೇನು? ಯಾವನೇ ಒಬ್ಬ ಉದ್ಯಮಿ ಅಥವಾ ಬಹುರಾಷ್ಟ್ರೀಯ ಕಂಪನಿ ನಷ್ಟದಲ್ಲಿರುವ ಉದ್ಯಮವನ್ನು ಖರೀದಿಸಿದ್ದನ್ನು ನಾವು ಕಂಡಿದ್ದೇವಾ? ಸರಕಾರಗಳು ಲಾಭದಲ್ಲಿರುವ ಸರಕಾರಿ ಸ್ವಾಮ್ಯದ ಸಂಸ್ಥೆಗಳನ್ನೇ ಮಾರುತ್ತಿವೆ. ಉದಾಹರಣೆಗೆ ಭಾಲ್ಕೊ. ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಬಂಡವಾಳಶಾಹಿಗಳಿಗೆ ಮಾರಾಟ ಮಾಡುವ ಮೂಲಕ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ದೇಶದ ಕೈಗಾರಿಕೆಯ ಬುನಾದಿಯನ್ನೇ ನಾಶ ಮಾಡುತ್ತಿದೆ. ಇದರಿಂದ ಉದ್ಯೋಗಾವಕಾಶಗಳ ಮೇಲೆಯೂ ಪರಿಣಾಮ ಬೀರುತ್ತದೆ. ಇಷ್ಟು ಸಾಲದೆಂಬಂತೆ ಸರಕಾರಿ ಉದ್ಯೋಗಗಳ ಕಡಿತ, ನೇಮಕಕ್ಕೆ ತಡೆ ಮೊದಲಾದ ಕ್ರಮಗಳು ನಿರುದ್ಯೋಗ ಸಮಸ್ಯೆಯನ್ನು ಬಿಗಡಾಯಿಸುತ್ತಿದೆ. ಜನರ ಕೊಳ್ಳುವ ಶಕ್ತಿಯೂ ಇದರಿಂದ ಕುಸಿಯುತ್ತಿದೆ. ಉತ್ಪನ್ನಗಳು ಗೋದಾಮಿನಲ್ಲಿ ಕೊಳೆಯುತ್ತಿವೆ.ಇದೊಂದು ಸಮಸ್ಯೆಯ ವಿಷಚಕ್ರ. ಬಿಜೆಪಿಯದು ಸ್ವದೇಶ ಮಂತ್ರ ಅಷ್ಟೇ. ಕಾರ್ಯತಃ ಅದರದ್ದು ವಿದೇಶ ಪ್ರೇಮವೇ. ಆರ್ಥಿಕ ರಂಗ ಮತ್ತು ವಿದೇಶಾಂಗ ವಿಚಾರಗಳಲ್ಲಿ ದೇಶವನ್ನು ಅಮೇರಿಕದ ಪದತಲಕ್ಕೆ ಸಮರ್ಪಿಸುತ್ತಿರುವ ಎನ್‌ಡಿಎ ಸರಕಾರದ ಪರಿ ಆಘಾತಕಾರಿಯಾದುದು. **ಮಂತ್ರಕ್ಕಿಂತ ಉಗುಳೇ ಜಾಸ್ತಿ** ಎನ್ನುವ ಹಾಗೆ ಎನ್‌ಡಿಎ ಮಾತು ಜಾಸ್ತಿ. ಕೆಲಸ ಕಡಿಮೆ. ಬಿಜೆಪಿ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿದೆ.

**ಬಡತನ ಹಾಗೂ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ತುರ್ತು ಹಾಗೂ ಅಲ್ಪಕಾಲೀನ ಯೋಜನೆಯನ್ನೇನಾದರೂ ನೀವು ಸಲಹೆ ಮಾಡುತ್ತಿರಾ?**

ಖಂಡಿತಕ್ಕೂ, ಲಕ್ಷಾಂತರ ಟನ್ ಆಹಾರ ಧಾನ್ಯಗಳು ನಮ್ಮ ಗೋದಾಮುಗಳಲ್ಲಿ ಕೊಳೆಯುತ್ತಿವೆ. ಅವುಗಳ ನಿರ್ವಹಣೆಗೇ ಸರಕಾರ ನೂರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ನಿರುದ್ಯೋಗಿ ಯುವಜನರಿಗೆ ದಿನಕ್ಕೆ 8 ಗಂಟೆ ಕೆಲಸ ಒದಗಿಸಿ 5 ಕೆಜಿ ಆಹಾರ ಧಾನ್ಯ ಒದಗಿಸಿದರೆ ಉದ್ಯೋಗ ಸೃಷ್ಟಿಯೂ ಆಗುತ್ತದೆ. ಹಸಿವಿನ ಸಮಸ್ಯೆಯೂ ತಕ್ಕಮಟ್ಟಿಗೆ ನಿವಾರಣೆ ಯಾಗುತ್ತದೆ. ಅಭಿವೃದ್ಧಿ ಕಾಮಗಾರಿಗಳು ನಡೆದಂತಾಗಿ ಮಾನವಶಕ್ತಿಯ ಸದ್ಬಳಕೆ ಆಗುತ್ತದೆ. ಇಲ್ಲವಾದಲ್ಲಿ ಯುವಶಕ್ತಿಯನ್ನು ದುಷ್ಟಶಕ್ತಿಗಳು ಹಾದಿ ತಪ್ಪಿಸುವ ಅಪಾಯವಿದೆ.

**ಜಾಗತೀಕರಣದ ಭ್ರಮೆಯ ಗುಳ್ಳೆ ಒಡೆಯುತ್ತಿದೆ. ಸಾಮಾಜಿಕ ಸಂಘರ್ಷಕ್ಕೆ ಗಮನ.**

**ಸಮಸ್ಯೆ ಇಷ್ಟೊಂದು ಪ್ರಕೋಪಕ್ಕೆ ತಲುಪಿರುವಾಗ ಜನಪರ ಹೋರಾಟ ನಡೆಸುವ ಕಮ್ಯುನಿಸ್ಟರೇಕೆ ಬಲಗೊಳ್ಳುತ್ತಿಲ್ಲ?**

ಹೌದು. ಜನರಿಗೆ ಹೋರಾಟಕ್ಕೆ ಕೆಂಬಾವುಟ ಬೇಕು. ಆದರೆ, ರಾಜಕೀಯ-ಚುನಾವಣೆ ವಿಷಯ ಬಂದಾಗ ಹೆಚ್ಚಾಗಿ ಜಾತಿ, ಧರ್ಮದಂಥ ಸಾಮಾಜಿಕ ಅಂಶಗಳತ್ತ ಅವರ ಗಮನ ಹೋಗುತ್ತದೆ. ಆರ್ಥಿಕ ಸಮಸ್ಯೆಗಳನ್ನು ಬಳಸಿಕೊಂಡು ರಾಜಕೀಯ ಅರಿವಿನ ಮಟ್ಟವನ್ನು ಹೆಚ್ಚಿಸುವಲ್ಲಿನ ದೌರ್ಬಲ್ಯವೂ ಎಡ ಚಳವಳಿಯ ಒಂದು ಕೊರತೆಯಾಗಿದೆ. ಈ ದೌರ್ಬಲ್ಯವನ್ನು ನಿವಾರಿಸಬೇಕಾಗಿದೆ. ಜತೆಯಲ್ಲಿ, ವರ್ಗ ಸಂಘರ್ಷದ ಒಟ್ಟೊಟ್ಟಿಗೆ ಸಾಮಾಜಿಕ ಸಂಘರ್ಷಕ್ಕೂ ಹೆಚ್ಚಿನ ಗಮನಹರಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಆಗಲೇ ಈ ಪ್ರಕ್ರಿಯೇ ಆರಂಭವಾಗಿದೆ. ನಮ್ಮ ದೇಶದಲ್ಲಿ ಊಳಿಗಮಾನ್ಯ ಪದ್ಧತಿ ಈಗಲೂ ಪ್ರಬಲವಾಗಿದೆ. ಆಂಧ್ರದಲ್ಲಿ ಜಾತಿ-ಸಾಮಾಜಿಕ ಶೋಷಣೆಯ ವಿರುದ್ಧ ನಾವು ಬೀದಿಗಿಳಿದಾಗ ಮೇಲ್ಜಾತಿಯ ಜನರ ಕೆಂಗಣ್ಣಿಗೆ ಗುರಿಯಾಗಿದ್ದೇವೆ. ಸಾಮಾಜಿಕ ಸಂಘರ್ಷದಲ್ಲಿ ದಲಿತರು, ಹಿಂದುಳಿದವರು ಮೊದಲಾದ ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನರ ಸಂಘಟನೆಗಳ ಜತೆ ಕೆಲಸ ಮಾಡುತ್ತೇವೆ. ಅಂಥ ಸಂಘಟನೆಗಳೂ ನಮ್ಮ ಜತೆಗೆ ಬರುತ್ತಿವೆ. ಆಂಧ್ರದಲ್ಲಿ ಮಾದಿಗ ದಂಡೋರ ಸಂಘಟನೆ ಕೈಗೂಡಿಸಲು ಮುಂದಾಗಿದೆ.

**ಕೇಂದ್ರದಲ್ಲಿ ಎನ್‌ಡಿಎ ಅಧಿಕಾರದಲ್ಲಿ ಮುಂದುವರಿದಿರುವುದರಿಂದ ಅದರ ನಾಯಕ ಬಿಜೆಪಿ ಪ್ರಬಲವಾಗುತ್ತಿದೆ ಎಂದು ಅನಿಸುತ್ತಿದೆಯಾ?**

ಬಿಜೆಪಿ ಎಲ್ಲಾ ಕಡೆ ನೆಲೆ ಕಳೆದುಕೊಳ್ಳುತ್ತಿರುವುದನ್ನೇ ನಾವು ನೋಡುತ್ತಿದ್ದೇವೆ. ಉತ್ತರ ಪ್ರದೇಶದಲ್ಲಂತೂ ಇತ್ತೀಚಿನ ವಿಧಾನಸಭೆ ಚುನಾವಣೆಗಳಲ್ಲಿ ಅದು ಮೂರನೇ ಸ್ಥಾನಕ್ಕಿಳಿದದ್ದು ಅದರ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಭಾರತದ ಜನತೆ ಕೋಮುವಾದದ ಕುಟಿಲ ಆಟಾಟೋಪಗಳಿಗೆ ಅಷ್ಟು ಸುಲಭವಾಗಿ ಬಲಿ ಬೀಳುವುದಿಲ್ಲ.

**ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷಗಳ ವಿಲೀನದ ಸಂಭವವೇನಾದರೂ ಇದೆಯೆ?**

ವಿಲೀನವೆನ್ನುವುದು ಮೇಲಿನಿಂದ ಹೇರುವ ಪ್ರಕ್ರಿಯೆಯಾಗಬಾರದು. ಸುರ್ಜಿತ್-ಬರ್ದನ್ ಮಾತನಾಡಿದ ತಕ್ಷಣಕ್ಕೆ ವಿಲೀನ ಆಗದು. ಅದು ತಳಮಟ್ಟದಿಂದ ಮೇಲು ಹಂತದವರೆಗೂ ಮೂಡಿಬರಬೇಕಾದ ರಾಜಕೀಯ ಪ್ರಕ್ರಿಯೆ. ಜನಸಮುದಾಯ ಅನುಭವಿಸುತ್ತಿರುವ ಸಂಕಷ್ಟಗಳ ವಿರುದ್ಧ ಐಕ್ಯ ಚಳವಳಿಗಳನ್ನು ರೂಪಿಸುವಲ್ಲಿ ನಾವು ಯಶಸ್ವಿಯಾಗುತ್ತಿದ್ದೇವೆ. ಸದ್ಯ ಈ ಕೆಲಸ ಮುಂದುವರಿಯುವುದು ತುರ್ತು ಕಾರ್ಯಭಾ

# ಮೈಕೋ ಕಾರ್ಮಿಕರ ಸಂಘದ ಅಧ್ಯಕ್ಷರಾಗಿ ಕಾಂ। ವಿ.ಜೆ.ಕೆ.

1978 ರಿಂದ ಕಾಂ.ಸೂರಿಯವರ ನಾಯಕತ್ವದಲ್ಲಿ ಕಾರ್ಮಿಕರ ಕೆಲಸ ಭದ್ರತೆ, ಹಕ್ಕು ಬಾಧ್ಯತೆಗಳ ಪರವಾಗಿ ಹಾಗೂ ಶ್ರಮಭಾರದ ವಿರುದ್ಧವಾಗಿ ಹಲವಾರು ಹೋರಾಟಗಳನ್ನು ನಡೆಸಿದಾಗ ಆಡಳಿತ ವರ್ಗದ ಪಿತೂರಿ, ಸರ್ಕಾರ ಹಾಗೂ ಪೋಲೀಸ್ ದೌರ್ಜನ್ಯಗಳನ್ನು, ದಾಳಿ ದಬ್ಬಾಳಿಕೆಗಳನ್ನು ಎದುರಿಸಿ ಹಲವಾರು ಕಾರ್ಮಿಕರ ತ್ಯಾಗ, ಬಲಿದಾನಗಳ ಮೂಲಕ ಕಾರ್ಮಿಕ ವರ್ಗಕ್ಕೆ ಹೆಮ್ಮೆಯನ್ನು ತಂದುಕೊಟ್ಟು ಚರಿತ್ರೆಯಲ್ಲಿ ದಾಖಲೆಗಳನ್ನು ಏರ್ಪಡಿಸಿದ ಸಂಘ ಮೈಕೋ ಎಂಪ್ಲಾಯೀಸ್ ಅಸೋಸಿಯೇಶನ್.

ಈ ಸಂಘದ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ತಾ.1-7-2002 ರಂದು ಕಾಂ.ಸೂರಿವರು ಹಠಾತ್ತನೆ ನಿಧನರಾದಾಗ ಇನ್ನು ಮುಂದೆ ಏನು ಮಾಡುವುದೆಂಬ ಸಮಸ್ಯೆ ಕಾರ್ಮಿಕರ ನಡುವೆ ಉಂಟಾಯಿತು. ಕಾಂ.ಸೂರಿಯವರ ಹಾದಿ ಸಿಐಟಿಯುವಿನ ಹಾದಿ ಎಂಬುದನ್ನು ಅರಿತಿದ್ದ ಕಾರ್ಮಿಕರು ಸಿಐಟಿಯುವಿನ ಮಾರ್ಗದರ್ಶನ ಪಡೆದು ಚುನಾವಣಾ ಕಣದಲ್ಲಿ ಮುಂದುವರೆದು ತಾ.18-07-2002 ರಂದು ನಡೆದ ಚುನಾವಣೆಯಲ್ಲಿ ಜಯಶೀಲರಾಗಿದ್ದಾರೆ.

ಸಿಐಟಿಯುವಿನಿಂದ ಅಧ್ಯಕ್ಷರ ಸ್ಥಾನಕ್ಕೆ ಕರ್ನಾಟಕ ರಾಜ್ಯ ಸಿಐಟಿಯುವಿನ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ವಿ.ಜೆ.ಕೆ. ನಾಯರ್‌ರವರನ್ನು ಸೂಚಿಸಲಾಗಿದ್ದು ಅವರ ಪರವಾಗಿ ಶ್ರೀಯುತ ಹನುಮಂತರಾಯಪ್ಪನವರು ಸ್ಪರ್ಧಿಸುವುದೆಂದು ತೀರ್ಮಾನಿಸಲಾಗಿತ್ತು. ಸಂಘದ 7 ಪದಾಧಿಕಾರಿಗಳ, 22 ಕಾರ್ಯಕಾರಿ ಸಮಿತಿಯ ಸದಸ್ಯರ ಹಾಗೂ 80 ಜನರಲ್ ಕೌನ್ಸಿಲ್ ಸ್ಥಾನಗಳಿಗೆ ನಡೆದ ಈ ಚುನಾವಣೆಯಲ್ಲಿ 7 ಪದಾಧಿಕಾರಿಗಳನ್ನು, 11 ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಹಾಗೂ 45 ಜನರಲ್ ಕೌನ್ಸಿಲ್ ಸದಸ್ಯರನ್ನು ಪಡೆದು ಸಿಐಟಿಯು ಬೆಂಬಲಿಗರು ಚುನಾಯಿತರಾಗಿದ್ದಾರೆ.



ದಿನಾಂಕ.29-7-2002ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ಶ್ರೀಯುತ ಹನುಮಂತರಾಯಪ್ಪನವರು ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ನಂತರ ಕಾಂ.ವಿ.ಜೆ.ಕೆ.ನಾಯರ್ ರವರನ್ನು ಗೌರವ ಸದಸ್ಯರನ್ನಾಗಿ ಸೇರ್ಪಡೆ ಮಾಡಿ ನಂತರ ಅಧ್ಯಕ್ಷರ ಸ್ಥಾನಕ್ಕೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಇದು ಅಲ್ಲಿನ ವಿಧಾನ.

**ಪದಾಧಿಕಾರಿಗಳು**

ಕಾಂ. ವಿ.ಜೆ.ಕೆ.ನಾಯರ್ - ಅಧ್ಯಕ್ಷರು
ಕಾಂ.ಪಾಪಣ್ಣ - ಮೊದಲನೆ ಉಪಾಧ್ಯಕ್ಷರು
ಕಾಂ.ಆರ್.ವಿ.ಸತ್ಯಮೂರ್ತಿ - ಎರಡನೆ ಉಪಾಧ್ಯಕ್ಷರು
ಕಾಂ.ಟಿ.ಶಿವಶಂಕರ್ - ಪ್ರಧಾನ ಕಾರ್ಯದರ್ಶಿ
ಕಾಂ.ಎಸ್.ಟಿ.ಅರಸು - ಸಂಘಟನಾ ಕಾರ್ಯದರ್ಶಿ
ಕಾಂ.ರಾಮಚಂದ್ರಯ್ಯ ಸಹ ಕಾರ್ಯದರ್ಶಿ
ವಿಜಯ್‌ಭಾಸ್ಕರ್ - ಖಜಾಂಚಿ

ತಾ.30-7-2002 ರಂದು ಕಾರ್ಖಾನೆಯ ಒಳಗಡೆ ಅಧ್ಯಕ್ಷರು ಹಾಗೂ ಇತರ ಪದಾಧಿಕಾರಿಗಳಿಗೆ ಕಾರ್ಮಿಕರು ಆದರದ ಸ್ವಾಗತ ನೀಡಿದರು.

## ಬಿ.ಇ.ಎಲ್. ಸಂಘದ ಅಧ್ಯಕ್ಷರಾಗಿ ವಿ.ಜೆ.ಕೆ.ಆಯ್ಕೆ

ಜುಲೈ 31 ರಂದು ನಡೆದ ಭಾರತ್ ಇಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್‌ನ ವಿಶೇಷ ಸರ್ವಸದಸ್ಯರ ಸಭೆ ಕಾಂ. ವಿ.ಜೆ.ಕೆ.ನಾಯರ್‌ರವರನ್ನು ಸಂಘದ ಅಧ್ಯಕ್ಷರಾಗಿ ಆಯ್ಕೆ ಮಾಡಿದೆ. ಹಿರಿಯ ಕಾರ್ಮಿಕ ಮುಖಂಡ ಕಾಂ.ಸೂರ್ಯನಾರಾಯಣ ರಾವ್ ನಿಧನರಾಗಿರುವವರೆಗೆ ಸಂಘದ ಅಧ್ಯಕ್ಷರಾಗಿದ್ದರು.

ಸಂಘದ ಉಪಾಧ್ಯಕ್ಷ ಕಾಂ.ಸಿ.ವಿ.ಎಸ್.ರೆಡ್ಡಿ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಘದ ಇತರ ಪದಾಧಿಕಾರಿಗಳು

**ಉಪಾಧ್ಯಕ್ಷರುಗಳು:**
ಕಾಂ. ಮುನಿರೆಡ್ಡಿ, ಕಾಂ. ಎ.ಇ.ಸುಬ್ರಮಣ್ಯಂ, ಕಾಂ. ಭಾರತಿ ಚಂದ್ರಶೇಖರನ್

**ಪ್ರಧಾನ ಕಾರ್ಯದರ್ಶಿ:**
ಕಾಂ. ಎನ್.ಸುಕುಮಾರನ್ ಪಿಳ್ಳೆ

**ಸಂಘಟನಾ ಕಾರ್ಯದರ್ಶಿ :**
ಕಾಂ. ಎಸ್.ಮುನಿರಾಜ್

**ಕಾರ್ಯದರ್ಶಿಗಳು:**
ಕಾಂ. ಓಂ ಪ್ರಕಾಶ್, ಕಾಂ. ಮಹಬೂಬ್ ಅಲಿ, ಕಾಂ. ಪುಷ್ಪ ಎಸ್. ಮೂರ್ತಿ

**ಖಜಾಂಚಿ:**
ಕಾಂ. ಎ.ಬಸವರಾಜ್

# ಎಡರಂಗ ರೂಪುಗೊಂಡ ಇತಿಹಾಸ

ಪುಟ 8 ರಿಂದ

ಹಾಗೂ ಭಾರತದ ರಾಜಕೀಯವನ್ನು ಪ್ರಭಾವಕ್ಕೆ ಒಳಪಡಿಸುವುದಕ್ಕಾಗಿ ಹಣ ನೀಡಲಾಗಿದೆ.

ದುರದೃಷ್ಟವಶಾತ್ 1971ರ ಮಧ್ಯಂತರ ಚುನಾವಣೆ ನಂತರ ಯಾವುದೇ ಸಂಯುಕ್ತರಂಗ ರಚನೆಯಾಗಲಿಲ್ಲ. ಸಿಪಿಐ(ಎಂ) ಕೆಲವು ಸಣ್ಣ ಎಡ ಪಕ್ಷಗಳೊಂದಿಗೆ ಸೇರಿಸಿಕೊಂಡು ಸ್ಪರ್ಧಿಸಿತು. ಎಲ್ಲ ಕಾಂಗ್ರೆಸ್ ವಿರೋಧಿ ಪಕ್ಷಗಳು ಕೂಡಿ ಬಹುಮತ ಪಡೆಯಲಾಗಿತ್ತು. ಸಿಪಿಐ(ಎಂ) ಮೊದಲಬಾರಿಗೆ ವಿಧಾನ ಸಭೆಯಲ್ಲಿ ಏಕೈಕ ದೊಡ್ಡ ಪಕ್ಷವಾಗಿತ್ತು. ಆದರೂ ಆಗಿನ ರಾಜ್ಯಪಾಲರು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಎಲ್ಲಾ ನೈತಿಕ ಮೌಲ್ಯಗಳನ್ನು ಬದಿಗೊತ್ತಿ ಸಿಪಿಐ(ಎಂ)ನ್ನು ಸರಕಾರ ರಚಿಸಲು ಆಹ್ವಾನಿಸಲಿಲ್ಲ.

ಏತನ್ಮಧ್ಯೆ ಸಿಪಿಐ(ಎಂ) ರಾಜ್ಯದ 16 ಜಿಲ್ಲೆಗಳಲ್ಲಿ ಸಂಘಟನೆಯ ವಿಸ್ತರಣೆ ಪಡೆದಿತ್ತು. ಸಾಮೂಹಿಕ ಸಂಘಟನೆಗಳ ಮೂಲಕ ವಿವಿಧ ಜನ ವಿಭಾಗಗಳ ಸಂಬಂಧವನ್ನು ಪಡೆಯಲಾಗಿತ್ತು. ಅವರು ಹಲವು ಹೋರಾಟಗಳಿಗೆ ನಾಯಕತ್ವ ನೀಡಿದರು. ಇದು ಕಾಂಗ್ರೆಸ್ ಬೆದರುವಂತೆ ಮಾಡಿತು. ಕೊನೆಗೆ 1972ರ ಚುನಾವಣೆಯಲ್ಲಿ ಭಾರಿ ರಿಗ್ಗಿಂಗ್ ನಡೆಯಿತು. ನಮ್ಮ ಪಕ್ಷ ಕೆಲವು ಸ್ಥಾನಗಳಲ್ಲಿ ಗೆದ್ದರು. ಆದರೆ ಆ ಶಾಸಕರು ಪ್ರಮಾಣ ವಚನ ಮಾಡಲಿಲ್ಲ. ಇದು ನಾವು ತೆಗೆದುಕೊಂಡ ತತ್ವಬದ್ಧ ನಿಲುಮೆಗಳಲ್ಲಿ ಒಂದು ಅಪರೂಪದ ಅನುಭವ. ರಾಜ್ಯದ ಕಾಂಗ್ರೆಸ್ ಕೇಂದ್ರ ಸರಕಾರದ ಸಹಾಯದಿಂದ ರಾಜ್ಯವನ್ನು ಸ್ವಾದೀನ ಪಡಿಸಿಕೊಂಡಿತು ಮತ್ತು ಸಿದ್ಧಾರ್ಥ ಶಂಕರರೇ ಮುಖ್ಯಮಂತ್ರಿ ಆದರು. ನಮ್ಮ ಪಕ್ಷವನ್ನು ಜನತೆಯಿಂದ ಮೂಲೆಗುಂಪು ಮಾಡಲು ಪ್ರಯತ್ನಿಸಲಾಯಿತು. ಆದರೆ ಅವರ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.


ನಾವು ನಮ್ಮ ನಿಲುಮೆಗೆ ಬದ್ಧವಾಗಿದ್ದವು. ಆದರೆ ಇತರ ಪಕ್ಷಗಳು ಸಂದರ್ಭಕ್ಕೆ ತಕ್ಕಂತೆ ಸ್ಪಂದಿಸಲಿಲ್ಲ, ಈ ರೀತಿಯ ಧೈರ್ಯದ ನಿಲುಮೆಯನ್ನು ತೆಗೆದುಕೊಂಡಿದ್ದು ಮುಖ್ಯವಾಗಿ ನಾವು ಶೋಷಿತ ಜನತೆಗಾಗಿ ಸಮಾಜವನ್ನೇ ಬದಲಿಸುವ ಉದ್ದೇಶದಿಂದ ಕೆಲಸ ಮಾಡುತ್ತಿರುವ ಕಾರಣದಿಂದಾಗಿ ಸಾಧ್ಯವಾಯಿತು. ಹಲವು ಸಂದರ್ಭಗಳಲ್ಲಿ ನಾವು ನಮ್ಮ ಪಕ್ಷದ ದಿನ ನಿತ್ಯ ಕೆಲಸಗಳನ್ನು ಮಾಡುವ ಚಳುವಳಿಗಳನ್ನು ನಡೆಸುವುದು ಬಹಳ ಕಷ್ಟಕರವಾಯಿತು. ಸರಕಾರಿ ಪ್ರೇರಿತ ಭಯೋತ್ಪಾದಕ ಭೀತಿ ಉಂಟು ಮಾಡಿದ್ದರೂ ನಾವು ಜನತೆಯ ಹಿತಾಸಕ್ತಿಗಾಗಿ ನಮ್ಮ ಹೋರಾಟದ ಕರ್ತವ್ಯವನ್ನು ಕೈಬಿಡಲಿಲ್ಲ, 1972ರಲ್ಲಿ ಅರೆಫ್ಯಾಸಿಸ್ಟ್ ಬೆದರಿಕೆ ನಡುವೆ ಚಳುವಳಿ ಜೀವಂತವಾಗಿರಲು ಪಕ್ಷ ಹಲವು ತಂತ್ರಗಳನ್ನು ಮಾಡಬೇಕಾಯಿತು. ಈ ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯ ಕಾಲಾವಧಿಯಲ್ಲಿ 80 ಸಾವಿರ ಸುಳ್ಳು ಕೇಸುಗಳನ್ನು ನಮ್ಮ ಮೇಲೆ ಹೂಡಲಾಯಿತು. 20 ಸಾವಿರ ಕುಟುಂಬಗಳು ಮನೆಮಠ ಕಳೆದುಕೊಂಡು ಬೀದಿಗೆ ಬಿದ್ದರು. 350 ಕಾರ್ಮಿಕ ಸಂಘಗಳ ಕಛೇರಿಗಳನ್ನು ಕಬ್ಜಾ ಮಾಡಲಾಯಿತು, 927 ಶಿಕ್ಷಕರನ್ನು ಅವರ ಕರ್ತವ್ಯಕ್ಕೆ ಹಾಜರಾಗಲು ಅಡ್ಡಿಪಡಿಸಲಾಯಿತು. ವಿದ್ಯಾರ್ಥಿಗಳ ಸಂಘಟನಾ ಹಕ್ಕನ್ನೇ ನಿರಾಕರಿಸಲಾಯಿತು. ಕಾಂಗ್ರೆಸ್ಸಿನ ಈ ಎಲ್ಲಾ ಅಧಿಕಾರಶಾಹಿ ಧಾಳಿಗಳನ್ನು ಪ್ರಬಲವಾಗಿ ಸಿಪಿಐ(ಎಂ) ಪ್ರತಿಭಟಿಸಿತು. ಕಾಂಗ್ರೆಸ್ ಸರಕಾರದ ಬೆಂಬಲಿತ ಗೂಂಡಾಗಳ ಧಾಳಿಯಲ್ಲಿ 1400 ಕಾರ್ಯಕರ್ತರು ಮತ್ತು ಮುಖಂಡರು ಪ್ರಾಣ ತ್ಯಾಗ ಮಾಡಬೇಕಾಯಿತು.

ಗ್ರಾಮಗಳಲ್ಲಿ ಕೃಷಿಕೂಲಿಕಾರರ ಕೂಲಿಯ ಹೆಚ್ಚಳಕ್ಕಾಗಿ ಹೋರಾಟಗಳನ್ನು ಸಂಘಟಿಸಲಾಯಿತು. ವಿಯಟ್ನಾಂ ಮೇಲೆ ಸಾಮ್ರಾಜ್ಯಶಾಹಿ ಧಾಳಿಗಳನ್ನು ವಿರೋಧಿಸಿ ನಗರಗಳಲ್ಲಿ ಅಸಂಖ್ಯಾತ ಮೆರವಣಿಗೆ ಪ್ರತಿಭಟನೆಗಳು ನಡೆದವು. 1975ರಲ್ಲಿ ಇಡೀ ಭಾರತದಲ್ಲಿ ಇಂದಿರಾಗಾಂಧಿ 'ತುರ್ತು ಪರಿಸ್ಥಿತಿ' ಹೇರಿದರು. ಅದಕ್ಕೂ ಮುಂಚಿತವಾಗಿಯೇ 1972ರಿಂದಲೂ ಪಶ್ಚಿಮ ಬಂಗಾಳದಲ್ಲಿ ಈ ಪರಿಸ್ಥಿತಿ ನೆಲೆಗೊಂಡಿತ್ತು. ಎಮರ್ಜನ್ಸಿಯನ್ನು ಹಿಂದೆ ಪಡೆದ ನಂತರ 1977ರಲ್ಲಿ ಲೋಕಸಭಾ ಚುನಾವಣೆಗಳು ನಡೆದವು. ಅದರಲ್ಲಿ ಮೊದಲಬಾರಿಗೆ ಕಾಂಗ್ರೆಸ್ ಅಲ್ಪಮತಕ್ಕೆ ತಳ್ಳಲ್ಪಟ್ಟಿತು. ಕೇಂದ್ರದಲ್ಲಿ ಮೊರಾರ್ಜಿ ನೇತೃತ್ವದ ಜನತಾ ಸರಕಾರ ಅಧಿಕಾರಕ್ಕೆ ಬಂತು.

ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳು ಎಡರಂಗವನ್ನು ರಚಿಸಿಕೊಂಡು ಚುನಾವಣೆಗೆ ಸ್ಪರ್ಧಿಸಿ ಜನತಾಪಕ್ಷ ಒಳಗೊಂಡಂತೆ 42 ಸ್ಥಾನ ಪಡೆಯಲಾಯಿತು. ಆ ಸಂದರ್ಭದಲ್ಲಿ ಜನತೆಯ ಪ್ರಜಾಪ್ರಭುತ್ವೀಯ ಹಕ್ಕುಗಳ ರಕ್ಷಣೆಯ ಕರೆಯನ್ನು ನೀಡಲಾಯಿತು ಹಾಗು ಜನತಾ ಪಕ್ಷಕ್ಕೆ 22 ಸ್ಥಾನ ಬಿಟ್ಟುಕೊಡಲಾಗಿತ್ತು. ಅವರು ಸ್ಪರ್ಧಿಸಿದ ಎಲ್ಲಾ ಸ್ಥಾನಗಳನ್ನು ಗೆದ್ದಿದ್ದಾರೆ.

ಕಾಂಗ್ರೆಸ್ ಮೂಲೋಚ್ಛಾಟನೆ ಆದಕಾರಣ ಜನರಲ್ಲಿ ಎಲ್ಲಿಲ್ಲದ ಉಲ್ಲಾಸ ಉತ್ಸಾಹ ಉಂಟಾಯಿತು. ಹೋರಾಟಗಳಲ್ಲಿ ಭಾಗವಹಿಸಿದ ಜನತೆ ಉಸಿರುಗಟ್ಟುವ ರಾಜಕೀಯ ವಾತಾವರಣವನ್ನು ಕೊನೆಗೊಳಿಸಲು ಮತ್ತಷ್ಟು ದೃಢವಾಗಿ ಶ್ರಮಿಸತೊಡಗಿದರು. ವಿಧಾನಸಭೆ ಚುನಾವಣೆಗಳು ಪ್ರಕಟವಾದವು. ಜನತಾಪಕ್ಷ ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಯಲ್ಲಿ ಎಡರಂಗವನ್ನು ತನ್ನ ಕಿರಿಯ ಪಾಲುದಾರನಾಗಿ ಪರಿಗಣಿಸಿ ಶೇ. 60 ಸ್ಥಾನಗಳಲ್ಲಿ ಸ್ಪರ್ಧೆ ಮಾಡುವುದಾಗಿ ಕೇಳಿತು. ಹತ್ತು ಹಲವು ಸುತ್ತು ಚರ್ಚೆಗಳು ನಡೆದವು. ಕೊನೆಗೆ ಜನತಾಪಕ್ಷ ಶೇ. 52 ಸ್ಥಾನಗಳಲ್ಲಿ ಹಾಗೂ ಎಡರಂಗ ಶೇ. 8 ಸ್ಥಾನಗಳಲ್ಲಿ ಸ್ಪರ್ಧಿಸಲು ಸೂಚನೆ ನೀಡಿತು. ಆದರೆ ಜನತಾ ಪಕ್ಷ ಈ ಉದಾರ ಸೂಚನೆಯನ್ನು ಒಪ್ಪಲಿಲ್ಲ. ಆಗ ಎಡರಂಗ ಎಲ್ಲಾ 294 ಸ್ಥಾನಗಳಲ್ಲಿ ಸ್ಪರ್ಧಿಸಲು ನಿರ್ಣಯಿಸಿತು. ಚುನಾವಣಾ ಸಂದರ್ಭದಲ್ಲಿ ಎಡರಂಗವು 36 ವಿಶಿಷ್ಟ ಕಾರ್ಯಕ್ರಮಗಳನ್ನು ಚುನಾವಣೆ ಪ್ರಣಾಳಿಕೆಯಲ್ಲಿ ಪ್ರಕಟಿಸಿತು. ತುಂಬಿ ತುಳುಕಿದ ಪತ್ರಿಕಾಗೋಷ್ಠಿಯಲ್ಲಿ ಎಡರಂಗದ ಅಧ್ಯಕ್ಷ ಕಾ। ಪ್ರಮೋದ್ ದಾಸ್ ಗುಪ್ತಾ ಅಧಿಕಾರಶಾಹಿ ಕಾಂಗ್ರೆಸನ್ನು ಹಾಗೂ ಛಿದ್ರಕಾರಿ ಜನತಾ ಪಕ್ಷವನ್ನು ಸೋಲಿಸಲು ಕರೆ ನೀಡಿದರು. ಎಡರಂಗ 243 ಸ್ಥಾನಗಳನ್ನು ಪಡೆಯಿತು ಮತ್ತು ಮೊದಲ ಬಾರಿಗೆ ಕಾಂ। ಜ್ಯೋತಿಬಸು ಮುಖ್ಯಮಂತ್ರಿಯಾಗಿ ಎಡರಂಗ ಸರಕಾರವು 21ನೇ ಜೂನ್ 1977ರಲ್ಲಿ ಅಧಿಕಾರಕ್ಕೆ ಬಂದಿತು. ಕಾಂ। ಜ್ಯೋತಿಬಸು ಅವರ ನಾಯಕತ್ವದಲ್ಲಿ ಎಡರಂಗವು ಸತತ ಐದು ಚುನಾವಣೆಗಳಲ್ಲಿ ಜಯಭೇರಿ ಬಾರಿಸಿತು. ಐದನೆ ಬಾರಿಯ ಅಧಿಕಾರದ ಕೊನೆಯ ದಿನಗಳಲ್ಲಿ ಸ್ವಯಂ ಪ್ರೇರಿತರಾಗಿ ಕಾಂ। ಜ್ಯೋತಿ ಬಸು ಅಧಿಕಾರ ತ್ಯಜಿಸಿ ಕಾಂ। ಬುದ್ಧದೇವ ಭಟ್ಟಾಚಾರ್ಯ ಹೊಸ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ○

## ಹುತಾತ್ಮ ಶ್ರೀನಿವಾಸ ಬಜಾಲ್ ನಿಧಿ




### ಇಲ್ಲಿಯವರೆಗಿನ ಸಂಗ್ರಹ ವಿವರ

| ಹೆಸರು | ಸಂಗ್ರಹವಾದ ಹಣ |
|---|---|
| ಕಳೆದ ವಾರ ಒಟ್ಟು | ರೂ. 6,694.00 |
| 1. ಕಾ.ಸೂರಿ ಶ್ರದ್ಧಾಂಜಲಿ ಸಭೆ ಬೆಂಗಳೂರಿನಲ್ಲಿ ಸಂಗ್ರಹ | 3,505-00 |
| ರಾಯಚೂರು DYFI ಸಭೆಗಳಲ್ಲಿ ಸಂಗ್ರಹ | |
| 2. ಹರಿವೆ ಗ್ರಾಮ ಘಟಕ | 60-00 |
| 3. ಜಾಲಹಳ್ಳಿ ಸಭೆ | 118-00 |
| 4. ಹಟ್ಟಿ ಸಮ್ಮೇಳನ | 50-50 |
| 5. ಸಿಂಧನೂರು ಸಭೆ | 65-00 |
| 6. ಗಂಗಾವತಿ ಸಭೆ | 40-00 |
| 7. ಬಳ್ಳಾರಿ ಜಿಲ್ಲಾ ಸಮಿತಿ ಸಭೆ | 120-00 |
| 8. ಕೆಜಿಎಫ್ DYFI ಜಾಥಾ ಉದ್ಘಾಟನಾ ಸಭೆಯಲ್ಲಿ | 258-00 |
| 9. ಡಿ.ಎನ್.ನಾಗಪ್ಪ ICEU, ಬೆಂ. | 201-00 |
| 10. ಗಣಪತಿ ಎಲೆಕ್ಟ್ರಿಕಲ್ಸ್ ಲಕ್ಷ್ಮಣ್‌ಕುಮಾರ್ ಕಡೆಯಿಂದ | 100-00 |
| 11. ನಾರಾಯಣಪುರ ಘಟಕ ಸಭೆಯಲ್ಲಿ | 25-00 |
| 12. DYFI ಬೆಂ.ಜಿಲ್ಲಾ ಸಮಿತಿ ಸಭೆಯಲ್ಲಿ | 80-00 |
| ಒಟ್ಟು | 4,622-50 |
| ಇದುವರೆವಿಗಿನ ಸಂಗ್ರಹ | 12,316-50 |

ಪೊವೆಲ್ ಹೇಳಿಕೆ - 'ಕಾಶ್ಮೀರ ಜಾಗತಿಕ ವಿವಾದ', 'ಚುನಾವಣೆಗೆ ಹೊರಗಿನ ವೀಕ್ಷಕರು'

# ಕಾಶ್ಮೀರದ ಬಗ್ಗೆ ಅಮೆರಿಕದ ನಿಜವಾದ ಧೋರಣೆ ಬಯಲು


ಅಪಾಯಕಾರಿ ಕೂಟ

**ಮೆರಿಕದ ವಿದೇಶಾಂಗ ಕಾರ್ಯದರ್ಶಿ ಕೊಲಿನ್ ಪೊವೆಲ್ ಜುಲೈ 28 ರಲ್ಲಿ ದೆಹಲಿಯಲ್ಲಿ ಕಾಶ್ಮೀರದ ಬಗ್ಗೆ ಅದು ಜಾಗತಿಕ ವಿವಾದ' ಮತ್ತು ಅಲ್ಲಿನ 'ಚುನಾವಣೆಗೆ ಅಂತರಾಷ್ಟ್ರೀಯ ವೀಕ್ಷಕರು'ಗಳಿಗೆ ಅವಕಾಶ ಮಾಡಿಕೊಡಬೇಕೆಂಬ ಹೇಳಿಕೆಯೊಂದಿಗೆ, ಕಾಶ್ಮೀರದ ಬಗ್ಗೆ ಅಮೆರಿಕದ ನಿಜವಾದ ಧೋರಣೆ ಬಟ್ಟಾಬಯಲಾಗಿದೆ. ಕಳೆದ ಐದು ದಶಕಗಳಿಂದ ಮೆರಿಕದ ನಿಜವಾದ ಉದ್ದೇಶ ಕಾಶ್ಮೀರದಲ್ಲಿ ಪೂರ್ಣಪ್ರಮಾಣದ ಹಸ್ತಕ್ಷೇಪ ಮಾಡುವುದು. ಆದರೂ ಅದನ್ನು ಹೇಳುವ ಧೈರ್ಯ ಮಾಡಿರುವುದು ಇದೇ ಮೊದಲು. ಈ ಗಂಭೀರ ಬೆಳವಣಿಗೆಯ ಪೂರ್ಣ ಜವಾಬ್ದಾರಿ ವಾಜಪೇಯಿ ಸರ್ಕಾರದ ಮೇಲಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆ ಕಾಪಾಡುವ ರೀತಿಯಲ್ಲಿ ಕಾಶ್ಮೀರದ ಸಮಸ್ಯೆಯನ್ನು ಮುತುವರ್ಜಿ ವಹಿಸುವುದರಲ್ಲಿ ವಿಫಲತೆ, ಪಾಕಿಸ್ತಾನದ ಬಗ್ಗೆ ಅಂಧ ವಿರೋಧ, ಅಮೆರಿಕದ ಬಗ್ಗೆ ಅಂಧ ಭಕ್ತಿ ಮತ್ತು ಕಾಶ್ಮೀರ ವಿವಾದ ಪರಿಹರಿಸುವಲ್ಲಿ ಪಾಕಿಸ್ತಾನದ ಮೇಲೆ ಒತ್ತಡ ಹೇರುವಂತೆ ಅಮೆರಿಕಕ್ಕೆ ಮತ್ತೆ ಮತ್ತೆ ಮನವಿ - ಈ ಗಂಭೀರ ಪರಿಸ್ಥಿತಿಗೆ ಕಾರಣ. ಈ ನಡುವೆ ಕಾಶ್ಮೀರವನ್ನು ಮೂರು ಭಾಗ ಮಾಡುವ ಆರೆಸ್ಸೆಸ್ ಪ್ರಸ್ತಾವ- ಸಂಘಪರಿವಾರದ ನಿಯಂತ್ರಣದಲ್ಲಿರುವ ವಾಜಪೇಯಿ ಸರ್ಕಾರ ಒಂದು ದಿನ ಹೆಚ್ಚಿದ್ದರೂ ರಾಷ್ಟ್ರೀಯ ಭದ್ರತೆಗೆ, ಸಾರ್ವಭೌಮತೆಗೆ ಅಪಾಯ. ಕಾಶ್ಮೀರದ ಸಮಸ್ಯೆ ಪರಿಹರಿಸುವ ಮಾತು ದೂರ ಉಳಿಯಿತು ಎನ್ನುತ್ತಾರೆ - ಕೊಲಿನ್ ಪೊವೆಲ್ ಹೇಳಿಕೆ ಬಗ್ಗೆ ಪ್ರತಿಸ್ಪಂದಿಸುತ್ತಾರೆ ಕಾಂ. ಸುರ್ಜಿತ್.**

ಕಾಶ್ಮೀರದಲ್ಲಿ ಹಸ್ತಕ್ಷೇಪ ಮಾಡಬೇಕೆಂಬುದು ಅಮೆರಿಕನ್ ಸಾಮ್ರಾಜ್ಯಶಾಹಿಯ ಐದು ದಶಕಗಳ ಹೆಬ್ಬಯಕೆ. 50 ರ ದಶಕದ ಮಧ್ಯಭಾಗದಲ್ಲಿ ಡಿಕ್ಸನ್ ಯೋಜನೆ' ಎಂಬ ಕುಖ್ಯಾತ ಪ್ರಯತ್ನ ನಡೆಸಿತ್ತು. ಜುಲೈ 28 ರಂದು ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಕಾಲಿನ್ ಪಾವೆಲ್ ಕಾಶ್ಮೀರದ ಬಗ್ಗೆ ಕೊಟ್ಟ ಪ್ರಚೋದಕ ಹೇಳಿಕೆಗಳೊಂದಿಗೆ ಅಮೆರಿಕದ ನಿಜವಾದ ಉದ್ದೇಶ ಬಟ್ಟಾಬಯಲಾಗಿದೆ. ಕಾಶ್ಮೀರ 'ಜಾಗತಿಕ ವಿವಾದ ವಿಷಯ' ಮತ್ತು ಅಲ್ಲಿ ನಡೆಯಲಿರುವ ಚುನಾವಣೆಗಳ ಬಗ್ಗೆ ಭರವಸೆ ಹುಟ್ಟಿಸಬೇಕಾದರೆ ಅಂತರ್ರಾಷ್ಟ್ರೀಯ ವೀಕ್ಷಕ'ರುಗಳಿಗೆ ಅವಕಾಶ ಮಾಡಿಕೊಡಬೇಕು ಎಂಬ ಪಾವೆಲ್ ಹೇಳಿಕೆ ತೀವ್ರ ಗಂಭೀರ ಬೆಳವಣಿಗೆ.

### ಇದು ಅಮೆರಿಕದ ಹಳೆಚಾಳಿ

ಇದರಲ್ಲಿ ಆಶ್ಚರ್ಯ ಪಡುವಂತಹದು ಏನಿಲ್ಲ. ಎಲ್ಲಾ ಕಡೆ ತನ್ನ ಮೂಗಿಗೆ ನೇರವಾಗಿ ನಡೆಯದಿದ್ದರೆ ನೇರ ಹಸ್ತಕ್ಷೇಪ ಮಾಡುವುದು, ಮುಕ್ತ ಮತ್ತು ನ್ಯಾಯಯುತ ಚುನಾವಣೆ'ಗೆ ಅನುವು ಮಾಡುವ ಹೆಸರಿನಲ್ಲಿ ಬೇರೆ ದೇಶಗಳ ಚುನಾವಣೆಯಲ್ಲಿ ಮೂಗು ತೂರಿಸುವುದು ಅಂಕಲ್ ಸ್ಯಾಮ್(ಅಮೆರಿಕ)ದ ಹಳೆ ಚಾಳಿಗಳಲ್ಲಿ ಒಂದು. ಯುಗೋಸ್ಲಾವಿಯಾದಲ್ಲಿ ಚುನಾಯಿತ ಸರ್ಕಾರವನ್ನು ಅಂತರ್ರಾಷ್ಟ್ರೀಯ ಕಾನೂನಿನ ವಿರುದ್ಧವಾಗಿ ಉರುಳಿಸಿ, ಆಮೇಲೆ ನಡೆದ ಚುನಾವಣೆಯಲ್ಲಿ ತಾನು ಹೇಳಿದಂತೆ ಕುಣಿಯುವ ಸರ್ಕಾರ ಬರುವಂತೆ ಪೂರ್ವ ಹಸ್ತಕ್ಷೇಪ ಮಾಡಿದ್ದು ಇತ್ತೀಚಿನ ಉದಾಹರಣೆ. ಸದ್ಯದಲ್ಲೇ ನಡೆಯಲಿರುವ ಅಫಘಾನಿಸ್ತಾನದ ಚುನಾವಣೆಗಳಲ್ಲಿ ಇದೇ ರೀತಿಯಲ್ಲಿ ಮೂಗು ತೂರಿಸುವ ಸಿದ್ಧತೆ ಈಗಾಗಲೇ ನಡೆದಿದೆ.

ಎಂತಹ ವಿಪರ್ಯಾಸ! ಚುನಾವಣೆಗಳಲ್ಲಿ ಭರವಸೆ ಮೂಡಿಸುವ ಬಗ್ಗೆ ಈ ಬಿಟ್ಟಿ ಸಲಹೆ ಬರುತ್ತಿರುವುದು ಯಾರಿಂದ? ಇಡೀ ಜಗತ್ತಿಗೆ ಗೊತ್ತಿದೆ. ಅಮೆರಿಕದ ಅಧ್ಯಕ್ಷ ಬುಶ್‌ರ ಚುನಾವಣೆಯಲ್ಲಿ ನಡೆದ ವ್ಯಾಪಕ ಗೋಲ್‌ಮಾಲ್‌ಗಳ ಬಗ್ಗೆ. ಅಂತಹ ಅಧ್ಯಕ್ಷನ ಪ್ರತಿನಿಧಿಯಿಂದ ಈ ಸಲಹೆ - ಎಂತಹ ವಿಪರ್ಯಾಸ!

ಇನ್ನು ಕಾಶ್ಮೀರದಲ್ಲಿ ರಾಜಕೀಯ ಖೈದಿಗಳ ಬಗ್ಗೆ. ಇದೂ ಕೇಂದ್ರಸರ್ಕಾರ, ಆ ರಾಜ್ಯದ ಸರ್ಕಾರ ಮತ್ತು ಹುರಿಯತ್ ಕಾನ್ಫರೆನ್ಸ್‌ನ ವಿವಿಧ ನಾಯಕರ ನಡುವೆ ಮಾತುಕತೆಯ ವಿಷಯ. ಕಾಶ್ಮೀರದಲ್ಲಿ ಕದನವಿರಾಮದ ಜತೆ ಇಂತಹ ಮಾತುಕತೆ ಆರಂಭವಾಗಬೇಕು. ಭಾರತದ ಐಕ್ಯತೆ ಬಗ್ಗೆ ನಂಬಿಕೆ ಇರುವವರೆಲ್ಲ ಚುನಾವಣೆಯಲ್ಲಿ ಭಾಗವಹಿಸುವ ವಾತಾವರಣ ಮೂಡಿಸಬೇಕು ಎಂದು ಹೇಳುತ್ತಾ ಬಂದಿದೆ. ಇಲ್ಲೂ ಅಮೆರಿಕಕ್ಕೆ ಈ ಉಸಾಬರಿಯ ಅಗತ್ಯ ಇಲ್ಲ. ಭಾರತಕ್ಕೆ ಬಿಟ್ಟಿ ಸಲಹೆ ನೀಡುವ ಅಮೆರಿಕ, ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಚುನಾವಣೆಗಳಲ್ಲಿ ಜೆಕೆಎಲ್‌ಎಫ್ ಭಾಗವಹಿಸುವುದನ್ನು ಪ್ರತಿಬಂಧಿಸಿದಾಗ ಎಲ್ಲಿಗೆ ಹೋಗಿದ್ದರು? ಈ ಎರಡು ನಾಲಿಗೆ ಏತಕ್ಕೆ?

### ಕಾಶ್ಮೀರ ಸಮಸ್ಯೆ ಅಂತರ್ರಾಷ್ಟ್ರೀಯಕರಿಸಿದ ಅಡ್ವಾಣಿ

ಪೊವೆಲ್ ಇಂತಹ ಗಂಭೀರ ಹೇಳಿಕೆಗಳನ್ನು ದೆಹಲಿಯಲ್ಲೇ ಕೊಡುವ ಧೈರ್ಯ ಮಾಡಿದ್ದು ಮತ್ತು ಅದಕ್ಕೆ ಸರ್ಕಾರದ ಪ್ರತಿಕ್ರಿಯೆ ಒಂದು ವಿಷಯ ಸ್ಪಷ್ಟವಾಗಿ ತೋರಿಸುತ್ತದೆ. ವಾಜಪೇಯಿ ಸರ್ಕಾರದ ಕೈಯಲ್ಲಿ ದೇಶದ ಐಕ್ಯತೆ, ಸಮಗ್ರತೆ ಮತ್ತು ಸಾರ್ವಭೌಮತೆಗೆ ಯಾವ ಗ್ಯಾರಂಟಿಯೂ ಇಲ್ಲ ಅಂತ. 50 ವರ್ಷಗಳ ನಂತರ ಧೈರ್ಯ ಮಾಡಿ ಕಾಶ್ಮೀರದಲ್ಲಿ ನೇರ ಹಸ್ತಕ್ಷೇಪ ಮಾಡಲು ತಮ್ಮ ಹೆಬ್ಬಯಕೆಯನ್ನು ವ್ಯಕ್ತಪಡಿಸಿದ್ದರ ಜವಾಬ್ದಾರಿ ಪೂರ್ತಿಯಾಗಿ ವಾಜಪೇಯಿ ಸರ್ಕಾರದ ಮೇಲೆ ಬೀಳುತ್ತದೆ. ದಕ್ಷಿಣ ಏಶ್ಯಾದಲ್ಲಿ ಅಮೆರಿಕದ 'ಕಾವಲುನಾಯಿ'ಯ ಸ್ಥಾನವನ್ನು ಪಾಕಿಸ್ತಾನದಿಂದ ಕಸಿದುಕೊಳ್ಳುವ ಪ್ರಯತ್ನವನ್ನು ಈ ಸರ್ಕಾರ ಸತತವಾಗಿ ಮಾಡುತ್ತಲೇ ಬಂದಿದೆ. ಮೇ 1998 ರಲ್ಲಿ ಕಾಶ್ಮೀರ ಸಮಸ್ಯೆ ಮತ್ತು ಭಾರತದ ಅಣ್ವಸ್ತ್ರ ಹೊಂದಿದ್ದದ ಬಗ್ಗೆ ಸಂಬಂಧ ಕಲ್ಪಿಸಿ ನೀಡಿದ ಅಡ್ವಾಣಿ ಹೇಳಿಕೆ ನೀಡಿದ ದಿನ, ಭಾರತಕ್ಕೆ ಮತ್ತು ಕಾಶ್ಮೀರಕ್ಕೆ ಕಪ್ಪು ದಿನ. ಈ ಹೇಳಿಕೆಯೇ ಕಾಶ್ಮೀರ ಸಮಸ್ಯೆಯ ಅಂತ್ರಾಷ್ಟ್ರೀಯಕರಣಕ್ಕೆ ನೇರ ಕಾರಣ.

ಎರಡೂ ದೇಶಗಳ ಶಾಂತಿಪ್ರಿಯ, ಪ್ರಜಾಸತ್ತಾತ್ಮಕ ಶಕ್ತಿಗಳ ಅಭಿಪ್ರಾಯಕ್ಕೆ ತದ್ವಿರುದ್ಧವಾದದ್ದು. ಎರಡೂ ದೇಶಗಳ ನಡುವೆ ಇರುವ ಸಮಸ್ಯೆಗಳನ್ನು ಉಭಯಂತ್ರ ಮಾತುಕತೆಗಳಿಂದ ಶಾಂತಿಯುತವಾಗಿ ಪರಿಹರಿಸುವುದು ಸಾಧ್ಯ ಮತ್ತು ಅಗತ್ಯ ಎಂಬುದು ಸಾರ್ವತ್ರಿಕ ಅಭಿಪ್ರಾಯ. ಇದನ್ನೇ 1972 ಭುಟ್ಟೋ-ಇಂದಿರಾ ಗಾಂಧಿ 'ಸಿಮ್ಲಾ ಒಪ್ಪಂದ'ದಲ್ಲಿ ದಾಖಲಿಸಿದ್ದು. ಮೂರನೆಯವರಿಗೆ ಹಸ್ತಕ್ಷೇಪ ಮಾಡುವ ಅವಕಾಶವನ್ನು ಈ ಒಪ್ಪಂದ ತಡೆದಿತ್ತು. ಈವರೆಗೆ ಎರಡೂ ದೇಶಗಳ ನಡುವೆ ಯುದ್ಧ ನಡೆಯದಂತೆ ತಡೆಯುವುದರಲ್ಲಿ ಸಫಲವಾಗಿತ್ತು. ಕಾರ್ಗಿಲ್ ಘರ್ಷಣೆ ಸಹ ಸಿಮ್ಲಾ ಒಪ್ಪಂದದ ಮಹತ್ವ ಕಡಿಮೆ ಮಾಡುವುದಿಲ್ಲ.

ಸಿಮ್ಲಾ ಒಪ್ಪಂದದಲ್ಲಿ ಕಾಶ್ಮೀರವನ್ನು ಒಂದು ಉಭಯತ್ರ ಸಮಸ್ಯೆ ಎಂದು ದಾಖಲಿಸಲಾಗಿತ್ತು. ಪಾಕಿಸ್ತಾನದ ನಾಯಕರಿಗೆ ಈ ಸಮಸ್ಯೆ ಬಗೆಹರಿಸುವುದರಲ್ಲಿ ಆಸಕ್ತಿ ಇಲ್ಲದ್ದೂ ಮಾತ್ರವಲ್ಲ, ಬಿಜೆಪಿ ನಾಯಕರೂ ಆಕ್ರಮಣಕಾರಿ ಧೋರಣೆಯನ್ನು ತೋರಿಸುತ್ತಾ ಬಂದಿದ್ದಾರೆ. ಪಾಕಿಸ್ತಾನಕ್ಕೆ ಅಡ್ವಾಣಿಯವರ ಅಣ್ವಸ್ತ್ರದ ಬೆದರಿಕೆ ಈ ಧೋರಣೆಯ ಪರಾಕಾಷ್ಟೆ. ಪಾಕಿಸ್ತಾನ 'ಪೋಖ್ರಾನ್'ಗೆ 'ಚಾಗಾಯಿ ಬೆಟ್ಟ'ದ ಮಾರುತ್ತರ ಕೊಟ್ಟಿತು ಎಂಬುದು ಬೇರೆ ಮಾತು.

ಸಿಮ್ಲಾ ಒಪ್ಪಂದ ಆಗಿನ ಬಿಜೆಪಿ ಅವತಾರವಾಗಿದ್ದ ಜನಸಂಘಕ್ಕೂ, ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೂ - ಇಬ್ಬರಿಗೂ ಇಷ್ಟವಿರಲಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಇವರಿಬ್ಬರೂ ಆ ಒಪ್ಪಂದವನ್ನು ದ್ವೇಷಿಸುತ್ತಿದ್ದರು.

### ಪಾವೆಲ್‌ರ ಗುಟುರಿಗೆ ವಾಜಪೇಯಿ 'ಕುಂಯ್' ಕುಂಯ್

ಪಾವೆಲರ ಹೇಳಿಕೆ ಕಾಶ್ಮೀರ ಸಮಸ್ಯೆ ಪೂರ್ಣವಾಗಿ 'ಅಂತರ್ರಾಷ್ಟ್ರೀಯ'ಗೊಂಡಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಈ ಐದು ದಶಕಗಳಲ್ಲಿ ಅಸಾಧ್ಯವಾಗಿದ್ದ, ಈ 'ಕಷ್ಟದ'ಕೆಲಸ ಸಾಧಿಸಿದ್ದು ಬಿಜೆಪಿ ಮತ್ತು ಅದರ 'ರಿಮೋಟ್‌ಕಂಟ್ರೋಲ್' ಆರೆಸ್ಸೆಸ್‌ನ ಹೆಗ್ಗಳಿಕೆ. ಕುಂತರೆ ನಿಂತರೆ ಎಲ್ಲರಿಗೂ 'ದೇಶಪ್ರೇಮ' ವನ್ನು ಬೋಧಿಸುವ ಈ ನಾಯಕರು ದೇಶದ ಮಾನ ಕಳೆದಿದ್ದಾರೆ.

ಪೊವೆಲ್‌ನ ಹೇಳಿಕೆ ಬಗ್ಗೆ ಸರ್ಕಾರದ ಪ್ರತಿಕ್ರಿಯೆಯಂತೂ ಇನ್ನೂ ಆತಂಕಕಾರಿ. ಕಾಶ್ಮೀರದಲ್ಲಿ ಭಯೋತ್ಪಾದಕರ ನುಸುಳುವಿಕೆ ಇನ್ನೂ ನಿಂತಿಲ್ಲ ಎಂದು ದೆಹಲಿಯಲ್ಲಿ ಹೇಳಿಕೆ ನೀಡಿದ ಪೊವೆಲ್, ಇಸ್ಲಾಮಾಬಾದ್ ತಲುಪುತ್ತಿದ್ದಂತೆ ನುಸುಳುವಿಕೆ ಅಷ್ಟೇನೂ ಗಂಭೀರ ವಿಚಾರ ಅಲ್ಲವೆಂಬಂತೆ 'ಪ್ಲೇಟ್' ಬದಲಾಯಿಸಿದರು. ದೆಹಲಿ - ಇಸ್ಲಾಮಾಬಾದ್ ನಡುವೆ ಅರ್ಧ ಗಂಟೆಯಲ್ಲಿ ಈ ರೀತಿ ತದ್ವಿರುದ್ಧ ಹೇಳಿಕೆ ನೀಡುವುದು ಇದೇನು ಮೊದಲ ಸರಿಯಲ್ಲ. ಪೊವೆಲ್ ಮಾತ್ರವಲ್ಲ ಹಲವು ಅಮೆರಿಕನ್ ಉನ್ನತ ನಾಯಕರು ಇದೇ ರೀತಿ ಮಾಡಿದ್ದಾರೆ.

ಆದರೆ ಪಾವೆಲ್ ಗುಟುರಿಗೆ ವಾಜಪೇಯಿ ಪ್ರತಿಕ್ರಿಯೆ 'ಕುಂಯ್ ಕುಂಯ್' ಮಾತ್ರ.

ಪಾವೆಲ್‌ರ ಹೇಳಿಕೆಯನ್ನು ಸರ್ಕಾರ ಪ್ರಬಲವಾಗಿ ಖಂಡಿಸಲಿಲ್ಲ ಮಾತ್ರವಲ್ಲ, ಪಾವೆಲ್‌ರ ಜತೆಗೆ ಮಾತುಕತೆಯಲ್ಲೂ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಂತೆ ಕಂಡುಬರುವುದಿಲ್ಲ. ಪಾವೆಲರ ಎರಡೂ ಹೇಳಿಕೆಗಳನ್ನು ತಳ್ಳಿ ಹಾಕಿದರೂ -ಮೂರನೇ ದೇಶದ ಹಸ್ತಕ್ಷೇಪ, ಚುನಾವಣೆಗಳಿಗೆ ಅಂತರ್ರಾಷ್ಟ್ರೀಯ ವೀಕ್ಷಕರ ಸಲಹೆ ಒಪ್ಪಲಿಲ್ಲ. ಆದರೆ ಅದನ್ನು ತೀವ್ರವಾಗಿ ಖಂಡಿಸಲಿಲ್ಲ. ಆಮೇಲೆ ಪಾವೆಲ್ ಮತ್ತು ಯಶವಂತ ಸಿನ್ಹಾ ನಡುವೆ ನಡೆದ ಮಾತುಕತೆಯಲ್ಲೂ ಈ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಿದಂತೆ ಕಾಣಲಿಲ್ಲ. ಬದಲಾಗಿ 'ನಮಗೆ ಪಾವೆಲರ ಭೇಟಿಯ ಸಮಯದಲ್ಲಿ ಯಾವುದೇ ತಪ್ಪು ದಾಟಿ ಕಂಡುಬರಲಿಲ್ಲ' ಎಂದು ಸರ್ಟಿಫಿಕೆಟ್ ಕೊಟ್ಟರು.

ಪದೇ ಪದೇ 'ಪಾಕಿಸ್ತಾನದ ಮೇಲೆ ಒತ್ತಡ ಹಾಕಿ' ಎಂದು ಅಮೆರಿಕಕ್ಕೆ ದುಂಬಾಲು ಬೀಳುತ್ತಿದ್ದ ವಾಜಪೇಯಿ ಸರ್ಕಾರ, ಪಾವೆಲ್‌ರ ಹೇಳಿಕೆಗೆ ಹೇಗೆ ಪ್ರತಿಭಟಿಸೀತು? 'ಕಾಶ್ಮೀರ ವಿಷಯ'ದಲ್ಲಿ ತಾನು 'ವೈಯಕ್ತಿಕ ಆಸಕ್ತಿ' ತೆಗೆದುಕೊಳ್ಳುವುದಾಗಿ ಬಿಲ್‌ಕ್ಲಿಂಟನ್ ಮತ್ತು ಆಗಿನ ಪ್ರಧಾನಿ ನವಾಜ್ ಶರೀಫ್‌ರ ಜಂಟಿ ಹೇಳಿಕೆಯನ್ನು ನಮ್ಮ ಸರ್ಕಾರ, ಅದನ್ನು ವಾಷಿಂಗ್‌ಟನ್‌ನಲ್ಲಿ ಹೊರಡಿಸುವ ಮೊದಲೇ ವಾಜಪೇಯಿ ಕಣ್ಣುಮುಚ್ಚಿ ಒಪ್ಪಿದ್ದರು.

### ಕಾಶ್ಮೀರ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ

ಕಾಶ್ಮೀರ ಸಮಸ್ಯೆ ಭಾರತದ ಪ್ರಜಾಸತ್ತೆಯ ವಿಶಿಷ್ಟವಾದ ಸಮಸ್ಯೆ. ಈ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸುವುದು ಭಾರತದ ಪ್ರಜಾಸತ್ತೆಗೆ ಸತ್ವಪರೀಕ್ಷೆ ಇದ್ದಂತೆ. ಕಾಶ್ಮೀರಕ್ಕೆ ಕೊಟ್ಟಿದ್ದ ಸ್ವಾಯತ್ತತೆ ಕೇಂದ್ರ ಸರ್ಕಾರದ ಉಡುಗೊರೆ ಅಲ್ಲ. ಎರಡು ದೇಶಗಳ ಸಿದ್ಧಾಂತಕ್ಕೆ ಸವಾಲು ಹಾಕಿ, ಭಾರತ ಒಕ್ಕೂಟಕ್ಕೆ ಸೇರಿದ ಕಾಶ್ಮೀರದ ಜನತೆಯ ಮಹತ್ವದ ಪಾತ್ರಕ್ಕೆ ಸಂದ ಗೌರವ. ಇದಕ್ಕಾಗಿ ಕಾಶ್ಮೀರದ ಜನತೆ ಪಾಕಿಸ್ತಾನದ ಪಡೆಗಳನ್ನು ಹಿಮ್ಮೆಟ್ಟಿಸಿದರು. ಆಗಿನ ಮಹಾರಾಜನ ಮೇಲೆ ಒತ್ತಡ ತಂದರು. ಹಿಂದಿನಿಂದಲೂ ಕಾಶ್ಮೀರಕ್ಕೆ ವಿಶೇಷ ಸ್ವಾಯತ್ತತೆ ನೀಡುವ ಕಲಮು 370ನ್ನು ಮೊದಲಿನಿಂದ ವಿರೋಧಿಸುತ್ತಾ ಬಂದು, ಈ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ. ಅಧಿಕಾರ ವಹಿಸಿಕೊಂಡ ಮೇಲಾದರೂ ಬಿಜೆಪಿ ಕಾಶ್ಮೀರದ ಬಗ್ಗೆ ಜವಾಬ್ದಾರಿಯಿಂದ ವರ್ತಿಸೀತು ಎಂಬ ಕೆಲವರ ನಿರೀಕ್ಷೆ ಹುಸಿಯಾಗಿದೆ. (ನಮಗೆ ಅಂತಹ ಭ್ರಮೆ ಎಂದೂ ಇರಲಿಲ್ಲ). ಕಾಶ್ಮೀರವನ್ನು ಧರ್ಮದ ಆಧಾರದ ಮೇಲೆ ಮೂರು ಭಾಗ ಮಾಡುವ ಆರೆಸ್ಸೆಸ್ ಯೋಜನೆ, ರಾಜ್ಯದ ಸ್ವಾಯತ್ತತೆ ಬಗ್ಗೆ ಕಾಶ್ಮೀರ ವಿಧಾನಸಭೆ ಅಂಗೀಕರಿಸುವ ನಿರ್ಣಯ ಚರ್ಚೆ ಸಹ ಮಾಡದೆ ತಿರಸ್ಕರಿಸಿದ್ದು, ಈಗಲೂ ವಿಶೇಷ ಸಂಪರ್ಕಾಧಿಕಾರಿ ಅರುಣ್ ಜೈಟ್ಲಿ ಸಹ ಸ್ವಾಯತ್ತತೆ ಬಗ್ಗೆ ಚರ್ಚಿಸಲು ನಿರಾಕರಿಸಿದ್ದು - ಇವೇ ಸರ್ಕಾರದ 'ಸಾಧನೆಗಳು'!. ಇವು ಕಾಶ್ಮೀರ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿವೆ. ಇವೆಲ್ಲ ಕಾಶ್ಮೀರದ ಜನತೆಯಲ್ಲಿ ಇನ್ನಷ್ಟು ಪ್ರತ್ಯೇಕತಾ ಭಾವನೆ ಪ್ರಚೋದಿಸಲಿದ್ದು, ದೇಶದ ಐಕ್ಯತೆ, ಸಮಗ್ರತೆಗೆ ಅಪಾಯ ಒಡ್ಡಲಿದೆ.


ಈ ಅಪಾಯ ತಡೆಯಲು ಎಲ್ಲಾ ಶಾಂತಿ, ಪ್ರಜಾಸತ್ತೆ ಪ್ರಿಯರು ಬಲವಾದ ಪ್ರತಿರೋಧ ಸಲ್ಲಿಸಬೇಕು.

- ಶರತ್‌ಚಂದ್ರ

ಕಥೆ - ಗಿರೀಶ್ ಕಾರ್ನಾಡ್

*1992 ರಲ್ಲಿ ಅಯೋಧ್ಯಾದ ಬಾಬ್ರಿ ಮಸೀದಿ ಧ್ವಂಸಗೊಂಡ ಬಳಿಕ ದೇಶ ಹಲವಾರು ಏರು-ಪೇರುಗಳನ್ನು ಕಂಡಿದೆ. ಸೌಹಾರ್ದತೆ ಕದಡಿದೆ. ಶಬ್ದ-ಕಲ್ಪನೆಗಳ ಅರ್ಥವೂ ಬದಲಾಗಿದೆ. ಅನೇಕವು ತಿರುಗು-ಮುರುಗಾಗಿವೆ. ಇಂತಹ ಜೀವಂತ ನಿದರ್ಶನವೊಂದನ್ನು ತೆರೆದಿಟ್ಟಿದ್ದಾರೆ ಖ್ಯಾತ ನಾಟಕಕಾರ, ನಿರ್ದೇಶಕ*

**ಗಿರೀಶ್‌ಕಾರ್ನಾಡ್**



# ಅಳಿದಮೇಲೆ

ನನ್ನ ಕಡೆಗೆ ಕಣ್ಣು ಹಾಯಿಸಿದಾಗೆಲ್ಲ ರಿಝುವಿಯ ಕಣ್ಣಲ್ಲಿ ಒಂದು ತುಂಟ ನಗೆ ಕುಣಿಯುತ್ತಿತ್ತು. ಆದರೆ ಆ ನಗೆಯನ್ನು ಗುರುತಿಸಿ ನಾನೆಲ್ಲಿ 'ಏನಾಯ್ತು' ಯಾಕೆ ಈ ಪರಿ ಹುರುಪು?' ಎಂದು ಕೇಳಿ ಬಿಡುತ್ತೇನೋ ಎಂದು ಹೆದರಿದವನಂತೆ ಪ್ರತಿ ಸಲ ಕೂಡಲೆ ದೃಷ್ಟಿ ಇನ್ನೊಂದೆಡೆಗೆ ಹಾಯಿಸಿ ನಿರ್ದೇಶನದ ವಿವರಗಳಲ್ಲಿ ಮಗ್ನನಾಗುತ್ತಿದ್ದ. ಒಮ್ಮೆ ಮಾತ್ರ ನಗೆಯನ್ನು ಸ್ವಿಚ್ ಆಫ್ ಮಾಡಿ, ಗಂಭೀರವಾಗಿ

'ಡಾಯ್‌ಲೊಗ್ ರೆಡಿಯಾಯಿತೇನು'?

'ಉರ್ದೂ ಬಹಳ ಕಠಿಣ ಅನಿಸಿದರೆ ಹೇಳಿರಿ ತಿದ್ದತ್ತೇನೆ' ಎಂದ.

ಇದು ರಿಝುವಿಯ ಪದ್ಧತಿ: ಒಂದು ಮಹತ್ವದ ಸುದ್ದಿ ಹೇಳಬೇಕಾಗಿ ಬಂದರೆ ಅದಕ್ಕೆ ಅರ್ಥಪೂರ್ಣ ನೋಟದ, ಸೂಚ್ಯ ಮೌನದ, 'ನನಗೆ ಯಾಕೆ ಬೇಕಾಗಿತ್ತೀ ರಗಳೆ' ಎಂಬ ಉದ್ವೇಗದ ದೀರ್ಘ ಪೂರ್ವ ಪೀಠಿಕೆ ಕಟ್ಟಿ ಆ ಮೇಲೆ ದಿಢೀರನೆ ಶಬ್ದಗಳ ನಡುವೆ, ವಾಕ್ಯಗಳ ನಡುವೆ ಕೂಡ, ಉಸಿರಿಗೂ ಎಡೆಗೊಡದೆ ಸುದ್ದಿ ಸುರಿಯಬಿಡುತ್ತಾನೆ. ಶಿವರಾಮ ಕಾರಂತರಿಂದ ಮೊದಲನೇ ಪತ್ರ ಬಂದ ದಿನ ಅಂತೂ ಅವನ ಈ ನಗು - ನೋಟ - ಮೌನ - ಭ್ರುಕುಟಿಗಳ ಒಯ್ಯಾರ ತಲೆ ಕೆಡಿಸುವಷ್ಟು ವಿಪರೀತವಾಗಿತ್ತು. ಈ ಹೊತ್ತಿನ ಉತ್ಸಾಹಕ್ಕೆ ಕಾರಣವೇನು ಗೊತ್ತಾಗಬೇಕಾದರೆ ಕಾಯಬೇಕು. ಬೇರೆ ವಿಧಿ ಇರಲಿಲ್ಲ.

'ಲಂಚ್ ಬ್ರೇಕ್' ಹೊತ್ತಿಗೆ ಮನೆಯಿಂದಲೇ ಮಾಡಿಸಿಕೊಂಡು ಬಂದ ಮಟನ್ ದೋಪಿಯಾಝಾ ನನ್ನ ಮತ್ತು ಭೂಷಣನ ತಟ್ಟೆಯಲ್ಲಿ ಸುರಿಯುತ್ತ,

'ತಗೊಳ್ಳಿರಿ, ಗಿರೀಶ್, ಸ್ವತಃ ನನ್ನ ಹೆಂಡತಿ ಮಾಡಿದ್ದು.'ಅಳಿದ ಮೇಲೆ'ಗೆ ಫೈನಾನ್ಸ್ ಸಿಕ್ಕಿತು. ಇನ್ನು ಕೆಲಸ ಶುರು. ಟಿಫಿನ್ ಕೆರಿಯರ್‌ನಲ್ಲಿ ಒಂದು ತುಂಡು ಉಳಿದರೂ ನನ್ನ ಹೆಂಡತಿ ಆಕಾಶ-ಪಾತಾಳ ಒಂದು ಮಾಡುತ್ತಾಳೆ. ಭೂಷಣ್, ಈ ತುಂಡು-ನೋಡಿರಿ ನೀವು' ಎಂದು ಒಂದೇ ಉಸಿರಿನಲ್ಲಿ ಹೇಳಿಬಿಟ್ಟ. ಆದರೆ ಇಂಥದ್ದೇನಾದರೂ ಹುಡುಗಾಟ ಮಾಡುತ್ತಾನೆ ಎಂದು ಅಪೇಕ್ಷಿಸುತ್ತಿದ್ದ ನಾನು ಫಸಗಿ ಬೀಳಲಿಲ್ಲ.

'ಕಂಗ್ರಾಚ್ಯುಲೇಶನ್ಸ್! ಮಾರ್ವಲ್ಲಸ್!' ಎಂದು ಕೂಗಿದೆ. ರಿಝುವಿ ಖುಷಿಯಿಂದ ನಕ್ಕ.

'ಕೆ.ಪಿ. ಪ್ರಾಡಕ್ಷನ್ಸ್ ಒಪ್ಪಿದ್ದಾರೆ. ಅಂದರೆ ಈಗ ಶೂಟಿಂಗ್ ವ್ಯವಸ್ಥೆಗೆ ಅಣಿಯಾಗಬೇಕು. ಮಜಾ ಅಂದರೆ ಈ ಹೊತ್ತೇ ಕಾರಂತರಿಂದಲೂ ಪತ್ರ ಬಂದಿದೆ ಬಾ ಅಂತ. ಈ ಶೆಡ್ಯೂಲ್ ಮುಗಿದಗಳಿಗೆಗೆ ಶಾಲಿ-ಎಲ್ಲಿ ಅದು? -ಶಾ-' ಸಾಲಿಗ್ರಾಮ'

'ಹಾಂ. ಹೌದು. ಶಾಲಿಗ್ರಾಮಕ್ಕೆ ಹೋಗಿ ಬರತೇನೆ. ಕಾರಂತರು ಬಾ ಅಂದಿಲ್ಲ. ನಾನೇ ಬರತೇನೆ ಅಂತ ಹೇಳಿದೆ'.

'ರಿಝುವೀಜಿ, ಕಾರಂತರು ಸುಲಭವಾಗಿ ತೃಪ್ತರಾಗುವ ವ್ಯಕ್ತಿಯಲ್ಲ. ನೀವು ಅಂದದಕೆಲ್ಲ ಹೂಂ ಅಂತ ತಲೆದೂಗಿ ಬಿಡತಾರೆ ಅಂತ ತಿಳಕೋಬೇಡಿರಿ. ತಾನೇ ಸ್ಕ್ರಿಪ್ಟ್ ಬರೀತೇನೆ ಅಂದರೂ ಅನ್ನಬಹುದು.'

'ಹಾಗ್ಯಾಕಂತೀರಿ? ಅವರಿಂದ ಮೂರು ಪತ್ರ ಬಂದಿದವೆ. ಒಂದರಲ್ಲೂ ಒಂದು ಕರಾರು ಹಾಕಿಲ್ಲ' ಎಂದು ರಿಝುವಿ ವಾದ ಗೆದ್ದವನಂತೆ. 'ಅವರನ್ನ ಸಮಕ್ಷಮ ಕಂಡರೆ ಅವರನ್ನ ಹೇಗೆ ಚಿತ್ರಿಸಬಹುದು ಅನ್ನೋದರದೊಂದು ಐಡಿಯಾ ಬರಬಹುದು ಅಂತ ಹೋಗತಿದ್ದೇನೆ ಅಷ್ಟೆ' ಎಂದು ನಕ್ಕ.

'ನಾನು ಅವರನ್ನ ಚೆನ್ನಾಗಿ ಬಲ್ಲೆ. ನೀವೇನೂ ಕಾಳಜಿ ಮಾಡಬೇಕಾಗಿಲ್ಲ ಎಂದೆ.

ರಿಝುವಿಗೆ ಕಾರಂತರ ಮೇಲೆ ಎಷ್ಟು ಭಕ್ತಿ ಎಂದರೆ - 'ಅಂಥಾ ಕಾದಂಬರಿ, ಜನಾಬ್! ಒಳಗಿನಿಂದ ಬರಬೇಕು!' -ನನ್ನ ದನಿಯಲ್ಲೆಲ್ಲಾದರೂ ವ್ಯಂಗ್ಯದ ಸುಳಿವಿರಬಹುದೇನು ಎಂದು ಪರೀಕ್ಷಿಸುವವನಂತೆ ನನ್ನನ್ನೇ ದುರುಗುಟ್ಟಿ ನೋಡಿದ.

ರಿಝುವಿಯ ಅಣ್ಣ (ಈಗ ಅವನ ಸಂವಾದ ಲೇಖಕ ಕೂಡ) ಸುಪ್ರಸಿದ್ಧ ಭಾಷಾಂತರಕಾರ.

ಯಾವುದೋ ಪ್ರಕಾಶಕನ ಸಲುವಾಗಿ 'ಅಳಿದ ಮೇಲೆ' ಕಾದಂಬರಿಯನ್ನು ಉರ್ದು ಭಾಷೆಗೆ ಅನುವಾದಿಸಿದ್ದ. ಅದನ್ನೋದಿದಂದಿನಿಂದ ರಿಝುವಿಗೆ ಆ ಕಾದಂಬರಿಯ ಹುಚ್ಚು ಹಿಡಿದು ಬಿಟ್ಟಿತ್ತು.

'ನಿಜವಾಗಿ ಕೇಳಿದರೆ -- ಫಿಲ್ಮ್ ಆಗಬೇಕು. ಗಿರೀಶ್, ಎಂಥಾ ಅದ್ಭುತ ಕತೆ! ಆದರೆ ಹಿಂದಿಯಲ್ಲಿ ಯಾವ ಡಿಸ್ಟ್ರಿಬ್ಯೂಟರ್ ಬಡ್ಡೀಮಗನೂ ಅದನ್ನು ಮುಟ್ಟೋದಿಲ್ಲ. ಎಲ್ಲ ಅಸಂಸ್ಕೃತರು! ಆದ್ದರಿಂದ ಟೆಲಿಫಿಲ್ಮ್ ಮಾಡದೆ ಗತಿಯಿಲ್ಲ!' ಎಂದು ನಾಟಕೀಯವಾಗಿ ನಿಟ್ಟುಸಿರುಗರೆದ.

ನಾನು ರಿಝುವಿಯನ್ನು ಮೊದಲು ಭೆಟ್ಟಿಯಾದದ್ದು 1990ರಲ್ಲಿ. ಆ ದಿನ ಸ್ಪಷ್ಟವಾಗಿ ನೆನಪಿದೆ. ಏಕೆಂದರೆ ಅಂದು ಟಾಯೋಟಾ ರಾಮರಥವನ್ನೇರಿ ಸೋಮನಾಥದಿಂದ ಅಯೋಧ್ಯೆಗೆ ಹೊರಟ ಎಲ್.ಕೆ.ಅಡ್ವಾನಿಯನ್ನು ಬಿಹಾರದಲ್ಲಿ ಲಾಲೂ ಪ್ರಸಾದ್ ಯಾದವ್ ಕಡಗಾಣಿಸಿ ನಿಲ್ಲಿಸಿದ್ದ.

ರಿಝುವಿ ಬಂದದ್ದು ನನಗೊಂದು ಡಿಟೆಕ್ಟಿವ್ ಧಾರಾವಾಹಿಯಲ್ಲಿ ಪಾತ್ರ ಮಾಡು ಎಂದು ಕೇಳಿಕೊಳ್ಳಲಿಕ್ಕೆ. ಐದು ನಿಮಿಷದಲ್ಲೇ ನಾನು ಒಪ್ಪಿಗೆ ಕೊಟ್ಟು ಮಾತುಕತೆ ಮುಗಿಸಿ ಬಿಟ್ಟಿದ್ದರಿಂದ ಈತ ಈಗ ಹೋಗುತ್ತಾನೆ, ಇನ್ನೊಂದು ಐದು ನಿಮಿಷದಲ್ಲಿ ಹೋಗುತ್ತಾನೆ. ಅಂತ ನಾನು ಕಾಯ್ದರೆ, ರಿಝುವಿ ಕುರ್ಚಿ ಬಿಟ್ಟು ಏಳವಲ್ಲ. ಬೇರೆ ಬೇರೆ ವಿಷಯಗಳ ಬಗ್ಗೆ ಮಾತಾಡಿದ. ಲಾಲೂ ಪ್ರಸಾದನನ್ನು ಕುರಿತು 'ಹಿಂದುಳಿದ ಜಾತಿಯವರು- ಮುಸಲ್ಮಾನರು ಒಂದಾಗದಿದ್ದರೆ ಇಬ್ಬರಿಗೂ ಈ ದೇಶದಲ್ಲಿ ಉಳಿಗಾಲವಿಲ್ಲ. ಮೇಲು ವರ್ಗದ ಹಿಂದೂಗಳು ತಿಂದು ಹಾಕಿ ಬಿಡತಾರೆ' ಎಂದ. ತನ್ನ ಕುಟುಂಬದವರು ಪಾಕಿಸ್ತಾನಕ್ಕೆ ಹೋಗೋಣ ಎಂದಾಗ 'ಅಲ್ಲಿ ಹೋಗಿ ಯಾಕೆ ಒದಿಸಿಕೊಳ್ಳಬೇಕು?' ಎಂದು ತಾನು ಹೇಳಿದ್ದರ ಮೇಲೆ ವ್ಯಾಖ್ಯಾನ ಬಿಗಿದ. ಅದೇ ಪ್ರವಾಹದಲ್ಲಿ ಕನ್ನಡದ ಒಂದು ಕಾದಂಬರಿಯ ವಿಶ್ಲೇಷಣೆ ಆರಂಭವಾಯಿತು. ನನಗೆ ಅದರ ಉರ್ದೂ ಹೆಸರು ಗೊತ್ತಿಲ್ಲ. ಆತನಿಗೆ ಕನ್ನಡ ಹೆಸರು ಗೊತ್ತಿಲ್ಲ. ಆದರೆ ನಾನು 'ಅಳಿದ ಮೇಲೆ' ಕಾದಂಬರಿಯನ್ನು ಚಿತ್ರಿಸಲಿಕ್ಕೆ ಹಿಂದೊಮ್ಮೆ ಆಸೆ ಪಟ್ಟಿದ್ದರಿಂದ ಕೂಡಲೆ ಗುರುತು ಹಿಡಿದೆ. ರಿಝುವಿಯ ಬಗ್ಗೆ ಕುತೂಹಲವುಂಟಾಯಿತು.

ಕಾರಂತರ ವಿಳಾಸವೇನು? ಅವರು ಒಪ್ಪಿಕೊಳ್ಳುತ್ತಾರೆಯೇ? ಅವರಿಗೆ ಎಷ್ಟು ರಾಯಲ್ಟಿ ಕೊಡಬೇಕು? 'ಚಿತ್ರದಲ್ಲಿ ಕಾರಂತರ ಪಾರ್ಟು ನೀವು ಮಾಡಬೇಕು. ಯಶವಂತರಾಯರ ಪಾತ್ರಕ್ಕೆ ಅನಂತ ನಾಗ್' ಎಂದು ಘೋಷಿಸಿ ತಾನು ಇಂದು ಬಂದದಕ್ಕೆ ಆ ಡಿಟೆಕ್ಟಿವ್ ಧಾರಾವಾಹಿ ನೆಪ ಮಾತ್ರ, 'ಅಳಿದ ಮೇಲೆ'ಯನ್ನು ಚರ್ಚಿಸುವುದೇ ಮುಖ್ಯ ಉದ್ದೇಶವಾಗಿತ್ತು ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡ. ಆಗಿಂದಾಗ್ಗೆ ನನ್ನ ಕೈಯಿಂದ ಅನಂತ ನಾಗ್‌ಗೂ ಫೋನ್ ಮಾಡಿಸಿ, ಮಾತನಾಡಿಸಿ, ಒಪ್ಪಿಗೆ ಕೂಡ ಪಡೆದುಕೊಂಡ.

ಇಷ್ಟೆಲ್ಲಾ ಮಾತು ನಡೆದಾಗ ಶಿವರಾಮ ಕಾರಂತರು ಒಪ್ಪದಿದ್ದರೆ ಎಂಬ ಕಳವಳ ನಡುನಡುವೆ ತಲೆಯೆತ್ತುತ್ತಲೇ ಇತ್ತು. ಕರ್ನಾಟಕದಲ್ಲಿ ಎಂದೂ ಕಾಲಿಡದಿದ್ದ, ಕನ್ನಡ ಸಂಸ್ಕೃತಿ-ಸಾಹಿತ್ಯಗಳ ಗಂಧ - ಗಾಳಿಯಿಲ್ಲದ, ಉತ್ತರ ಪ್ರದೇಶದ ಯಾವುದೋ ಮೂಲೆ ಹಳ್ಳಿಯಿಂದ ಮುಂಬಯಿಗೆ ಬಂದು ಇಲ್ಲಿ ತೃತೀಯ ದರ್ಜೆಯ ಹಿಂದಿ ಗಲ್ಲಾ ಪೆಟ್ಟಿಗೆಯ ಚಿತ್ರಗಳನ್ನು ನಿರ್ದೇಶಿಸಿ ಹೊಟ್ಟೆ ಹೊರಕೊಳ್ಳುತ್ತಿದ್ದ ಈತನಿಗೆ ಚರ್ಚೆ - ಭೆಟ್ಟಿಯಿಲ್ಲದೆ ಕಾರಂತರು ಅನುಮತಿ ಕೊಡುತ್ತಾರೆ ಎಂದು ನಾನೂ ಎಣಿಸಿರಲಿಲ್ಲ.

ಆದರೆ ರಿಝುವಿಯ ಪತ್ರದಲ್ಲಿ ಆತನ ಭಕ್ತಿಯ, ಆತಂಕದ ಕಾವು ಕಾರಂತರಿಗೆ ತಟ್ಟಿರಬೇಕು. ಒಪ್ಪಿಕೊಂಡು ಬಿಟ್ಟರು. ರಿಝುವಿಗೆ ಖುಷಿಯೋ ಖುಷಿ.

### ಒಂದು ದಿನ

'ಈ ಕಾದಂಬರಿಯನ್ನು ತೆಗೆದುಕೊಂಡು ನೀವು ಒಂದು ಕನ್ನಡ 'ಕಲಾತ್ಮಕ' ಫಿಲ್ಮ್ ಮಾಡಬಹುದಲ್ಲ. ನೀವೇ ಮಾಡಿರಿ. ಮಾಡತೇನೆ ಅಂದರೆ ನಾನು ಹೇಗಾದರೂ ಫೈನಾನ್ಸ್ ತೆಗೆಸಿಕೊಡತೇನೆ' ಎಂದ.

ಆ ಪ್ರಶ್ನೆಗೆ ಉತ್ತರವೆಂಬಂತೆ ನಾನು, 'ನನ್ನ ಗೆಳೆಯ ಬಿ.ವಿ. ಕಾರಂತರು 'ಚೋಮನ ದುಡಿ' ಮಾಡಿದ್ದಾರಲ್ಲ' ಎಂದೆ.

'ಓಹೋ! ನೋಡಿಲ್ಲೇನು ನಾನು?' ಎಂದು ಮರು ಪ್ರಶ್ನೆ ಹಾಕಿದ.

ರಿಝುವಿ 'ಕಲಾತ್ಮಕ' ಕನ್ನಡ ಚಿತ್ರಪಟಗಳನ್ನು ಒಂದೂ ಬಿಡದೆ ನೋಡಿಟ್ಟಿದ್ದ. ಅವುಗಳನ್ನು ಕುರಿತು ಟಿಪ್ಪಣಿಗಳನ್ನೂ ಮಾಡುತ್ತಿದ್ದ. ಆದರೆ ನಿಜವಾ[...] ಆಸಕ್ತಿ ಆ ಚಿತ್ರಪಟಗಳಲ್ಲಾಗಲಿ ಅವುಗಳ[...] ಕಲಾತ್ಮಕತೆಯಲ್ಲಾಗಲಿ ಇರಲಿಲ್ಲ. 'ಅಳಿದ ಮೇಲೆ'ಗ[...] ಪ್ರಯೋಜನಕಾರಿ ಆಗುವಂಥ ಅಂಶಗಳೇನಾದರೂ[...] ಸಿಗುತ್ತಿವೆಯೋ ಎಂಬ ಹುಡುಕಾಟದಲ್ಲಿತ್ತು. 'ಘಟಶ್ರಾದ್ಧ' ನೋಡಿದ ದಿನವಂತೂ ಉತ್ಸಾಹ[...] ದಿಂದಲೇ ಫೋನ್ ಮಾಡಿದ.

'ಅಲ್ಲರೀ ಗಿರೀಶ್, ಬ್ರಾಹ್ಮಣರಲ್ಲಿ[...] ವಿಧವೆಯರಿಗೆ ಮುಂಡನ ಮಾಡತಿದ್ದರು. ಆದ್ದರಿಂದ[...] ನಮ್ಮ ಚಿತ್ರದಲ್ಲಿ ಬರೋ ಇಬ್ಬರು ವಿಧವೆಯರ[...] ತಲೆನೂ ಬೋಳಿಸಬೇಕು ಅಂತ ಅನ್ನತಿದ್ದರಲ್ಲ.[...] ನಾನು ಬೇಡ, ಆಗೋದಿಲ್ಲ, ನಮ್ಮ ಹಿಂದೀ[...] ಆಡಿಯನ್ಸ್ ಅದನ್ನೆಲ್ಲ ಒಪ್ಪೋದಿಲ್ಲ ಅಂದರೆ ನೀವು[...] 'ಅಂಥೆಂಟಿಸಿಟಿ'- 'ಅಥೆಂಟಿಸಿಟಿ' ಅಂದಿರಿ. ಈಗ[...] ನೋಡಿರಿ. 'ಘಟಶ್ರಾದ್ಧ'ದಲ್ಲಿ ವಿಧವೆ ಹುಡುಗಿಗ[...] ಕೂದಲು ಇವೆ. ಮುಂಡನ ಆಗೋದು ಆಕೆಗ[...] ಬಹಿಷ್ಕಾರ ಹಾಕಿದಾಗ, ಏನೆನ್ನತೀರೀಗ?'

ನಾನು ಉತ್ತರ ಕೊಡುವ ಪ್ರಯತ್ನ ಮಾಡಿದೆ-[...] ಅಂದರೆ ಅದರಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ.

(ಮುಂದುವರಿಯುವುದು)

### ಈ ನೆಲದ ಧಿಕ್ಕಾರ(ಲಾವಣಿ)

ಭಾರತ ದೇಶದ ಚರಿತ್ರೆಯೊಳಗ  
ನಡೆಯಿತು ಹಿಂಗೊಂದು ನರಮೇಧ  
ಗಾಂಧಿ ಹುಟ್ಟಿದ ರಾಜ್ಯದ ಒಳಗ  
ಗೋಡ್ಸೆ ಸಂತತಿಯ ಸರಕಾರ  
    ಬಾಯಲಿ ಮಂತ್ರ ಕೈಯಲಿ ಚಾಕು  
    ಸೇರಿತು ಕೊಲೆಗಡುಕರ ಪರುಸೆ  
    ಹೊಂಚುಹಾಕಿ ಹುಡುಕಾಡಿ ಕೊಂದರು  
    ಮುದುಕರು, ಮಕ್ಕಳು, ಹೆಂಗಸರ  
ಬಿದ್ದವು ಹೆಣಗಳು ಸಾವಿರಸಾವಿರ  
ಹರಿಯಿತು ರಕ್ತದ ಹೊಳೆಹಳ್ಳ  
ಹಾದಿಬೀದಿಯಲಿ ಗಲ್ಲಿ ಗಲ್ಲಿಯಲಿ  
ತಲೆ ಬುರುಡೆಗಳೇ ಅಲ್ಲೆಲ್ಲಾ  
    ಬೀದಿಗೆ ಎಳೆದು ಮಾನ ಕಳೆದರು  
    ಅತ್ಯಾಚಾರದಲಿ ಹೆಂಗಸರ  
    ಕಣ್ಣುಕಿವಿ, ಬಾಯಿ ಮುಚ್ಚಿ ಭಜನೆಯ  
    ಮಾಡ್ಯಾರ ರಾಜ್ಯದ ಪೋಲೀಸರು  
ಗುಡಿಸಲು ಜೋಪಡಿ ತಿನ್ನುವ ಅನ್ನಕೆ  
ಬೆಂಕಿಯನ್ನವರು ಇಟ್ಟಾರ  
ದ್ವೇಷದ ಜ್ವಾಲೆಯ ಉರಿಯಲಿ ಜನಗಳ  
ಸುಟ್ಟು ರಾಕ್ಷಸ ನಗೆ ನಕ್ಕಾರ  
    ಲಕ್ಷ ಲಕ್ಷ ಜನ ಬಿಟ್ಟಾರ ಊರು  
    ಬಟಾ ಬಯಲೇ ಅವರಿಗೆ ಸೂರು  
    ಬಟ್ಟೆ ಮಯ್ಯಿಗಿಲ್ಲ ಹೊಟ್ಟೆಗೆ ಹಿಟ್ಟಿಲ್ಲ  
    ಏನು ಹೇಳಿ ಸಂಕಟ ಗೋಳು  
ಕೊಂದರು ಗಾಂಧಿಯ,ಕೊಂದರು ಜನಗಳ  
ಕೊಂದರು ಶಾಂತಿ ನೆಮ್ಮದಿಯ  
ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿ  
ಮೆರೆದಾರ ಹಿಟ್ಲರ್ ಸಂಸ್ಕೃತಿಯ  
ಭಾಜಪ - ಭಾಜಪೇಯ್ ಭಲಾರೆ ಎಂದು  
ಬೆನ್ನು ತಟ್ಟ್ಯಾರ ಮೋದಿ ಸರ್ಕಾರಕ  
ಹೃದಯವಿಲ್ಲದ ಮೃಗಗಳೇ ನಿಮಗೆ  
ದೇಶವೆದ್ದು ಕೂಗ್ಯಾದ ಧಿಕ್ಕಾರ

- ಹುಲಿಕಟ್ಟಿ ಚನ್ನಬಸಪ್ಪ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ  
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,  
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH